ಪಟ್ಟಣ ಸಹಕಾರ

ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 13
ಸಂಚಿಕೆ : 3
ಜುಲೈ / ಆಗಸ್ಟ್ / ಸೆಪ್ಟೆಂಬರ್ 2025
ಪುಟಗಳು : 44

ಯುಪಿಐಗೆ ಪರ್ಯಾಯವಾಗಿ ಇ-ರೂಪಾಯಿ

ನೂತನ ಆದಾಯ ತೆರಿಗೆ ಮಸೂದೆ ಅಂಗೀಕಾರ



ಕ್ರೆಡಿಟ್ ಅಂಕ ಚೆನ್ನಾಗಿದ್ದವನೇ ಜಾಣ!

ಶತಮಾನದ ಸಂಭ್ರಮಾಚರಣೆಯೊಂದಿಗೆ, ಸಂತೃಪ್ತ ಸೇವೆ ಸಲ್ಲಿಸುತ್ತಿರುವ ಮೈಸೂರಿನ ರೈಲ್ವೆ - ಕೋ ಆಪರೇಟಿವ್ ಬ್ಯಾಂಕ್

ಬೆಳ್ಳಿ ಹಬ್ಬ ಸಂಭ್ರಮಿಸುತ್ತಿರುವ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ., ಬೀಳಗಿ

ಬೆಂಗಳೂರಿನ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ. – ನಡೆದು ಬಂದ ಹಾದಿಯ ಯಶೋಗಾಥೆ

ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕಿನ ರಜತ ಮಹೋತ್ಸವ ಕಾರ್ಯಕ್ರಮದ ಉದ್ಘಾಟನೆಯನ್ನು ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಆರ್.ಬಿ. ತಿಮ್ಮಾಪೂರ ನೆರವೇರಿಸಿದರು. ಈ ಸಂದರ್ಭದಲ್ಲಿ ಮ.ನಿ.ಜ. ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ. ಪಾಟೀಲ, ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಕಿಹೊಳಿ, ಕೃಷಿ ಮಾರುಕಟ್ಟೆ ಹಾಗೂ ಸಕ್ಕರೆ ಸಚಿವರಾದ ಶ್ರೀ ಶಿವಾನಂದ ಪಾಟೀಲ, ಆಹಾರ ನಾಗರಿಕ ಸರಬರಾಜು ಸಚಿವರಾದ ಶ್ರೀ ಕೆ.ಎಚ್. ಮುನಿಯಪ್ಪ, ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಎಸ್.ಆರ್. ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಕುರುಬರ ಸಹಕಾರ ಪತ್ತಿನ ಸಂಘದ ಶತಮಾನೋತ್ಸವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ.ಪಾಟೀಲ, ಸಿ.ಸಿ.ಪಾಟೀಲ, ರಹೀಂಖಾನ್, ಅಜ್ಜಂಪೀರ್‌ಖಾದ್ರಿ, ಜಿ.ಎಸ್. ಗಡ್ಡದೇವರಮಠ, ಎನ್.ಎಚ್.ಕೋನರೆಡ್ಡಿ, ರಾಮಕೃಷ್ಣ ದೊಡ್ಡಮನಿ, ಸಲೀಂ ಅಹಮ್ಮದ್, ಜಿ.ಎಸ್. ಪಾಟೀಲ, ಬಿ.ಆರ್. ಯಾವಗಲ್, ಡಿ.ಆರ್. ಪಾಟೀಲ, ರವಿ ದಂಡಿನ, ರುದ್ರಣ್ಣ ಗುಳಗುಳಿ, ಬಿ.ಬಿ. ಅಸೂಟಿ, ಐ.ಜಿ. ಸನದಿ ಇತರರು ಉಪಸ್ಥಿತರಿದ್ದರು.

ಮಹಾಮಂಡಳವು ದಿನಾಂಕ : 26.05.2025ರಂದು ಸಾಗರದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಭಂಡಾರಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ., ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಮತ್ತಿತರರು ಉಪಸ್ಥಿತರಿದ್ದರು.

ಸಂಪಾದಕೀಯ

ಆತ್ಮೀಯ
ಸಹಕಾರಿ
ಬಂಧುಗಳೇ...

▸▸ ಎಚ್.ಕೆ. ಪಾಟೀಲ

ಆರ್ಥಿಕ ಬೆಳವಣಿಗೆ ಕಳವಳ ಮೂಡಿಸುವಂತೆಯೂ ಇಲ್ಲ, ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ಸಮಾಧಾನಕರವಾಗಿಯೂ ಇಲ್ಲ

ಅಮೆರಿಕದ ಸುಂಕ ಸಮರದಿಂದಾಗಿ ಪ್ರಮುಖವಾಗಿ ಜವಳಿ, ಹರಳು, ಚಿನ್ನಾಭರಣ, ಚರ್ಮದ ಉತ್ಪನ್ನಗಳು, ರಾಸಾಯನಿಕಗಳು, ಕೃಷಿ, ವಾಹನದ ಬಿಡಿಭಾಗಗಳು ಸೇರಿ ಇತರೆ ಸರಕುಗಳ ವರಮಾನ ಮತ್ತು ಗಳಿಕೆಯ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ಅದೇ ವರದಿಯಲ್ಲಿ ಹೇಳಲಾಗಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ.6.3ಕ್ಕೆ ಇಳಿಯುವ ನಿರೀಕ್ಷೆಯಿದೆ ಎಂದು ಎಸ್‌ಬಿಐ ಅಧ್ಯಯನ ವರದಿಯೊಂದು ತಿಳಿಸಿದೆ. ಈ ಮುನ್ನ ಭಾರತೀಯ ರಿಸರ್ವ್ ಬ್ಯಾಂಕಿನ ಅಧ್ಯಯನ ವರದಿಗಿಂತಲೂ ಶೇ.6.5ಕ್ಕಿಂತಲೂ ಕಡಿಮೆಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಪ್ರಗತಿ ಶೇ6.8ರಿಂದ ಶೇ.7ರಷ್ಟಿರಲಿದೆ. ಎರಡನೇ ತ್ರೈಮಾಸಿಕದಲ್ಲಿ ಶೇ 6.5. ಮೂರನೇ ತ್ರೈಮಾಸಿಕದಲ್ಲಿ ಶೇ 6.3 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ. 6.1ರಷ್ಟಾಗಬಹುದು. ಖಾಸಗಿ ಬಂಡವಾಳ ವೆಚ್ಚ ಕಡಿಮೆ ಆಗಿರುವುದೇ ಪ್ರಗತಿ ಇಳಿಕೆಗೆ ಕಾರಣ ಎಂದು ಎಸ್‌ಬಿಐ ಹೇಳಿದೆ.

ಕಳೆದ ಆರ್ಥಿಕ ವರ್ಷಕ್ಕಿಂತಲೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚ ಕಡಿಮೆ ಆಗಿದೆ. ಅಲ್ಲದೆ, ಅಮೆರಿಕದ ಸುಂಕ ಹೇರಿಕೆಯು ಬಂಡವಾಳ ವೆಚ್ಚದ ಮೇಲೆ ಹೆಚ್ಚಿನ ಪರಿಣಾಮ ಬೀರುವ ಸಾಧ್ಯತೆಯಿದೆ. ಇದರಿಂದ ವೆಚ್ಚವು ಮತ್ತಷ್ಟು ಕಡಿಮೆ ಆಗಬಹುದು ಎಂದು ತಿಳಿಸಿದೆ. ಅಲ್ಲದೆ ಜುಲೈ 25ರ ವೇಳೆಗೆ ನಾನಾ ಬ್ಯಾಂಕುಗಳಲ್ಲಿನ ಸಾಲದ ಬೇಡಿಕೆ ಹಾಗೂ ನೀಡುವಿಕೆ ಪ್ರಮಾಣ ಶೇ.10ಕ್ಕೆ ಇಳಿದಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ಶೇ.13.7ರಷ್ಟಿತ್ತು.

ಅಮೆರಿಕದ ಸುಂಕ ಸಮರದಿಂದಾಗಿ ಪ್ರಮುಖವಾಗಿ ಜವಳಿ, ಹರಳು, ಚಿನ್ನಾಭರಣ, ಚರ್ಮದ ಉತ್ಪನ್ನಗಳು, ರಾಸಾಯನಿಕಗಳು, ಕೃಷಿ, ವಾಹನದ ಬಿಡಿಭಾಗಗಳು ಸೇರಿ ಇತರೆ ಸರಕುಗಳ ವರಮಾನ ಮತ್ತು ಗಳಿಕೆಯ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ಅದೇ ವರದಿಯಲ್ಲಿ ಹೇಳಲಾಗಿದೆ.

ಇರಲಿ, ಇದರ ನಡುವೆ ಹಣದುಬ್ಬರಕ್ಕೆ ಸಂಬಂಧಿಸಿದ ಅಂಕಿ ಅಂಶಗಳು ಈಗಿನ ಸಂದರ್ಭದಲ್ಲಿ ಹೆಚ್ಚು ಕಳವಳ ಮೂಡಿಸುವಂತೆ ಇಲ್ಲ ಎನ್ನುವುದು ಸಮಾಧಾನಕರ ವಿಷಯವಾಗಿದೆ. ಆದರೂ ಆರ್ಥಿಕ ಬೆಳವಣಿಗೆ ಕುರಿತ ಅಂದಾಜುಗಳು ತೀರಾ ಸಮಾಧಾನಕರವಾಗಿ ಇಲ್ಲವೆನ್ನುವುದನ್ನು ಗಮನಿಸಬೇಕಾಗಿದೆ. ಇಂದಿನ ಜಾಗತಿಕ ಸನ್ನಿವೇಶದ ಅನಿಶ್ಚಿತತೆಗಳು ಜಿಡಿಪಿ ಬೆಳವಣಿಗೆ ದರದ ಮೇಲೆ ಪರಿಣಾಮ ಬೀರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಅಮೆರಿಕಾ ದೇಶದ ಸುಂಕ ಸಮರದ ಫಲವಾಗಿ ದೇಶದ ಉದ್ಯಮ, ಉತ್ಪಾದನ, ಜವಳಿ ಇನ್ನಿತರ ವಲಯಗಳ ಮೇಲೆ ಪರಿಣಾಮ ಉಂಟುಮಾಡುವುದು ಖಚಿತ. ಈಗಾಗಲೇ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು 10 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಅರ್ಥ ವ್ಯವಸ್ಥೆಯ ಆರೋಗ್ಯವನ್ನು ಸೂಚಿಸುವ ತೆರಿಗೆ ಸಂಗ್ರಹವು ಬಹಳ ಧನಾತ್ಮಕವಾಗಿ ಇಲ್ಲ. ಹಣದುಬ್ಬರ ಪ್ರಮಾಣವು ತೀರಾ ಕಡಿಮೆ ಆಗಿರುವುದರಿಂದ ಕೂಡಲೆ ಕೇಂದ್ರ ಸರ್ಕಾರ ಆರ್ಥಿಕ ಬೆಳವಣಿಗೆಗೆ ಅಗತ್ಯ ಪ್ರೋತ್ಸಾಹ ನೀಡಲು ಮುಂದಾಗಬೇಕಿದೆ.

ದೇಶದ ಆರ್ಥಿಕ ಬೆಳವಣಿಗೆಯಾಗಬೇಕಿದ್ದರೆ, ಕೇಂದ್ರ, ರಾಜ್ಯ ಸರ್ಕಾರದೊಂದಿಗೆ ಖಾಸಗಿ ವಲಯದಿಂದಲ್ಲೂ ವಿವಿಧ ವಲಯಗಳ ಮೇಲಿನ ಹೂಡಿಕೆ ಹೆಚ್ಚಬೇಕಿದೆ. ಕೇಂದ್ರ ಸರ್ಕಾರ ಈ ವಿಷಯದಲ್ಲಿ ತಡ ಮಾಡದೇ ಅಗತ್ಯ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸುತ್ತೇನೆ.

ಒಳಪುಟಗಳಲ್ಲಿ...

ನೂತನ ರಾಷ್ಟ್ರೀಯ ಸಹಕಾರ ನೀತಿ – 2025 ಅನಾವರಣ 5

ಯುಪಿಐಗೆ ಪರ್ಯಾಯವಾಗಿ ಇ–ರೂಪಾಯಿ : ಈ ನೋಟುಗಳು ಕೊಳೆಯಾಗುವುದಿಲ್ಲ, ಕಳೆದುಹೋಗುವುದಿಲ್ಲ 6

ತ್ವರಿತ ಪಾವತಿ ಸೇವೆ ಶುಲ್ಕ ಹೆಚ್ಚಿಸಿದ ಎಸ್‌ಬಿಐ ಬ್ಯಾಂಕ್ : ಚಿಲ್ಲರೆ ಗ್ರಾಹಕರಿಗೆ ಶುಲ್ಕದ ಬಿಸಿ 9

ಅಮೆರಿಕದ ಶೇ.50ರಷ್ಟು ಸುಂಕ : ಭಾರತದ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆಯೇ? 10

ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್ : ಕಡ್ಡಾಯ ಕೈಬಿಡುವಂತೆ ಸಮಿತಿ ಶಿಫಾರಸು 11

ಬೆಳ್ಳಿ ಹಬ್ಬ ಸಂಭ್ರಮಿಸುತ್ತಿರುವ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ, ಬೀಳಗಿ 12

ಕ್ರೆಡಿಟ್ ಅಂಕ ಚೆನ್ನಾಗಿದ್ದವನೇ ಜಾಣ! 15

ರಾಜ್ಯದ ಪಟ್ಟಣ ಬ್ಯಾಂಕುಗಳ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ ಬೆಂಗಳೂರಿನ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., – ನಡೆದು ಬಂದ ಹಾದಿಯ ಯಶೋಗಾಥೆ 17

ಸರಕು ಮತ್ತು ಸೇವಾ ತೆರಿಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದು ಅಗತ್ಯ ಇದರಿಂದ ಸಣ್ಣ ಉದ್ದಿಮೆದಾರರಿಗೆ ನಷ್ಟವೇನೂ ಇಲ್ಲ 21

ಬ್ಯಾಂಕಿಂಗ್ ಉದ್ಯಮದಲ್ಲಿ ಹೀಗೊಂದು ಗ್ರಾಹಕ ಸ್ನೇಹಿ ಬೆಳವಣಿಗೆ 25

ರೈಲ್ವೆ ಉದ್ಯೋಗಿಗಳ ಆರ್ಥಿಕ ಸ್ವಾವಲಂಬನೆಯ ಪ್ರೇರಣಾ ಶಕ್ತಿ ನೌಕರರಿಗೆ ಉಪಯುಕ್ತ ಪಟ್ಟಣ ಸಹಕಾರ ಬ್ಯಾಂಕು ಎಂಬ ಹೆಗ್ಗಳಿಕೆ ತಂತ್ರಜ್ಞಾನ ಆಧಾರಿತ ಸೇವೆ, ಸದಸ್ಯರ ಸ್ವಾವಲಂಬನೆಗೆ ನೆರವು ಶತಮಾನದ ಸಂಭ್ರಮಾಚರಣೆಯೊಂದಿಗೆ, ಸಂತೃಪ್ತ ಸೇವೆ ಸಲ್ಲಿಸುತ್ತಿರುವ ಮೈಸೂರಿನ ರೈಲ್ವೆ – ಕೋ–ಆಪರೇಟಿವ್ ಬ್ಯಾಂಕ್ 28

ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು 31

ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 13 ಸಂಚಿಕೆ : 3

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಜುಲೈ / ಆಗಸ್ಟ್ / ಸೆಪ್ಟೆಂಬರ್ 2025

ಶ್ರೀ ಎಚ್.ಕೆ. ಪಾಟೀಲ
ಗೌರವಾಧ್ಯಕ್ಷರು

ಶ್ರೀ ಬಿ.ಎಸ್. ಪರಮಶಿವಯ್ಯ
ಉಪಾಧ್ಯಕ್ಷರು

ಶ್ರೀ ಮಂಡಲೀಕ ಎನ್. ಕೇರೂರೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

ಸಂಚಿಕೆ ನಿರ್ವಹಣೆ / ವಿನ್ಯಾಸ :
ವರ್ಣ ಕಮ್ಯೂನಿಕೇಷನ್

ಪ್ರಕಟಣೆ :
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

ದೂರವಾಣಿ :
080-22233662, 080-22279574

ಇ-ಮೇಲ್ :
editorkubf@gmail.com

ಅಂತರ್ಜಾಲ : www.kubfed.com

ಮುದ್ರಣ : ನವರತ್ನ ಪ್ರಿಂಟರ್ಸ್, ಬೆಂಗಳೂರು.

ನೂತನ ರಾಷ್ಟ್ರೀಯ ಸಹಕಾರ ನೀತಿ - 2025 ಅನಾವರಣ

ದೆಹಲಿ : ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರ ನೀತಿ – 2025 ಅನ್ನು ದೇಶದ ಹಿರಿಯ ಸಹಕಾರಿಗಳ ಸಮ್ಮುಖದಲ್ಲಿ ಅನಾವರಣಗೊಳಿಸಿದರು.

ರಾಷ್ಟ್ರೀಯ ಸಹಕಾರ ನೀತಿಯ ಮೂಲಕ ಸಹಕಾರ ವಲಯವನ್ನು ನಾವೀನ್ಯತೆ, ಆಧುನಿಕ ತಂತ್ರಜ್ಞಾನ ಮತ್ತು ಯುವ ಶಕ್ತಿಯಿಂದ ಚಳವಳಿಯನ್ನು ಮುನ್ನೆಡೆಸಲು ಸಾಧ್ಯವಾಗಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ರಾಷ್ಟ್ರೀಯ ಸಹಕಾರ ನೀತಿಯ ಮೂಲಕ, ಪ್ರವಾಸೋದ್ಯಮ, ಟ್ಯಾಕ್ಸಿ ಸೇವೆ, ವಿಮೆ ಮತ್ತು ಹಸುರು ಇಂಧನದಂತಹ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸುವುದು.

2034ರ ವೇಳೆಗೆ ಜಿಡಿಪಿಗೆ ಸಹಕಾರಿ ಕ್ಷೇತ್ರದ ಕೊಡುಗೆಯನ್ನು ಮೂರು ಪಟ್ಟು ಹೆಚ್ಚಿಸುವುದು, 50 ಕೋಟಿ ಸಕ್ರಿಯ ಸದಸ್ಯರನ್ನು ತನ್ನ ವ್ಯಾಪ್ತಿಗೆ ತರುವ ಗುರಿ ಹೊಂದಿದೆ.

ನೂತನ ಆದಾಯ ತೆರಿಗೆ ಮಸೂದೆ ಅಂಗೀಕಾರ

ನವದೆಹಲಿ : ಸಂಸತ್ತಿನಲ್ಲಿ ಹೊಸ ಆದಾಯ ತೆರಿಗೆ ಮಸೂದೆ 2025 ಅನ್ನು ಅಂಗೀಕರಿಸಲಾಗಿದೆ. ಇದು ರಾಷ್ಟ್ರಪತಿಗಳ ಅಂಕಿತ ಪಡೆಯಬೇಕಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದಾಯ ತೆರಿಗೆ ಮಸೂದೆ, 2025 ಮತ್ತು ತೆರಿಗೆ ಕಾನೂನುಗಳು (ತಿದ್ದುಪಡಿ) ಮಸೂದೆ, 2025 ಈ ಎರಡು ಹಣಕಾಸು ಮಸೂದೆಗಳನ್ನು ಮಂಡಿಸಿದ್ದರು.

ರಾಜ್ಯಸಭೆಯು ಧ್ವನಿ ಮತದೊಂದಿಗೆ ಹೊಸ ಆದಾಯ ತೆರಿಗೆ ಮಸೂದೆಯನ್ನು ಅಂಗೀಕರಿಸಿದೆ. ಹೊಸ ಆದಾಯ ತೆರಿಗೆ ಮಸೂದೆಯು ಆದಾಯ ತೆರಿಗೆ ಕಾಯ್ದೆ 1961 ಅನ್ನು ಬದಲಾಯಿಸುತ್ತದೆ.

ನಿರ್ಮಲಾ ಸೀತಾರಾಮನ್ ಸಂಸದೀಯ ಆಯ್ಕೆ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಈ ಮಸೂದೆಯನ್ನು ಮಂಡಿಸಿದ್ದರು. ನೂತನ ಮಸೂದೆಯು ಹಳೆಯ ಕಾಯ್ದೆಯನ್ನು ಸಂಪೂರ್ಣವಾಗಿ ಬದಲಿಸುವ ಗುರಿ ಹೊಂದಿದ್ದು, ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ ಹಾಗೂ ಡಿಜಿಟಲೀಕರಣಗೊಳಿಸುವ ಉದ್ದೇಶವನ್ನು ಹೊಂದಿದೆ.

ಸಂಸತ್ತಿನ ಸ್ಥಾಯಿ ಸಮಿತಿಯು ಈ ಹಿಂದೆ ಮಂಡನೆ ಮಾಡಲಾಗಿದ್ದ ಆದಾಯ ತೆರಿಗೆ ಮಸೂದೆ–2025ಕ್ಕೆ ಹಲವಾರು ಬದಲಾವಣೆಗಳನ್ನು ಶಿಫಾರಸು ಮಾಡಿತ್ತು. ತೆರಿಗೆ ಪದ್ಧತಿಯನ್ನು ಸರಳಗೊಳಿಸುವುದು ಮತ್ತು ಆದಾಯ ತೆರಿಗೆ ಕಾನೂನನ್ನು ಹೆಚ್ಚು ಸ್ಪಷ್ಟಪಡಿಸುವ ಉದ್ದೇಶದಿಂದ ಸಮಿತಿಯು ಒಟ್ಟು 285 ಶಿಫಾರಸುಗಳನ್ನು ಮಾಡಿತ್ತು. ಈ ಸಮಿತಿಯ ವರದಿಯಲ್ಲಿ ಒಟ್ಟು 566 ಸಲಹೆಗಳು / ಶಿಫಾರಸುಗಳಿದ್ದವು.

ಯುಪಿಐಗೆ ಪರ್ಯಾಯವಾಗಿ ಇ–ರೂಪಾಯಿ : ಈ ನೋಟುಗಳು ಕೊಳೆಯಾಗುವುದಿಲ್ಲ, ಕಳೆದುಹೋಗುವುದಿಲ್ಲ



ಕಳೆದ ಆರು ಹಣಕಾಸು ವರ್ಷಗಳಲ್ಲಿ ಭಾರತೀಯರು 65 ಸಾವಿರ ಕೋಟಿ ಬಾರಿ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್ಫೇಸ್), ಸರಳವಾಗಿ ಹೇಳಬಹುದಾದರೆ, 'ಆನ್ಲೈನ್ ಪೇಮೆಂಟ್' ವ್ಯವಸ್ಥೆ ಬಳಸಿ ಹಣಕಾಸು ವಹಿವಾಟು ನಡೆಸಿದ್ದು, 12 ಸಾವಿರ ಟ್ರಿಲಿಯನ್ ರೂಪಾಯಿ ವ್ಯವಹಾರ ನಡೆಸಿದ್ದಾರೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ತಿಳಿಸಿತ್ತು.

ಕೈಯಲ್ಲಿ ಅಥವಾ ಸಾಂಪ್ರದಾಯಿಕ ನೋಟುಗಳಿಲ್ಲದೆಯೇ, ಡಿಜಿಟಲ್ ಪಾವತಿ ಮೂಲಕ ಈ ವಹಿವಾಟು ನಡೆಸಿದೆ. ಯುಪಿಐ ವ್ಯವಸ್ಥೆಯಲ್ಲಿ ಗೂಗಲ್ ಪೇ, ಭೀಮ್ ಆ್ಯಪ್, ಫೋನ್ಪೇ, ಪೇಟಿಎಂ ಮುಂತಾದ ಅದೆಷ್ಟೋ ಡಿಜಿಟಲ್ ವ್ಯಾಲೆಟ್‌ಗಳ (ಡಿಜಿಟಲ್ ಪರ್ಸ್ ಅಂತ ಹೇಳಬಹುದು) ಮೂಲಕ ಈ ವಹಿವಾಟು ನಡೆದಿದ್ದು, ಜನರು ನಗದು ಹಣವನ್ನು ಕೈಯಲ್ಲಿರಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಈ ಡಿಜಿಟಲ್ ಕ್ರಾಂತಿಗೆ ಮತ್ತೊಂದು ಸೇರ್ಪಡೆ ಇ–ರುಪೀ ಅಥವಾ ಡಿಜಿಟಲ್ ರೂಪಾಯಿ.

ಏನಿದು ಡಿಜಿಟಲ್ ರೂಪಾಯಿ : ಡಿಜಿಟಲ್ ರೂಪಾಯಿ ಅಥವಾ ಇ– ರುಪೀ ಎಂಬುದು ಭಾರತದ ಕೇಂದ್ರೀಯ ಬ್ಯಾಂಕಿನ ಡಿಜಿಟಲ್ ಕರೆನ್ಸಿ (ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ – CBDC). ಸರಳವಾಗಿ ಹೇಳುವುದಾದರೆ ನಮ್ಮ ಪರ್ಸಿನಲ್ಲಿ ಇರುವ ನೋಟುಗಳ ಬದಲಾಗಿ, ನಮ್ಮದೇ ಆನ್ಲೈನ್ ಪರ್ಸ್‌ನಲ್ಲಿ ಇರಿಸುವ ಹಣ. ಜೇಬಿನಲ್ಲಿರುವ ಹಣಕ್ಕೆ ಭೌತಿಕ ರೂಪ ಇದೆ, ಈ ಡಿಜಿಟಲ್ ಹಣಕ್ಕೆ ತಾಂತ್ರಿಕ ರೂಪವಷ್ಟೇ ಇರುವುದು. ಇದನ್ನು ಬಳಕೆದಾರರದ್ದೇ ಆದ ಡಿಜಿಟಲ್ ಪರ್ಸ್‌ನಲಿ ಇರಿಸಿ, ಬೇಕಾದಾಗ ಎಷ್ಟು ಬೇಕೋ ಅಷ್ಟು ಹಣ ವರ್ಗಾಯಿಸಬಹುದು.

ಈ ಡಿಜಿಟಲ್ ಪರ್ಸ್ಗೆ ಹಣವನ್ನು ನಮ್ಮ ಖಾತೆಯಿಂದ ಸೇರಿಸಬಹುದು; ಬೇರೆಯವರೂ ಈ ಪರ್ಸ್‌ನಲ್ಲಿ ಹಣ ಹಾಕಬಹುದು. ಆದರೆ ಗಮನಿಸಿ, ಈ ಪರ್ಸ್‌ನಲ್ಲಿರುವ ಹಣಕ್ಕೆ ಯಾವುದೇ ಬಡ್ಡಿ ದೊರೆಯುವುದಿಲ್ಲ – ನಮ್ಮ ಜೇಬಿನಲ್ಲಿರುವ ಹಣದಂತೆಯೇ. ಡಿಜಿಟಲ್ ವ್ಯಾಲೆಟ್ ತೆರೆದು ನೋಡಿದರೆ, ಅದರಲ್ಲಿ ನಾವು ಹಾಕಿದ ಹಣದ ಮೊತ್ತವು, 500, 200, 100, 20, 10, 5, 1 ರೂ. ಹೀಗೆ ನೋಟುಗಳು ಹಾಗೂ ನಾಣ್ಯಗಳ ರೂಪದಲ್ಲಿ ಗೋಚರಿಸುತ್ತದೆ.

ಇ–ರೂಪಾಯಿ ಹೇಗೆ ಕೆಲಸ ಮಾಡುತ್ತದೆ?

ಬಹುತೇಕ ಈಗಿನ ಯುಪಿಐ (ಗೂಗಲ್ ಪೇ–ಫೋನ್ ಪೇ) ಮಾದರಿಯಲ್ಲೇ, ಒಂದು ಆ್ಯಪ್ ಮೂಲಕ ಇದು ಕೆಲಸ ಮಾಡುತ್ತದೆ. ಪ್ರಾಯೋಗಿಕವಾಗಿ (ಪೈಲಟ್) ಇದು ಚಾಲ್ತಿಗೆ ಬಂದಿದ್ದು, ಪ್ರಮುಖ ಬ್ಯಾಂಕುಗಳು ಅಂಡ್ರಾಯ್ಡ್ ಹಾಗೂ ಐಒಎಸ್ ಫೋನ್‌ಗಳಿಗಾಗಿ ಪ್ರತ್ಯೇಕ ಆ್ಯಪ್ (ಡಿಜಿಟಲ್ ಪರ್ಸ್) ರೂಪಿಸಿವೆ. ಯಾವುದೇ ದಿನಸಿ ಸಾಮಗ್ರಿ, ತರಕಾರಿ ಖರೀದಿಗೆ ಅಥವಾ ಅನ್ಯ ಸೇವೆಗೆ ಇದರ ಮೂಲಕ ಹಣ ವರ್ಗಾಯಿಸಬಹುದು. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ ನಿರ್ದಿಷ್ಟ ಮೊಬೈಲ್ ಸಂಖ್ಯೆಗೆ (ಈ ಸಂಖ್ಯೆಯೂ ಇ–ರೂಪಾಯಿ ಬಳಕೆಗೆ ನೋಂದಾಯಿಸಿಕೊಂಡಿರಬೇಕು) ಹಣ ವರ್ಗಾಯಿಸಬಹುದು. ಡಿಜಿಟಲ್ ಪರ್ಸ್‌ನಲ್ಲಿ ಸಂಗ್ರಹವಾಗುವ ಹೆಚ್ಚುವರಿ ಹಣವನ್ನು ಅದಕ್ಕೆ ಲಿಂಕ್ ಆಗಿರುವ ಬ್ಯಾಂಕ್ ಉಳಿತಾಯ ಖಾತೆಗೆ ವರ್ಗಾಯಿಸಬಹುದು. ಸಂಬಂಧಪಟ್ಟ ವ್ಯಾಪಾರಿಗಳು ಕೂಡ 'ಇ–ರುಪೀ' ವ್ಯಾಲೆಟ್ ಅಳವಡಿಸಿಕೊಂಡಲ್ಲಿ, ಎಲ್ಲ ವಹಿವಾಟುಗಳೂ ಸರಾಗವಾಗಿ ಆಗಲಿವೆ. ಸದ್ಯ ಇದು ಪೈಲಟ್ ಯೋಜನೆಯಾಗಿರುವುದರಿಂದ ಪ್ರಮುಖ ನಗರಗಳಲ್ಲಿ ಕೆಲಸ ಮಾಡುತ್ತಿದೆ. ವ್ಯಾಪ್ತಿ, ವಿಸ್ತಾರ ಇನ್ನಷ್ಟೇ ಆಗಬೇಕಿದೆ.

ಗೂಗಲ್ ಪೇ–ಫೋನ್ ಪೇಗಿಂತ ಇ–ರೂಪಾಯಿ ಹೇಗೆ ಭಿನ್ನ?

ಗೂಗಲ್ಪೇ ಅಥವಾ ಫೋನ್ಪೇ ಆ್ಯಪ್‌ಗಳು ಎರಡು ಬ್ಯಾಂಕುಗಳ ನಡುವೆ ಮಧ್ಯವರ್ತಿ ರೂಪದಲ್ಲಿ ಕೆಲಸ ಮಾಡುತ್ತವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರೂಪಿಸಿದ ಈ ಡಿಜಿಟಲ್ ರೂಪಾಯಿ ವ್ಯವಸ್ಥೆಯಲ್ಲಿ ಎರಡು ಬ್ಯಾಂಕುಗಳು ಪರಸ್ಪರ ನೇರವಾಗಿ ಸಂವಹನ ಮಾಡಿಕೊಳ್ಳುತ್ತವೆ. ಯುಪಿಐ ಅಥವಾ ಬ್ಯಾಂಕಿನ ಸರ್ವರ್ ಕೈಕೊಟ್ಟಾಗ, ನಡುವೆ ಸಿಲುಕಿಕೊಳ್ಳುವ ಹಣ ವಾಪಸ್ ಬರಲು ಕಾಯಬೇಕಾಗಬಹುದು. ಆದರೆ, 'ಇ–ಪರ್ಸ್'ನಲ್ಲಿ ಹಾಗಾಗದು. ಡಿಜಿಟಲ್ ರೂಪಾಯಿ ವಹಿವಾಟು ಕ್ಷಿಪ್ರವಾಗಿ ಆಗುತ್ತದೆ. ಥರ್ಡ್ ಪಾರ್ಟಿ ಆ್ಯಪ್‌ಗಳು ಬೇಕಾಗಿರುವುದಿಲ್ಲ. ನಮ್ಮದೇ ಬ್ಯಾಂಕಿನ ಆ್ಯಪ್‌ಗಳು ಬಳಸಿದರೆ ಸಾಕಾಗುತ್ತದೆ.

ಹಣ ಲೋಡ್ ಮಾಡುವುದು (ಡಿಜಿಟಲ್ ಪರ್ಸ್‌ಗೆ ತುಂಬಿಸುವುದು) ಕೂಡ ತಕ್ಷಣದಲ್ಲೇ ಆಗುತ್ತದೆ. ಮುಂದಿನ ದಿನಗಳಲ್ಲಿ, ಇಂಟರ್ನೆಟ್ ಸೌಕರ್ಯದ ಅಗತ್ಯವಿಲ್ಲದೆಯೇ ಇ–ರೂಪಾಯಿ ಬಳಕೆಗೆ ಅವಕಾಶ ಮಾಡಿಕೊಡುವ ಬಗ್ಗೆ ತಂತ್ರಜ್ಞಾನದ ಅಭಿವೃದ್ಧಿ ಆಗುತ್ತಿದೆ. ಇದಕ್ಕೆ ಆಯಾ ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಫೋನ್ ನಂಬರ್ ಸಾಕಾಗುತ್ತದೆ. ಈ ರೀತಿಯ ಆಫ್ಲೈನ್ ಬಳಕೆ ವ್ಯವಸ್ಥೆಯು ಕಾರ್ಯರೂಪಕ್ಕೆ ಬಂದರೆ ವಿಶೇಷವಾಗಿ ಗ್ರಾಮೀಣ ಹಾಗೂ ಇಂಟರ್ನೆಟ್ ತಲುಪದಿರುವ ಊರುಗಳಿಗೆ ವರದಾನವಾಗಲಿದೆ. ಜೊತೆಗೆ, ಶೀಘ್ರದಲ್ಲೇ ಅಂತರರಾಷ್ಟ್ರೀಯ ಮಟ್ಟದ ಪಾವತಿಗೂ ಇ–ರುಪೀ ಅವಕಾಶ ನೀಡಲಿದೆ.

ಎಷ್ಟು ವಹಿವಾಟು ನಡೆಸಬಹುದು?

ಸದ್ಯಕ್ಕೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿ ಗರಿಷ್ಠ ರೂ. 1 ಲಕ್ಷ ಮಾತ್ರ ಇರಿಸಬಹುದು ಹಾಗೂ ದಿನಕ್ಕೆ ರೂ.25,000 ವಹಿವಾಟು ನಡೆಸಬಹುದಾಗಿದೆ.

ಇ–ರೂಪಾಯಿ ಬಳಕೆ ಎಷ್ಟು ಸುರಕ್ಷಿತ?

ಇದು ಯುಪಿಐ ಆಧಾರಿತವಲ್ಲ. ನಮ್ಮಲ್ಲಿರುವ ಹಣವನ್ನು ಆನ್‌ಲೈನ್ ಪರ್ಸ್‌ನಲ್ಲಿ ಇರಿಸಲು ಅತ್ಯಂತ ಸುರಕ್ಷಿತ ಮಾದರಿ ಇದು. ನೇರವಾಗಿ ರಿಸರ್ವ್ ಬ್ಯಾಂಕ್ ಮೇಲ್ವಿಚಾರಣೆಯಲ್ಲೇ ಇರುತ್ತದೆ. ನಮ್ಮ

ಜೇಬಿನಲ್ಲಿರುವ ಪರ್ಸ್ ಕಳೆದುಹೋದರೆ ಸಿಗುವುದು ಕಷ್ಟ. ಆದರೆ, ಇ-ರೂಪಾಯಿ ಆ್ಯಪ್‌ಗಳು ಇರುವ ಫೋನ್ ಕಳೆದುಹೋದರೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿರುವ ಹಣಕ್ಕೇನೂ ಆಗದು.

ಬೇರೆ ಸಾಧನದಲ್ಲಿ ಆ್ಯಪ್‌ಗಳು ಅಳವಡಿಸಿ ಪುನಃ ಲಾಗಿನ್ ಆಗಬಹುದು. ಇಷ್ಟಲ್ಲದೆ, ಡಿಜಿಟಲ್ ವ್ಯಾಲೆಟ್‌ನಲ್ಲಿರುವ ಡಿಜಿಟಲ್ ರೂಪಾಯಿಯ ನೇರ ಹೊಣೆಗಾರಿಕೆಯು ಕೇಂದ್ರೀಯ ಬ್ಯಾಂಕಿನದ್ದೇ ಆಗಿರುತ್ತದೆ, ಹೊರತು ಖಾಸಗಿ ಬ್ಯಾಂಕುಗಳ ಮಧ್ಯವರ್ತಿತನದ ಅಗತ್ಯ ಇರುವುದಿಲ್ಲ.

ಇ-ರೂಪಾಯಿಯ ಪ್ರಯೋಜನವೇನು?

ವಿಶೇಷತಃ ಸರ್ಕಾರಿ ನಿಧಿಗಳನ್ನು, ಸಬ್ಸಿಡಿ ಮುಂತಾದವುಗಳನ್ನು ಪಡೆಯಲು ಫಲಾನುಭವಿಗಳಿಗೆ ಇ-ರುಪೀ (ಎಲೆಕ್ಟ್ರಾನಿಕ್ ರೂಪಾಯಿ) ಅನಿವಾರ್ಯವಾಗಬಹುದು. ಬ್ಯಾಂಕ್ ಖಾತೆಯಿಂದ ಒಂದಿಷ್ಟು ಹಣವನ್ನು ಈ ಪರ್ಸ್‌ನಲ್ಲಿಟ್ಟುಕೊಂಡರೆ, ಬೇಕಾದಾಗ ಸಣ್ಣ ಮೊತ್ತವನ್ನು ವ್ಯಯಿಸಲು ಅನುಕೂಲ. ಯುಪಿಐಯಲ್ಲಿ ಆಗಿರುವಂತೆ ಸಣ್ಣಪುಟ್ಟ ವಹಿವಾಟುಗಳು ಬ್ಯಾಂಕ್ ಪಾಸ್‌ಬುಕ್‌ನಲ್ಲಿ ದಾಖಲಾಗುವ ಬದಲು, ಇ-ಪರ್ಸ್‌ನಲ್ಲೇ ದಾಖಲಾಗುತ್ತವೆ. ಇದಲ್ಲದೆ, ಇ-ರೂಪಾಯಿ ಮೂಲಕ ಮಾಡುವ ವಹಿವಾಟುಗಳಿಗೆ ಯಾವುದೇ ರೀತಿಯ ಶುಲ್ಕಗಳು ಇರುವುದಿಲ್ಲ ಮತ್ತು ಈ ಪರ್ಸ್‌ನಲ್ಲಿ ಕನಿಷ್ಠ ಬ್ಯಾಲೆನ್ಸ್ ಹಣ ಇರಿಸುವ ಅಗತ್ಯವಿರುವುದಿಲ್ಲ. ಭವಿಷ್ಯದಲ್ಲಿ ಅಂತರರಾಷ್ಟ್ರೀಯ ಹಣಕಾಸು ವಹಿವಾಟಿಗೂ ಯಾವುದೇ ವಿನಿಮಯ ಶುಲ್ಕದ ಅಗತ್ಯವಿಲ್ಲದೆ ಇ-ರೂಪಾಯಿಯನ್ನು ಬಳಸುವ ಕುರಿತ ಯೋಜನೆಗಳು ರೂಪುಗೊಳ್ಳುತ್ತಿವೆ. ನೋಟುಗಳಾದರೆ ಹರಿದು ಹೋಗುತ್ತವೆ. ಕೊಳೆಯಾಗಿರುತ್ತವೆ. ಆದರೆ ಇದರಲ್ಲಿರುವ ಹಣಕ್ಕೆ ಆ ಸಮಸ್ಯೆ ಇರುವುದಿಲ್ಲ.

ಒಂದು ರೀತಿಯಲ್ಲಿ ಡಿಜಿಟಲ್ ಚಿತ್ರದಂತೆ ಅಥವಾ ಬೇರಾವುದೇ ಭೌತಿಕ ದಾಖಲೆಗಳ ಸ್ಥಾನದಲ್ಲಿ ಈಗ ಪಿಡಿಎಫ್ ರೂಪವೇ ಹೆಚ್ಚು ಜನಪ್ರಿಯವಾಗಿರುವಂತೆ, ನಗದು ಹಣದ ಸ್ಥಾನದಲ್ಲಿ ಇ-ರುಪೀ ಬಂದಿದೆ. ಇನ್ನೂ ಶೈಶವಾವಸ್ಥೆಯಲ್ಲಿ ಇರುವ ಹಾಗೂ ನಗದು ರಹಿತ ವಹಿವಾಟಿನತ್ತ ಮುಖ್ಯ ಹೆಜ್ಜೆಯಾಗಿರುವ ಇ-ರುಪೀ ಪರಿಕಲ್ಪನೆ ಬಗ್ಗೆ ಇನ್ನಷ್ಟೇ ಪ್ರಚಾರವಾಗಬೇಕಿದೆ. ಸದ್ಯಕ್ಕೆ ಸೀಮಿತ ನಗರಗಳಲ್ಲಿ ಮಾತ್ರ ಇದರ ಸೇವೆ ಪ್ರಾಯೋಗಿಕವಾಗಿ ದೊರೆಯುತ್ತಿದೆ. ಆದರೆ ಇದು ಯುಪಿಐಗೆ ಪರ್ಯಾಯವಾಗಬಹುದೇ ಮತ್ತು ಭಾರತದ ಆರ್ಥಿಕತೆಗೆ ಎಷ್ಟರ ಮಟ್ಟಿಗೆ ಬಲ ತುಂಬಬಹುದು ಎಂಬುದನ್ನು ಕಾದು ನೋಡಬೇಕಿದೆ.

ಡಾಲರ್ ಎದುರು ಮತ್ತೆ ರೂಪಾಯಿ ಮೌಲ್ಯ ಸತತ ಕುಸಿತ

ಮುಂಬೈ: ಜಾಗತಿಕ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಮತ್ತೆ ಕುಸಿತವಾಗಿದ್ದು, ಡಾಲರ್ ಎದುರು ರೂ. 87.66ಗೆ ಕುಸಿತವಾಗಿದೆ. ಭಾರತದ ಎದುರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇರಿರುವ ಹೆಚ್ಚುವರಿ ಸುಂಕದ ವಿಚಾರ ವ್ಯಾಪಕ ಸುದ್ದಿಗೆ ಗ್ರಾಸವಾಗಿರುವಂತೆಯೇ ಭಾರತೀಯ ರೂಪಾಯಿ ಮೌಲ್ಯ ಕುಸಿತವಾಗಿದೆ. ಪ್ರತೀ ಡಾಲರ್ ಎದುರು ರೂಪಾಯಿ ಮೌಲ್ಯ 8 ಪೈಸೆಯಷ್ಟು ಕುಸಿತವಾಗಿದ್ದು, ರೂ. 87.66ಗೆ ಮೌಲ್ಯ ಇಳಿಕೆಯಾಗಿದೆ.

ಆಮದುದಾರರಿಂದ ಡಾಲರ್ ಬೇಡಿಕೆ ಮುಂದುವರಿದಿರುವುದು ಮತ್ತು ಕಚ್ಚಾ ತೈಲ ಬೆಲೆಗಳಲ್ಲಿ ಚೇತರಿಕೆ ಕಂಡುಬಂದ ಕಾರಣ ರೂಪಾಯಿ ಮೌಲ್ಯ ಡಾಲರ್ ವಿರುದ್ಧ ಇಳಿಕೆಯಾಗಿದೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಂತೆಯೇ ಕಚ್ಚಾ ತೈಲ ಬೆಲೆಗಳು, ಆಮದುದಾರರಿಂದ ಡಾಲರ್ ಬೇಡಿಕೆ ಮತ್ತು ವಿದೇಶಿ ನಿಧಿಯ ಹೊರ ಹರಿವು ಧನಾತ್ಮಕವಾಗಿದ್ದರಿಂದ ರೂಪಾಯಿ ಆರಂಭಿಕ ಲಾಭವನ್ನು ಕಡಿಮೆ ಮಾಡಿಕೊಂಡಿದೆ ಎಂದು ಫಾರೆಕ್ಸ್ ವ್ಯಾಪಾರಿಗಳು ತಿಳಿಸಿದ್ದಾರೆ. ಅಂತರಬ್ಯಾಂಕ್ ವಿದೇಶಿ ವಿನಿಮಯದಲ್ಲಿ, ದೇಶೀಯ ಘಟಕವು ತನ್ನ ವಹಿವಾಟನ್ನು ರೂ.87.56 ನೊಂದಿಗೆ ತೆರೆದು ಅಂತಿಮವಾಗಿ ರೂ.87.66ರೂ ಗೆ ಕುಸಿತವಾಗಿ ತನ್ನ ವಹಿವಾಟು ಕೊನೆಗೊಳಿಸಿದೆ.

ತ್ವರಿತ ಪಾವತಿ ಸೇವೆ ಶುಲ್ಕ ಹೆಚ್ಚಿಸಿದ ಎಸ್‌ಬಿಐ ಬ್ಯಾಂಕ್ : ಚಿಲ್ಲರೆ ಗ್ರಾಹಕರಿಗೆ ಶುಲ್ಕದ ಬಿಸಿ

ಹೊಸದಿಲ್ಲಿ: ಭಾರತೀಯ ಸ್ಟೇಟ್ ಬ್ಯಾಂಕ್ ತನ್ನ ಕೋಟ್ಯಂತರ ಚಿಲ್ಲರೆ ಗ್ರಾಹಕರಿಗೆ ಶುಲ್ಕದ ಬಿಸಿ ಮುಟ್ಟಿಸಿದೆ. ತ್ವರಿತ ಪಾವತಿ ಸೇವೆ (ಐಎಂಪಿಎಸ್) ಮೂಲಕ ಮಾಡುವ ವಹಿವಾಟುಗಳ ಮೇಲಿನ ಸೇವಾ ಶುಲ್ಕವನ್ನು ಬ್ಯಾಂಕ್ ಪರಿಷ್ಕರಿಸಿದ್ದು, ಈ ಹೊಸ ದರಗಳು ಇದೇ ಆಗಸ್ಟ್ 15, 2025 ರಿಂದ ಜಾರಿಗೆ ಬರಲಿವೆ.

ಈ ಬದಲಾವಣೆಯು ಮುಖ್ಯವಾಗಿ ಆನ್ಲೈನ್ ಮೂಲಕ ಮಾಡುವ ದೊಡ್ಡ ಮೊತ್ತದ ವಹಿವಾಟುಗಳ ಮೇಲೆ ಪರಿಣಾಮ ಬೀರಲಿದ್ದು, ಸಣ್ಣ ಮೊತ್ತಗಳಿಗೆ ವಿನಾಯಿತಿ ನೀಡಲಾಗಿದೆ.

ಬ್ಯಾಂಕ್ ನೀಡಿರುವ ಮಾಹಿತಿ ಪ್ರಕಾರ, ಆನ್ಲೈನ್ (ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್) ಮೂಲಕ ಮಾಡುವ 25,000 ರೂ. ವರೆಗಿನ ಐಎಂಪಿಎಸ್ ವಹಿವಾಟುಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಆದರೆ, ಇದಕ್ಕಿಂತ ಹೆಚ್ಚಿನ ಮೊತ್ತದ ವಹಿವಾಟುಗಳಿಗೆ ಕನಿಷ್ಠ ಶುಲ್ಕವನ್ನು ವಿಧಿಸಲಾಗುತ್ತದೆ. ಗಮನಿಸಬೇಕಾದ ಸಂಗತಿ ಎಂದರೆ ಈ ಹಿಂದೆ ಈ ವಹಿವಾಟುಗಳು ಸಂಪೂರ್ಣ ಉಚಿತವಾಗಿದ್ದವು.

ಯಾವುದಕ್ಕೆ ಎಷ್ಟು ಶುಲ್ಕ?

25,000 ದಿಂದ 1,00,000 ರೂ.ವರೆಗೆ: 2 ರೂ. + ಜಿಎಸ್‌ಟಿ
1,00,001 ರಿಂದ 2,00,000 ರೂ.ವರೆಗೆ: 6 ರೂ. + ಜಿಎಸ್‌ಟಿ
2,00,001 ರಿಂದ 5,00,000 ರೂ.ವರೆಗೆ: 10 ರೂ. + ಜಿಎಸ್‌ಟಿ

ಆದರೆ, ಬ್ಯಾಂಕ್ ಶಾಖೆಗಳ ಮೂಲಕ ಮಾಡುವ ಐಎಂಪಿಎಸ್ ವಹಿವಾಟುಗಳ ಶುಲ್ಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಎಸ್‌ಬಿಐ ಸ್ಪಷ್ಟಪಡಿಸಿದೆ.

ಈ ಖಾತೆಗಳಿಗೆ ಶುಲ್ಕ ವಿನಾಯಿತಿ

ಸಂಬಳ ಸ್ವೀಕರಿಸುವ ಸ್ಯಾಲರಿ ಅಕೌಂಟ್ ಹೊಂದಿರುವ ಗ್ರಾಹಕರಿಗೆ ಈ ಹೊಸ ಶುಲ್ಕಗಳಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ರಕ್ಷಣೆ, ಅರೆಸೇನೆ, ಕರಾವಳಿ ಕಾವಲುಪಡೆ, ಕೇಂದ್ರ ಸರ್ಕಾರ, ಪೊಲೀಸ್ ಮತ್ತು ರೈಲ್ವೆ ಇಲಾಖೆಗಳ ಸಂಬಳ ಖಾತೆದಾರರು ಆನ್‌ಲೈನ್‌ನಲ್ಲಿ ಮಾಡುವ ಯಾವುದೇ ಮೊತ್ತದ ಐಎಂಪಿಎಸ್ ವಹಿವಾಟುಗಳಿಗೆ ಶುಲ್ಕ ಪಾವತಿಸಬೇಕಿಲ್ಲ.

ಐಎಂಪಿಎಸ್ ಎಂದರೇನು?

ಐಎಂಪಿಎಸ್ ಅಥವಾ ಇಮಿಡಿಯೇಟ್ ಪೇಮೆಂಟ್ ಸರ್ವೀಸ್ ಎನ್ನುವುದು ಭಾರತೀಯ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ನೀಡುವ 24/7 ರಿಯಲ್ ಟೈಮ್ ಹಣ ವರ್ಗಾವಣೆ ಸೇವೆಯಾಗಿದೆ. ಇದರ ಮೂಲಕ ದಿನದ ಯಾವುದೇ ಸಮಯದಲ್ಲಿ, ರಜಾದಿನಗಳಲ್ಲೂ ತಕ್ಷಣವೇ ಹಣವನ್ನು ಕಳುಹಿಸಬಹುದು.

ಪ್ರತಿ ವಹಿವಾಟಿನ ಗರಿಷ್ಠ ಮಿತಿ ರೂ. 5 ಲಕ್ಷ ಆಗಿದ್ದು, ಒಮ್ಮೆ ಐಎಂಪಿಎಸ್ ಮೂಲಕ ಹಣ ವರ್ಗಾವಣೆ ಮಾಡಿದರೆ ಅದನ್ನು ರದ್ದುಗೊಳಿಸಲು ಅಥವಾ ಹಿಂಪಡೆಯಲು ಸಾಧ್ಯವಿಲ್ಲ. ಇದನ್ನು ಗ್ರಾಹಕರು ಗಮನದಲ್ಲಿ ಇಟ್ಟುಕೊಳ್ಳಬೇಕು.

ಅಮೆರಿಕದ ಶೇ. 50 ರಷ್ಟು ಸುಂಕ : ಭಾರತದ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆಯೇ?

ನವದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ಸರಕುಗಳ ಆಮದಿನ ಮೇಲೆ ಶೇ.50 ರಷ್ಟು ಸುಂಕ ವಿಧಿಸಿರುವುದು ಭಾರತದ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆಯೇ ಎಂಬುದರ ಕುರಿತು ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಚರ್ಚೆಯಾಗುತ್ತಿದೆ.

ಈ ಮಧ್ಯೆ ಟ್ರಂಪ್ ಸುಂಕಗಳು ಭಾರತದ ಬೆಳವಣಿಗೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು S&P Global Ratings ನಿರ್ದೇಶಕ ಇಫಾರ್ನ್ ಫುವಾ ಹೇಳಿದ್ದಾರೆ. ಅಮೆರಿಕದ ಶೇ.50 ರಷ್ಟು ಸುಂಕಗಳು ವ್ಯಾಪಾರ–ಆಧಾರಿತ ಆರ್ಥಿಕತೆ ಅಲ್ಲ. ರೇಟಿಂಗ್ ದೃಷ್ಟಿಕೋನವು ಸಕಾರಾತ್ಮಕವಾಗಿ ಇರಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಅಮೆರಿಕದ ಸುಂಕ ಹೇರಿಕೆಯು ಭಾರತದ ಬೆಳವಣಿಗೆ ಮೇಲೆ ಅಪಾಯವನ್ನುಂಟು ಮಾಡುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಇಫಾರ್ನ್, ಭಾರತದ ಮೇಲೆ ವಿಧಿಸಲಾದ ಸುಂಕಗಳು ಆರ್ಥಿಕ ಬೆಳವಣಿಗೆ ವಿಷಯದಲ್ಲಿ ಪ್ರಭಾವ ಬೀರುತ್ತವೆ ಅಂತಾ ಅನಿಸುವುದಿಲ್ಲ. ಏಕೆಂದರೆ ಭಾರತವು ವ್ಯಾಪಾರ–ಆಧಾರಿತ ಆರ್ಥಿಕತೆ ಅಲ್ಲ. ಇನ್ನೂ ಭಾರತವು ಅಮೆರಿಕಕ್ಕೆ ಮಾಡುವ ರಫ್ತು ದೇಶದ ಜಿಡಿಪಿಯಲ್ಲಿ ಕೇವಲ ಶೇ. 2ರಷ್ಟಿದೆ ಎಂದು ಹೇಳಿದ್ದಾರೆ.

ಪ್ರಸಕ್ತ ವರ್ಷದಲ್ಲಿ ಶೇ.6.5 ರಷ್ಟು ಜಿಡಿಪಿ ಬೆಳವಣಿಗೆ ದರ : ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆಯನ್ನು ಶೇ 6.5 ಎಂದು ಎಸ್ & ಪಿ ಅಂದಾಜಿಸಿದೆ. ಕಳೆದ ವರ್ಷವೂ ಇಷ್ಟೇ ಅಂದಾಜಿಸಿತ್ತು. ಅಮೆರಿಕಗೆ ರಫ್ತು ಮಾಡುವ ಔಷಧಗಳು ಮತ್ತು ಗ್ರಾಹಕ ಎಲೆಕ್ಟ್ರಾನಿಕ್ಸ್‌ನಂತಹ ಪ್ರಮುಖ ವಲಯಗಳಿಗೆ ಸುಂಕದಿಂದ ವಿನಾಯಿತಿ ನೀಡಲಾಗಿದೆ. ದೀರ್ಘಾವಧಿಯಲ್ಲಿ ಅಮೆರಿಕದ ಹೆಚ್ಚುವರಿ ಸುಂಕಗಳು ಭಾರತದ ಆರ್ಥಿಕತೆ ಮೇಲೆ ದೊಡ್ಡ ಹೊಡೆತ ಅನಿಸುತ್ತಿಲ್ಲ. ಹೀಗಾಗಿ ಭಾರತದ ಆರ್ಥಿಕ ಪ್ರಗತಿ ಸಕಾರಾತ್ಮಕವಾಗಿಯೇ ಕಾಣುತ್ತಿದೆ ಎಂದು ವೆಬಿನಾರ್‌ವೊಂದರಲ್ಲಿ ಇಫಾರ್ನ್ ತಿಳಿಸಿದ್ದಾರೆ.

ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್ : ಕಡ್ಡಾಯ ಕೈಬಿಡುವಂತೆ ಸಮಿತಿ ಶಿಫಾರಸು

ತೆರಿಗೆ ವಿಧಿಸಬಹುದಾದ ಆದಾಯದ ಮಿತಿಗಿಂತ ಕಡಿಮೆ ಆದಾಯ ಗಳಿಸುವ ವ್ಯಕ್ತಿಗಳು ಆದಾಯ ತೆರಿಗೆ ಪಾವತಿಸುವುದರಿಂದ ವಿನಾಯಿತಿ ಪಡೆದಿದ್ದಾರೆ. ಹಳೆಯ ತೆರಿಗೆ ಪದ್ಧತಿಯಲ್ಲಿ ಈ ಮಿತಿ ವಾರ್ಷಿಕವಾಗಿ 2.5 ಲಕ್ಷ ರೂ. ಮತ್ತು ಹೊಸ ತೆರಿಗೆ ಪದ್ಧತಿಯಲ್ಲಿ 3 ಲಕ್ಷ ರೂ. ಇದೆ. ಕೃಷಿ ಅಥವಾ ಕೃಷಿ ಮಾತ್ರ ಆದಾಯದ ಮೂಲವಾಗಿರುವವರು ಸಾಮಾನ್ಯವಾಗಿ ಐಟಿ ರಿಟರ್ನ್ಸ್ ಸಲ್ಲಿಸುವುದರಿಂದ ವಿನಾಯಿತಿ ಪಡೆಯುತ್ತಾರೆ. ಕೆಲವು ಅನಿವಾಸಿ ಭಾರತೀಯರು ತಮ್ಮ ಆದಾಯವು ಪ್ರತ್ಯೇಕವಾಗಿ ಲಾಭಾಂಶ ಅಥವಾ ಬಡ್ಡಿಯಿಂದ ಬಂದಿದ್ದರೆ ಅಥವಾ ಅದು ಈಗಾಗಲೇ TDS ಗೆ ಒಳಪಟ್ಟಿದ್ದರೆ ಅವರಿಗೆ ಸಹ ವಿನಾಯಿತಿ ನೀಡಲಾಗುತ್ತದೆ.



ನವದೆಹಲಿ : ಆದಾಯ ತೆರಿಗೆ ಮಸೂದೆ 2025ರ ಲೋಕಸಭೆಯ ಆಯ್ಕೆ ಸಮಿತಿಯು ಮರುಪಾವತಿಗಾಗಿ ಮಾತ್ರ ರಿಟರ್ನ್ ಸಲ್ಲಿಸುವುದು ಕಡ್ಡಾಯ ಎಂಬುದನ್ನು ತೆಗೆದುಹಾಕುವಂತೆ ಶಿಫಾರಸು ಮಾಡಿದೆ. ಈ ಅವಶ್ಯಕತೆಯು ಅಜಾಗರೂಕತೆಯಿಂದ ಕಾನೂನು ಕ್ರಮಕ್ಕೆ ಕಾರಣವಾಗಬಹುದು ಎಂದು ಆಯ್ಕೆ ಸಮಿತಿ ವಾದಿಸಿದ್ದು, ವಿಶೇಷವಾಗಿ ಸಣ್ಣ ತೆರಿಗೆದಾರರ ಆದಾಯವು ತೆರಿಗೆ ಮಿತಿಗಿಂತ ಕಡಿಮೆಯಿರುತ್ತದೆ. ಆದರೆ ಮೂಲದಲ್ಲೇ ತೆರಿಗೆ ಕಡಿತಗೊಳಿಸಲಾಗುತ್ತದೆ ಎಂದು ಹೇಳಿದೆ.

ರಿಟರ್ನ್ ಸಲ್ಲಿಸದಿದ್ದಕ್ಕಾಗಿ ದಂಡದ ನಿಬಂಧನೆಗಳನ್ನು ತಪ್ಪಿಸಲು ಕಾನೂನು ರಿಟರ್ನ್ ಸಲ್ಲಿಕೆಗೆ ಒತ್ತಾಯಿಸಬಾರದು ಎಂದು ಸಮಿತಿ ಸೂಚಿಸಿದೆ. ಆದ್ದರಿಂದ, ನಿಗದಿತ ದಿನಾಂಕದೊಳಗೆ ರಿಟರ್ನ್ ಸಲ್ಲಿಸದ ಸಂದರ್ಭಗಳಲ್ಲಿ ಮರುಪಾವತಿ ಹಕ್ಕುಗಳನ್ನು ಅನುಮತಿಸಲು ಷರತ್ತು 263 ರಿಂದ ಉಪ–ಷರತ್ತು (1) (ix) ಅನ್ನು ತೆಗೆದುಹಾಕುವಂತೆ ಆಯ್ಕೆ ಸಮಿತಿ ಶಿಫಾರಸು ಮಾಡಿದೆ.

ಮಸೂದೆಯ ಷರತ್ತು 263.1 ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಬೇಕಾದ ವ್ಯಕ್ತಿಗಳು ಮತ್ತು ಘಟಕಗಳನ್ನು ಪಟ್ಟಿ ಮಾಡುತ್ತದೆ. ಷರತ್ತು 263.1 (ix) ನಿರ್ದಿಷ್ಟವಾಗಿ ಮರುಪಾವತಿಯ ಹಕ್ಕು ಸಲ್ಲಿಸಲು ಉದ್ದೇಶಿಸಿರುವ ವ್ಯಕ್ತಿ ಎಂದು ಉಲ್ಲೇಖಿಸುತ್ತದೆ.

ಐಟಿ ರಿಟರ್ನ್ಸ್ ಸಲ್ಲಿಸುವುದರಿಂದ ಯಾರಿಗೆ ವಿನಾಯಿತಿ ನೀಡಲಾಗಿದೆ? : ತೆರಿಗೆ ವಿಧಿಸಬಹುದಾದ ಆದಾಯದ ಮಿತಿಗಿಂತ ಕಡಿಮೆ ಆದಾಯ ಗಳಿಸುವ ವ್ಯಕ್ತಿಗಳು ಆದಾಯ ತೆರಿಗೆ ಪಾವತಿಸುವುದರಿಂದ ವಿನಾಯಿತಿ ಪಡೆದಿದ್ದಾರೆ. ಹಳೆಯ ತೆರಿಗೆ ಪದ್ಧತಿಯಲ್ಲಿ ಈ ಮಿತಿ ವಾರ್ಷಿಕವಾಗಿ 2.5 ಲಕ್ಷ ರೂ. ಮತ್ತು ಹೊಸ ತೆರಿಗೆ ಪದ್ಧತಿಯಲ್ಲಿ 3 ಲಕ್ಷ ರೂ. ಇದೆ. ಕೃಷಿ ಅಥವಾ ಕೃಷಿ ಮಾತ್ರ ಆದಾಯದ ಮೂಲವಾಗಿರುವವರು ಸಾಮಾನ್ಯವಾಗಿ ಐಟಿ ರಿಟರ್ನ್ಸ್ ಸಲ್ಲಿಸುವುದರಿಂದ ವಿನಾಯಿತಿ ಪಡೆಯುತ್ತಾರೆ. ಕೆಲವು ಅನಿವಾಸಿ ಭಾರತೀಯರು ತಮ್ಮ ಆದಾಯವು ಪ್ರತ್ಯೇಕವಾಗಿ ಲಾಭಾಂಶ ಅಥವಾ ಬಡ್ಡಿಯಿಂದ ಬಂದಿದ್ದರೆ ಅಥವಾ ಅದು ಈಗಾಗಲೇ TDS ಗೆ ಒಳಪಟ್ಟಿದ್ದರೆ ಅವರಿಗೆ ಸಹ ವಿನಾಯಿತಿ ನೀಡಲಾಗುತ್ತದೆ. ಕೊನೆಯದಾಗಿ 75 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರು, ಅವರ ಆದಾಯವು ಪಿಂಚಣಿ ಮತ್ತು ಬಡ್ಡಿಯನ್ನು ಮಾತ್ರ ಒಳಗೊಂಡಿರುತ್ತದೆ. ಅವರು ತಮ್ಮ ITR ಅನ್ನು ಸಲ್ಲಿಸುವುದರಿಂದ ವಿನಾಯಿತಿ ಪಡೆಯಬಹುದು.

ಬೆಳ್ಳಿ ಹಬ್ಬ ಸಂಭ್ರಮಿಸುತ್ತಿರುವ

ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕ ನಿಯಮಿತ, ಬೀಳಗಿ

ಬೀಳಗಿ ತಾಲ್ಲೂಕಿನ ಅನೇಕ ಹಳ್ಳಿಗಳು ಕೃಷ್ಣೆಯ ಮಡಿಲು ಸೇರಿದಾಗ ಬಹುತೇಕ ಜನ ಆಸ್ತಿಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿ ಇದ್ದಾಗ ಸಂತ್ರಸ್ಥರ ಬದುಕಿಗೆ ಅಲ್ಪವಾದರೂ ಆರ್ಥಿಕ ನೆರವು ಬೇಕಾಗಿರುವ ಸಂಧಿಗ್ದ ಪರಿಸ್ಥಿತಿಯಲ್ಲಿ ಸಮಯೋಚಿತ ನಿರ್ಧಾರ ತೆಗೆದುಕೊಂಡವರು ಉತ್ತರಕರ್ನಾಟಕದ ಸಹಕಾರ ರಂಗದ ಭೀಷ್ಮರೆಂದೇ ಖ್ಯಾತರಾದ ಶ್ರೀ ಎಸ್.ಆರ್.ಪಾಟೀಲರವರ ದೂರದೃಷ್ಟಿತ್ವದ ಫಲವಾಗಿಯೇ 1997 ರಲ್ಲಿ ಈ ನಾಡಿನ ನಡೆದಾಡು ದೇವರೆಂದು ಖ್ಯಾತರಾದ ವಿಜಯಪುರದ ಜ್ಞಾನಯೋಗಾಶ್ರಮದ ಪರಮ ಪೂಜ್ಯ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಬೀಳಗಿ ಪಟ್ಟಣ ಸಹಕಾರಿ ಬ್ಯಾಂಕು ಉದ್ಘಾಟನೆಗೊಂಡಿದ್ದು ಈ ಭಾಗದ ಜನತೆಗೆ ಅವಿಸ್ಮರಣಿಯ ಸಂಗತಿ ಎಂದೇ ಹೇಳಬೇಕಾಗುತ್ತದೆ.

ದಿನಾಂಕ 11/07/1997ರ ಶುಭ ಶುಕ್ರವಾರದಂದು ಕೇವಲ 11 ಲಕ್ಷದಾ 6 ನೂರು ರೂಪಾಯಿಗಳ ಶೇರು ಬಂಡವಾಳದೊಂದಿಗೆ ಪ್ರಾರಂಭವಾದ ಈ ಬ್ಯಾಂಕು ಸಂತ್ರಸ್ತರ ಬದುಕನ್ನು ಹಸನಗೊಳಿಸಲು ಪ್ರಯತ್ನಿಸುತ್ತಿದೆ ಎಂಬುದಕ್ಕೆ ದಿನಾಂಕ 31/03/2025 ಕ್ಕೆ ರೂ.757 ಕೋಟಿಯಷ್ಟು ಠೇವಣಿಯನ್ನು ಅತ್ಯಂತ ಪ್ರಾಮಾಣಿಕ ಹಾಗೂ ನಿಯತ್ತಿನಿಂದ ಸಾಧನೆ ಮಾಡುತ್ತಿರುವದಲ್ಲದೇ ರೂ.474 ಕೋಟಿಯಷ್ಟು ಹಣವನ್ನು ಸಾಲದ ರೂಪದಲ್ಲಿ ನೀಡಿ ಈ ಭಾಗದ ಜನರ ಆರ್ಥಿಕಸದೃಡತೆಗೆ ನಿರಂತರ ಶ್ರಮಿಸುತ್ತಿದೆ ಹಾಗೂ ರೂ.81 ಕೋಟಿ ನಿಧಿಯನ್ನು ಹೊಂದಿದೆ. ಅಲ್ಲದೆ ರೂ.882 ಕೋಟಿ ದುಡಿಯುವ ಬಂಡವಾಳದೊಂದಿಗೆ ಪ್ರಸಕ್ತ ವರ್ಷದಲ್ಲಿ ರೂ. 3.05 ಕೋಟಿ ನಿವ್ವಳ ಲಾಭವಾಗಿರುತ್ತದೆಂದು ತಿಳಿಸಲು ಸಂತೋಷವೆನಿಸುತ್ತದೆ.

ಬಾಗಲಕೋಟ ಜಿಲ್ಲೆಯಲ್ಲೀಯೇ ಅತೀ ಕಡಿಮೆ ಅವಧಿಯಲ್ಲಿ ಉತ್ತಮ ಬೆಳವಣಿಗೆ ಕಂಡ ಈ ಬ್ಯಾಂಕು ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಬೃಹದಾಕಾರವಾಗಿ ಬೆಳೆದಿದ್ದು ಅದರ ಪಕ್ಷಿನೋಟ ದಿನಾಂಕ 31/03/2025 ಕ್ಕೆ ಈ ಕೆಳಗಿನಂತೆ ಇರುತ್ತದೆ.

ಎಸ್.ಆರ್. ಪಾಟೀಲ್
ಅಧ್ಯಕ್ಷರು

ಎಸ್.ಆರ್. ಮೇಲ್ನಾಡ
ಉಪಾಧ್ಯಕ್ಷರು

ಜಿ.ಎಸ್.ಬನಹಟ್ಟಿ
ಪ್ರಧಾನ ವ್ಯವಸ್ಥಾಪಕರು

ಪ್ರಧಾನ ಕಛೇರಿ ಹಾಗೂ ಮುಖ್ಯ ಬಜಾರ ಶಾಖೆಯ ಸುಸಜ್ಜಿತ ಸ್ವಂತ ಕಟ್ಟಡವನ್ನು ಹೊಂದಿದ್ದು, ತನ್ನ ಎಲ್ಲಾ ಶಾಖೆಗಳಲ್ಲಿ ಗಣಕೀಕರಣದ ಸೇವೆ ಒದಗಿಸುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಎನಿ ಬ್ರ್ಯಾಂಚ್ ಬ್ಯಾಂಕಿಂಗ್ ಹಾಗೂ ದೇಶಾದ್ಯಂತ ಶೀಘ್ರ ಹಣ ವರ್ಗಾವಣೆಗಾಗಿ ಆರ್.ಟಿ.ಜಿ.ಎಸ್. ಹಾಗೂ ಎನ್.ಇ.ಎಫ್.ಟಿ ಸೌಲಭ್ಯಗಳನ್ನು ಒದಗಿಸುತ್ತಿದೆ.

ಸಂಸ್ಥಾಪಕರು ಹಾಗೂ ಅಧ್ಯಕ್ಷರು ಆಗಿರುವ ಶ್ರೀ ಎಸ್. ಆರ್. ಪಾಟೀಲರವರ ದಕ್ಷ ನಾಯಕತ್ವದಲ್ಲಿ ಶ್ರೀ ಎಸ್. ಆರ್. ಮೇಲ್ನಾಡ ಉಪಾಧ್ಯಕ್ಷರವರ ಹಿರಿತನದಲ್ಲಿ ಹಾಗೂ ನಿರ್ದೇಶಕರುಗಳಾದ ಶ್ರೀ ಎಚ್.ಎ. ಕೊಪ್ಪಳ, ಶ್ರೀ ಕೆ.ಎಸ್.ಪತ್ರಿ, ಶ್ರೀಮತಿ ವಿ.ಪಿ. ಆಯಾಚೀತ, ಶ್ರೀ ಎನ್.ಎನ್. ಪಾಟೀಲ, ಶ್ರೀ ಪಿ.ಬಿ. ಗುರಾಣಿ, ಶ್ರೀ ಡಿ.ಬಿ. ಮಮದಾಪೂರ, ಶ್ರೀ ಎ.ಎಚ್. ಬೀಳಗಿ, ಶ್ರೀಮತಿ ಬಿ.ಆರ್. ಬಾರಕೇರ, ಶ್ರೀ ಬಿ.ಬಿ. ಕೂಗಟಿ, ಶ್ರೀ ಎಂ.ಎನ್. ಪಾಟೀಲ, ಶ್ರೀ ಜಿ.ಎಸ್.ಕೆರೂರ, ಶ್ರೀ ಬಿ.ಎಸ್. ಮೊಖಾಶಿ, ಶ್ರೀಎಂ.ಎಲ್. ಕೆಂಪಲಿಂಗಣ್ಣವರ ಶ್ರೀ ವಿ.ಎಸ್. ಮುರಾಳ, ಶ್ರೀ ಎಸ್.ಎಸ್. ರಂಗನಗೌಡರ ಅಲ್ಲದೇ ತಜ್ಞ ವೃತ್ತಿಪರ ನಿರ್ದೇಶಕರಾದ ಶ್ರೀ ಎಸ್.ಕೆ.ಯಡಹಳ್ಳಿ ಹಾಗೂ ಶ್ರೀ ಎಸ್.ಎ. ನೀರಲಗಿ ಇವರ ಮಾರ್ಗದರ್ಶನದಲ್ಲಿ ಎಲ್ಲಾ ಶಾಖೆಗಳ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಸಹಯೋಗದೊಂದಿಗೆ ಶ್ರೀ ಕೆ.ಎಸ್. ಜೀವನಕುಮಾರ ನಿವೃತ್ತ ಆರ್.ಬಿ.ಐ. ಅಧಿಕಾರಿಗಳು ಬೆಂಗಳೂರು ಇವರ ಸಲಹೆಗಳೊಂದಿಗೆ ಹಾಗೂ ಶ್ರೀ ಆಯ್.ವಿ. ಬಸರಕೋಡ, ಅಭಿವೃದ್ಧಿ ಅಧಿಕಾರಿಗಳು ಇವರ ಸಮಯೋಚಿತ ಸಲಹೆದೊಂದಿಗೆ ಹಿಂದಿನ ನಿವೃತ್ತ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಲ್.ಬಿ. ಕುರ್ತಕೋಟಿ ಹಾಗೂ ಇಂದಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಜಿ.ಎಸ್. ಬನಹಟ್ಟಿ ಇವರ ದಕ್ಷ ಆಡಳಿತದಲ್ಲಿ 117 ಜನ ಸಿಬ್ಬಂದಿಗಳ ಪ್ರಾಮಾಣಿಕ ಸೇವೆ ಹಾಗೂ ಸದಸ್ಯರ ಹಾಗೂ ಗ್ರಾಹಕರ ಅತ್ಯುತ್ತಮ ಸಹಕಾರದಿಂದಾಗಿ ಬ್ಯಾಂಕು ಪ್ರಗತಿಯ ಪಥದತ್ತ ದಾಪುಗಾಲು ಹಾಕುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಪಕ್ಷಿನೋಟ (ರೂ. ಕೋಟಿಗಳಲ್ಲಿ)

ಅ.ನಂ.	ವಿವರ	ಮೊತ್ತ
1	ಶೇರು ಬಂಡವಾಳ	21.07 ಕೋಟಿ
2	ನಿಧಿಗಳು	80.80 ಕೋಟಿ
3	ಠೇವಣಿಗಳು	757.13 ಕೋಟಿ
4	ಸಾಲ–ಮುಂಗಡಗಳು	474.44 ಕೋಟಿ
5	ದುಡಿಯುವ ಬಂಡವಾಳ	881.84 ಕೋಟಿ
6	ಲಾಭ	3.05 ಕೋಟಿ

ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕ ನಿ., ವಿಜಯಪುರ

ಆಡಳಿತ ಕಚೇರಿ: ಶ್ರೀ ಸಿದ್ಧೇಶ್ವರ ರಸ್ತೆ, ವಿಜಯಪುರ 586 101 Tel: 0852-251272, E-Mail: shiddeshwarbank@gmail.com

ದಿನಾಂಕ 31-03-2025 ರ ಅಂತ್ಯಕ್ಕಿದ್ದಂತೆ ಬ್ಯಾಂಕಿನ ಹಣಕಾಸಿನ ಅಂಕಿ-ಅಂಶಗಳ ವಿವರ (ರೂ. ಕೋಟಿಗಳಲ್ಲಿ)

ಕ್ರಸಂ.	ವಿವರಗಳು	31–03–2025	ಕ್ರಸಂ.	ವಿವರಗಳು	31–03–2025
1	ಶೇರು ಬಂಡವಾಳ	17.25	6	ಹೂಡಿಕೆಗಳು	309.93
2	ನಿಧಿಗಳು	53.54	7	ನಿವ್ವಳ ಲಾಭ	3.15
3	ಠೇವುಗಳು	542.55	8	ಅನುತ್ಪಾದಕ ಆಸ್ತಿಗಳ ಮೊತ್ತ ಶೇಕಡಾವಾರು	24.88
4	ಸಾಲ ಮತ್ತು ಮುಂಗಡಗಳು	266.37	9	ನಿವ್ವಳ ಅನುತ್ಪಾದಕ ಆಸ್ತಿಗಳ ಮೊತ್ತ ಹಾಗೂ ಶೇಕಡಾವಾರು	1.94%
5	ದುಡಿಯುವ ಬಂಡವಾಳ	642.71	10	ಬಂಡವಾಳ ಪರ್ಯಾಪ್ತ ಅನುಪಾತ CRAR	17.19

ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರು

1	ಶ್ರೀ ವಿಜಯಕುಮಾರ ಡಿ. ಇಜೇರಿ,	ಅಧ್ಯಕ್ಷರು,	12	ಡಾ|| ಶ್ರೀ ಸಂಜೀವ ಎಸ್. ಪಾಟೀಲ (ಮುಳವಾಡ)	ನಿರ್ದೇಶಕರು
2	ಶ್ರೀಮತಿ.ಸೌಭಾಗ್ಯ ಎಸ್.ಭೋಗಶೆಟ್ಟಿ,	ಉಪಾಧ್ಯಕ್ಷರು,	13	ಶ್ರೀ ವ್ಹಿ.ಎಸ್. ಜತ್ತಿ	ನಿರ್ದೇಶಕರು
3	ಶ್ರೀ ಶ್ರೀಹರ್ಷ ಎಸ್. ಪಾಟೀಲ,	ನಿರ್ದೇಶಕರು	14	ಶ್ರೀಮತಿ ಕೆ. ವ್ಹಿ. ಅವರಂಗಬಾದ	ನಿರ್ದೇಶಕರು
4	ಶ್ರೀ ಜಿ.ಎಸ್. ಗಚ್ಚಿನಮಠ	ನಿರ್ದೇಶಕರು	15	ಶ್ರೀಮತಿ ಬೋರಮ್ಮ ಬಿ. ಗೊಬ್ಬೂರ	ನಿರ್ದೇಶಕರು
5	ಶ್ರೀ ಎಸ್.ಜಿ. ಗಚ್ಚಿನಕಟ್ಟಿ	ನಿರ್ದೇಶಕರು	16	ಶ್ರೀ ಪಿ. ಎಸ್. ಬಗಲಿ	ನಿರ್ದೇಶಕರು
6	ಶ್ರೀ ವ್ಹಿ.ಎಸ್. ಪಾಟೀಲ (ಮಸಬಿನಾಳ)	ನಿರ್ದೇಶಕರು	17	ಶ್ರೀ ಜಿ.ಎಸ್.ಗಂಗನಳ್ಳಿ	ನಿರ್ದೇಶಕರು
7	ಶ್ರೀ ಆಯ್.ಎಮ್. ಪಟ್ಟಣಶೆಟ್ಟಿ	ನಿರ್ದೇಶಕರು	18	ಶ್ರೀ ಎಸ್.ಎಸ್. ಭೋವಿ	ನಿರ್ದೇಶಕರು
8	ಶ್ರೀ ಆರ್.ಎಮ್. ಪಾಟೀಲ (ಉಪ್ಪಲದಿನ್ನಿ)	ನಿರ್ದೇಶಕರು	19	ಶ್ರೀ ಎ.ಎಮ್. ನಾಯ್ಕೋಡಿ	ನಿರ್ದೇಶಕರು
9	ಶ್ರೀ ಆರ್.ಎಚ್.ಬಿದನೂರ	ನಿರ್ದೇಶಕರು	20	ಶ್ರೀ ಎಸ್.ಎಸ್. ಪಾಟೀಲ (ತೊನಶ್ಯಾಳ)	ವೃತ್ತಿಪರ ನಿರ್ದೇಶಕರು
10	ಶ್ರೀ ಆರ್.ಎಸ್.ಬಿಜ್ಜರಗಿ	ನಿರ್ದೇಶಕರು	21	ಶ್ರೀ ಎಮ್.ಸಿ. ಗುಂದಗಿ	ವೃತ್ತಿಪರ ನಿರ್ದೇಶಕರು
11	ಶ್ರೀ ವ್ಹಿ.ಡಿ. ಕರ್ಪೂರಮಠ	ನಿರ್ದೇಶಕರು	22	ಶ್ರೀ ಜೆ.ಬಿ. ಕಲ್ಯಾಣಶೆಟ್ಟಿ	ಪ್ರಧಾನ ವ್ಯವಸ್ಥಾಪಕರು(ಪ್ರ)

ಠೇವುಗಳ ಮೇಲಿನ ಬಡ್ಡಿದರದ ವಿವರ		ಸಾಲಗಳ ಮೇಲಿನ ಬಡ್ಡಿದರದ ವಿವರ	
30 ದಿವಸಗಳಿಗೆ	3.00%	ಪಗಾರ ಅಧಿಕಾರ ಪತ್ರದ ಮೇಲಿನ ಜಾತಿನೀಶಿ (ಈಎಂಐ)	13.50%
31ರಿಂದ 90 ದಿವಸಗಳವರೆಗೆ	4.00%	ರೋಖಪತ್ತ ಸಾಲ	14.00%
91 ರಿಂದ 180 ದಿವಸಗಳವರೆಗೆ	5.00%	ಗೃಹ ನಿರ್ಮಾಣ ಸಾಲ (ಈಎಂಐ)	9.00%
181 ದಿವಸಗಳಿಂದ 364 ದಿವಸಗಳವರೆಗೆ	6.50%	ಮಾಧ್ಯಮಿಕ ಸಾಲ (ಈಎಂಐ)	12.50%
1 ವರ್ಷ/365 ದಿವಸಗಳು ಮತ್ತು ಮೇಲ್ಪಟ್ಟು 2 ವರ್ಷಗಳವರೆಗೆ	8.00%	ಎಚ್ ಪಿ (ಈಎಂಐ) 1.ದ್ವಿಚಕ್ರ ವಾಹನ 2.ನಾಲ್ಕು ಚಕ್ರ ವಾಹನ	13.50% 12.50%
2 ವರ್ಷ ಮತ್ತು ಮೇಲ್ಪಟ್ಟು 10 ವರ್ಷಗಳವರೆಗೆ	8.00%	ಚಿಕ್ಕ ಉದ್ದಿಮೆ ಸಾಲ (ಈಎಂಐ)	13.50%
ಉಳಿತಾಯ ಖಾತೆ	3.00%	ಓ.ಡಿ.ಎಂ.ಎಸ.ಎಂ.ಇ.	9.00%
ಹಿರಿಯ ನಾಗರಿಕರಿಗೆ ಮೇಲ್ಕಾಣಿಸಿದ ಎಲ್ಲ ಅವಧಿಯ ಠೇವುಗಳಿಗೆ ಶೇಕಡಾ 0.5 % ಹೆಚ್ಚಿನ ಬಡ್ಡಿದರ ನೀಡುವುದು		ಬಂಗಾರ ಆಭರಣಗಳ ಸಾಲ ಕೇವಲ 0.83% ಬಡ್ಡಿದರದಲ್ಲಿ ಪ್ರತಿ ತಿಂಗಳಿಗೆ	10.00%
		ಎನ್.ಎಸ್.ಇ ಮತ್ತು ಕಿಸಾನ್ ವಿಕಾಸ ಪತ್ರಗಳ ಮೇಲಿನ ಅಡವಿನ ಸಾಲ	12.00%

ವಿಶೇಷವಾಗಿ ತಮ್ಮ ಗಮನಕ್ಕೆ

ಶಿವಾನುಭವ ಕ್ಯಾಶ್ ಸರ್ಟಿಫಿಕೆಟ್ ಠೇವಿನ ಮೇಲೆ ಆಕರ್ಷಕ 9% ಬಡ್ಡಿದರದಲ್ಲಿ 8 ವರ್ಷಕ್ಕೆ ದ್ವಿಗುಣ

ಶ್ರೀ ಸಿದ್ಧೇಶ್ವರ ಆಸ್ತಿ ಸಾಲ ರೂ. 10ಲಕ್ಷ ಮೇಲ್ಪಟ್ಟು ರೂ. 1 ಕೋಟಿಯವರೆಗೆ (ಸಿಬಿಲ್ 700ರ ವರೆಗೆ ಶೇ.13.00%, ಸಿಬಿಲ್ 700 ಕ್ಕಿಂತ ಮೇಲ್ಪಟ್ಟು ಶೇ.12.50%,

ಕ್ರೆಡಿಟ್ ಅಂಕ ಚೆನ್ನಾಗಿದ್ದವನೇ ಜಾಣ!

▸▸ ವಸಂತ ಜಿ. ಹೆಗಡೆ

ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ವೃತ್ತಾಧಿಕಾರಿ (ಸಿಬಿಒ) ಹುದ್ದೆಗೆ ವ್ಯಕ್ತಿಯೊಬ್ಬರನ್ನು ನೇಮಕ ಮಾಡಿಕೊಂಡಿದ್ದನ್ನು ಈಚೆಗೆ ರದ್ದು ಮಾಡಿತು. ಈ ವ್ಯಕ್ತಿಯ ಕ್ರೆಡಿಟ್ ಅಂಕವು ಚೆನ್ನಾಗಿ ಇರಲಿಲ್ಲ ಎಂಬ ಕಾರಣಕ್ಕೆ ಬ್ಯಾಂಕ್ ಈ ತೀರ್ಮಾನ ತೆಗೆದುಕೊಂಡಿತು. ಆದರೆ, ಬ್ಯಾಂಕಿನ ಈ ತೀರ್ಮಾನವನ್ನು ಕೆಲಸ ಕಳೆದುಕೊಂಡ ವ್ಯಕ್ತಿಯು ಮದ್ರಾಸ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು. ತಾನು ಎಲ್ಲ ಬಾಕಿ ಸಾಲಗಳನ್ನು ಮರುಪಾವತಿ ಮಾಡಿರುವುದಾಗಿ, ಕ್ರೆಡಿಟ್ ಕಾರ್ಡ್ ಬಿಲ್ ಮೊತ್ತವನ್ನು ಪಾವತಿ ಮಾಡಿರುವುದಾಗಿ, ತನ್ನನ್ನು ಯಾವುದೇ ಬ್ಯಾಂಕ್ ಸುಸ್ತಿದಾರ ಎಂದು ಘೋಷಣೆ ಮಾಡಿಲ್ಲ ಎಂಬುದಾಗಿ ಅರ್ಜಿದಾರ ನ್ಯಾಯಾಲಯಕ್ಕೆ ವಿವರಿಸಿದರು.

ಅರ್ಜಿಯ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್, ಎಸ್‌ಬಿಐ ತೀರ್ಮಾನವನ್ನು ಎತ್ತಿಹಿಡಿಯಿತು. ಅರ್ಜಿಯನ್ನು ವಜಾಗೊಳಿಸಿತು. ಹಣಕಾಸಿನ ವಿಚಾರದಲ್ಲಿ ಶಿಸ್ತು ಕಾಯ್ದುಕೊಳ್ಳದ ವ್ಯಕ್ತಿಯನ್ನು ಸಾರ್ವಜನಿಕರ ಹಣವನ್ನು ನಿರ್ವಹಿಸುವ ಕೆಲಸಗಳಲ್ಲಿ ನಂಬಲು ಸಾಧ್ಯವಿಲ್ಲ ಎಂದು ಕೋರ್ಟ್ ಹೇಳಿತು. ಇಂದಿನ ಜಗತ್ತಿನಲ್ಲಿ ಕ್ರೆಡಿಟ್ ಅಂಕವು ವ್ಯಕ್ತಿಯು ಹಣಕಾಸಿನ ವಿಚಾರದಲ್ಲಿ ಎಷ್ಟರಮಟ್ಟಿಗೆ ಒಳ್ಳೆಯ ಹೆಸರು ಹೊಂದಿದ್ದಾನೆ ಎಂಬುದನ್ನು ತಿಳಿಸುತ್ತದೆ. ಅಲ್ಲದೆ, ಸಾಲಗಳನ್ನು ನಿಭಾಯಿಸಲು ಆತ ಎಷ್ಟರಮಟ್ಟಿಗೆ ಸಮರ್ಥ ಎಂಬುದನ್ನೂ ಅದು ಹೇಳುತ್ತದೆ.

ವ್ಯಕ್ತಿಯು ಗೃಹಸಾಲಕ್ಕೆ, ಚಿನ್ನದ ಮೇಲಿನ ಸಾಲಕ್ಕೆ, ವಾಹನ ಸಾಲಕ್ಕೆ, ವೈಯಕ್ತಿಕ ಸಾಲಕ್ಕೆ ಅಥವಾ ಕ್ರೆಡಿಟ್ ಕಾರ್ಡ್ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದಾಗ ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ), ಕಿರುಸಾಲ ಕಂಪನಿಗಳು, ಗೃಹಸಾಲ ಕಂಪನಿಗಳು ಹಾಗೂ ಫಿನ್‌ಟೆಕ್ ಕಂಪನಿಗಳು ಮೊದಲು ಗಮನಿಸುವುದು ಕ್ರೆಡಿಟ್ ಅಂಕಗಳನ್ನು. ಅರ್ಜಿ ಸಲ್ಲಿಸಿರುವ ವ್ಯಕ್ತಿಯ ಸಾಮರ್ಥ್ಯ ಹೇಗಿದೆ ಎಂಬುದನ್ನು ಪರಿಶೀಲಿಸಲು ಹಾಗೂ ಸಾಲ ನೀಡುವ ಬಗ್ಗೆ ತೀರ್ಮಾನಿಸಲು ಅವು ಈ ಅಂಕವನ್ನು ಗಮನಿಸುತ್ತವೆ. ಬ್ಯಾಂಕುಗಳು ಹಾಗೂ ಸಾಲ ನೀಡುವ ಕಂಪನಿಗಳು ಮಾತ್ರವೇ ಅಲ್ಲದೆ, ಇತರ ಕೆಲವು ಕಂಪನಿಗಳೂ ಕ್ರೆಡಿಟ್ ಅಂಕವನ್ನು ಪರಿಶೀಲಿಸುತ್ತವೆ.

ಕೆಲವು ಬಗೆಯ ವಿಮಾ ಪಾಲಿಸಿಗಳ ಪ್ರೀಮಿಯಂ ಮೊತ್ತವನ್ನು ತೀರ್ಮಾನಿಸುವ ಸಂದರ್ಭದಲ್ಲಿ ವಿಮಾ ಕಂಪನಿಗಳು ಕೂಡ ಕ್ರೆಡಿಟ್ ಅಂಕವನ್ನು ಪರಿಶೀಲಿಸುತ್ತಿವೆ. ಮನೆ ಅಥವಾ ಕಚೇರಿ ಸ್ಥಳವನ್ನು ಬಾಡಿಗೆ ಆಧಾರದಲ್ಲಿ ಕೊಡುವವರು ಕೂಡ ಕ್ರೆಡಿಟ್ ವರದಿಯನ್ನು ಕೇಳುವುದಿದೆ. ಬಾಡಿಗೆಗೆ ಪಡೆಯುವ ವ್ಯಕ್ತಿಗೆ ಬಾಡಿಗೆ ಮೊತ್ತವನ್ನು ಸಕಾಲದಲ್ಲಿ ಪಾವತಿಸುವ ಸಾಮರ್ಥ್ಯ ಇದೆಯೇ ಎಂಬುದನ್ನು ಅರಿಯಲು ಅವರು ಈ ವರದಿಯನ್ನು ಗಮನಿಸುತ್ತಾರೆ. ಚುಟುಕಾಗಿ ಹೇಳಬೇಕು ಎಂದಾದರೆ ಈ ಅಂಕವು ವ್ಯಕ್ತಿಯ ಸಾಲಗಳು ಹಾಗೂ ಅವುಗಳ ಮರುಪಾವತಿಯ ಒಂದು ಚಿತ್ರಣ ನೀಡುತ್ತವೆ.

ಹೀಗಾಗಿ ಕ್ರೆಡಿಟ್ ಅಂಕಗಳ ಮಹತ್ವ ಹಾಗೂ ಅವುಗಳ ಅಗತ್ಯವನ್ನು ಅರ್ಥ ಮಾಡಿಕೊಳ್ಳುವುದು ಮಹತ್ವದ್ದಾಗುತ್ತದೆ. ಅಲ್ಲದೆ, ಒಳ್ಳೆಯ ಕ್ರೆಡಿಟ್ ಅಂಕ ಅಂದರೆ ಏನೆಂಬುದನ್ನೂ ತಿಳಿಯುವುದು ಮುಖ್ಯವಾಗುತ್ತದೆ.

ಸಾಲಗಾರರಿಗೆ ಅಂಕ ಯಾರು ನೀಡುತ್ತಾರೆ?

ಭಾರತದಲ್ಲಿ ಪ್ರಮುಖವಾಗಿ ನಾಲ್ಕು ಸಂಸ್ಥೆಗಳು ಈ ಅಂಕವನ್ನು ನೀಡುತ್ತವೆ. ಟ್ರಾನ್ಸ್‌ಯೂನಿಯನ್ ಸಿಬಿಲ್ ಎಕ್ಸ್‌ಪೀರಿಯನ್

ಈಕ್ವಿಫಾಕ್ಸ್ ಮತ್ತು ಸಿಆರ್‌ಐಎಫ್ ಹೈಮಾರ್ಕ್ ಆ ಸಂಸ್ಥೆಗಳು. ಸಿಬಿಲ್ ಸಂಸ್ಥೆಯು ಅದೆಷ್ಟು ಜನಪ್ರಿಯವಾಗಿದೆ ಎಂದರೆ ಕ್ರೆಡಿಟ್ ಅಂಕಗಳನ್ನು ಈ ಸಂಸ್ಥೆಯ ಹೆಸರಿನ ಜೊತೆಯೇ ಗುರುತಿಸಲಾಗುತ್ತಿದೆ! ಈ ಸಂಸ್ಥೆಗಳು ಬ್ಯಾಂಕುಗಳು ಎನ್‌ಬಿಎಫ್‌ಸಿಗಳಿಂದ ಸಾಲಕ್ಕೆ ಸಂಬಂಧಿಸಿದ ವಿವರಗಳನ್ನು ಪಡೆದು ವ್ಯಕ್ತಿಗಳಿಗೆ ಅಂಕ ನೀಡುತ್ತವೆ.

ಎಷ್ಟಿದ್ದರೆ ಒಳ್ಳೆಯ ಅಂಕ?

ಇದಕ್ಕೆ ನಿರ್ದಿಷ್ಟವಾದ ಉತ್ತರ ಇಲ್ಲ. ಕ್ರೆಡಿಟ್ ಅಂಕಗಳು ಸಾಮಾನ್ಯವಾಗಿ 300ರಿಂದ 900ರ ನಡುವೆ ಇರುತ್ತವೆ. ಈ ಅಂಕಗಳು ವ್ಯಕ್ತಿಯ ಸಾಲ ಪಡೆಯುವ ಅರ್ಹತೆಯನ್ನು ಹೇಳುತ್ತವೆ.

- 750ಕ್ಕಿಂತ ಹೆಚ್ಚಿನ ಅಂಕ ಇರುವುದು ಅತ್ಯುತ್ತಮ ಎಂದು ಪರಿಗಣಿತವಾಗಿದೆ. ಈ ಮಟ್ಟದ ಅಂಕ ಹೊಂದಿರುವವರ ಮರುಪಾವತಿ ಇತಿಹಾಸ ಅತ್ಯುತ್ತಮವಾಗಿರುತ್ತದೆ ಇವರಿಗೆ ಸಾಲ ನೀಡುವಲ್ಲಿ ಹೆಚ್ಚಿನ ಅಪಾಯ ಇರುವುದಿಲ್ಲ. ಈ ಮಟ್ಟದ ಅಂಕ ಹೊಂದಿರುವವರು ಸಾಲದ ಮೇಲಿನ ಬಡ್ಡಿ ದರದಲ್ಲಿ ವಿನಾಯಿತಿ ಕೇಳಬಹುದು ಹೆಚ್ಚಿನ ಮೊತ್ತದ ಸಾಲ ಕೋರಬಹುದು.
- ಕ್ರೆಡಿಟ್ ಅಂಕವು 700ರಿಂದ 749ರ ನಡುವೆ ಇದ್ದರೆ ಅದನ್ನು ಒಳ್ಳೆಯ ಅಂಕ ಎಂದು ಪರಿಗಣಿಸಲಾಗುತ್ತದೆ. ಈ ಮಟ್ಟದ ಅಂಕ ಇರುವವರಿಗೆ ಅನುಕೂಲಕರ ಷರತ್ತುಗಳೊಂದಿಗೆ ಸಾಲ ಸಿಗುತ್ತದೆ.
- 650 ರಿಂದ 699ರ ನಡುವೆ ಕ್ರೆಡಿಟ್ ಅಂಕ ಇದ್ದರೆ ಅದನ್ನು ಸಾಮಾನ್ಯ ಮಟ್ಟ ಎಂದು ಪರಿಗಣಿಸಲಾಗುತ್ತದೆ. ಈ ಮಟ್ಟದ ಅಂಕ ಹೊಂದಿರುವವರು ಸಾಲ ಪಡೆಯಲು ಅರ್ಹರಾಗಿರುತ್ತಾರಾದರೂ ಅವರಿಗೆ ಹೆಚ್ಚಿನ ಅನುಕೂಲಗಳು ಸಿಗುವುದಿಲ್ಲ. ಬಡ್ಡಿಯ ದರವೂ ಹೆಚ್ಚಿರಬಹುದು. ಇವರು ತಮ್ಮ ಕ್ರೆಡಿಟ್ ಅಂಕವನ್ನು ಸುಧಾರಿಸಿಕೊಳ್ಳುವ ಅಗತ್ಯ ಇರುತ್ತದೆ.
- 550 ರಿಂದ 649ರವರೆಗಿನ ಮಟ್ಟದಲ್ಲಿ ಅಂಕ ಇದ್ದರೆ ಅದನ್ನು ಕಳಪೆ ಎಂದು ಪರಿಗಣಿಸಲಾಗುತ್ತದೆ. ಇಷ್ಟು ಅಂಕ ಹೊಂದಿರುವವರು ಸಾಲ ಕೋರಿ ಸಲ್ಲಿಸುವ ಅರ್ಜಿಗೆ ಅನುಮೋದನೆ ಸಿಗುವುದು ಕಷ್ಟ. ಒಂದುವೇಳೆ ಅನುಮೋದನೆ ದೊರೆತರೂ ಹೆಚ್ಚಿನ ಬಡ್ಡಿದರ ನಿಗದಿ ಮಾಡಬಹುದು. ಈ ಮಟ್ಟದ ಅಂಕ ಹೊಂದಿರುವವರು ಅದನ್ನು ಉತ್ತಮಪಡಿಸಿಕೊಳ್ಳಲು ಗಮನ ಕೊಡಬೇಕು.
- 550ಕ್ಕಿಂತ ಕಡಿಮೆ ಅಂಕ ಹೊಂದಿರುವವರ ಸಾಲದ ಅರ್ಜಿಯು ತಿರಸ್ಕೃತವಾಗುವ ಸಾಧ್ಯತೆ ಹೆಚ್ಚು. ಇಷ್ಟು ಅಂಕ ಹೊಂದಿರುವವರ ಸಾಲ ಮರುಪಾವತಿ ಇತಿಹಾಸ ಚೆನ್ನಾಗಿಲ್ಲ ಎಂದು ಅರ್ಥ, 300ಕ್ಕಿಂತ ಕಡಿಮೆ ಅಂಕ ಹೊಂದಿದ್ದರೆ ಅವರು ಸಾಲದ ಕಂತುಗಳನ್ನು ಸರಿಯಾಗಿ ಕಟ್ಟಿಲ್ಲ ಸಾಲವನ್ನು ವಿಪರೀತವಾಗಿ ಬಳಸಿಕೊಂಡಿದ್ದಾರೆ ಎಂದು ಅರ್ಥ.ಅಂಕವನ್ನು ಹೇಗೆ ಸುಧಾರಿಸಿಕೊಳ್ಳಬಹುದು?

ಕ್ರೆಡಿಟ್ ಅಂಕ ನೀಡುವ ಸಂಸ್ಥೆಗಳು ಸಾಲದಾತ ಕಂಪನಿಗಳು ತಮಗೆ ಕಳುಹಿಸುವ ಮಾಹಿತಿಯನ್ನು ಮಾತ್ರವೇ ನೆಚ್ಚಿಕೊಂಡಿರುತ್ತವೆ. ಈ ಸಂಸ್ಥೆಗಳಿಗೆ ವ್ಯಕ್ತಿಗಳ ಸಾಲದ ಮರುಪಾವತಿ ಇತಿಹಾಸವನ್ನು ಅರಿಯಲು ಬೇರೆ ಯಾವುದೇ ಮಾರ್ಗ ಇರುವುದಿಲ್ಲ. ಸಾಲದಾತ ಕಂಪನಿಗಳ ಕಡೆಯಿಂದ ಆಗುವ ಯಾವುದೇ ಲೋಪವು ಕ್ರೆಡಿಟ್ ಅಂಕದ ಮೇಲೆ ಪರಿಣಾಮ ಬೀರಬಹುದು.

ಸಾಲ ಪಡೆದ ವ್ಯಕ್ತಿಯು ಎಲ್ಲ ಕಂತುಗಳನ್ನು ಸರಿಯಾಗಿ ಪಾವತಿ ಮಾಡಿದ್ದರೂ ಸಾಲದಾತ ಕಂಪನಿಯ ಕಡೆಯಿಂದ ತಪ್ಪು ವರದಿ ಸಲ್ಲಿಕೆಯಾದರೆ ಅಂಕಗಳು ಕಡಿಮೆ ಆಗುತ್ತವೆ. ನಾಲ್ಕೂ ಸಂಸ್ಥೆಗಳಿಂದ ಪ್ರತಿ ವರ್ಷ ತಲಾ ಒಂದು ವರದಿಯ ಉಚಿತವಾಗಿ ಸಿಗುವ ಕಾರಣ ಸಾಲ ಪಡೆದವರು ಕಾಲಕಾಲಕ್ಕೆ ವರದಿಯನ್ನು ಪರಿಶೀಲಿಸುತ್ತ ಇರಬೇಕು. ವರದಿಯಲ್ಲಿ ಯಾವುದೇ ಲೋಪಗಳು ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಹಲವು ಸಾಲದಾತ ಕಂಪನಿಗಳಲ್ಲಿ ಸಾಲಕ್ಕಾಗಿ ಮತ್ತೆ ಮತ್ತೆ ವಿಚಾರಣೆ ನಡೆಸಿದ್ದರೆ ಅದು ಕೂಡ ಅಂಕದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದು ನೆನಪಿರಲಿ. ವರದಿಯಲ್ಲಿ ಲೋಪಗಳು ಇದ್ದರೆ ವರದಿ ಸಿದ್ದಪಡಿಸಿದ ಸಂಸ್ಥೆಗೆ ಹಾಗೂ ಸಂಬಂಧಪಟ್ಟ ಸಾಲದಾತ ಕಂಪನಿಗೆ ಆ ಬಗ್ಗೆ ಒಂದು ಇ–ಮೇಲ್ ಕಳುಹಿಸಿಯೂ ಸಮಸ್ಯೆ ಪರಿಹರಿಸಿಕೊಳ್ಳಬಹುದು. ಬ್ಯಾಂಕ್‌ಗಳು ನೀಡುವ ಎನ್‌ಒಸಿ ಸಾಲ ತೀರುವಳಿ ಆಗಿರುವ ಪತ್ರ ಹಾಗೂ ಬ್ಯಾಂಕ್ ವಹಿವಾಟಿನ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಂಡರೆ ತಕರಾರುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿಕೊಳ್ಳಬಹುದು. ನೀವು ಯಾರದಾದರೂ ಸಾಲಕ್ಕೆ ಜಾಮೀನುದಾರ ಆಗಿ ಸಹಿ ಮಾಡಿದ್ದರೆ ಅವರಿಂದ ಸಾಲ ಮರುಪಾವತಿ ಬಾಕಿ ಆಗಿಲ್ಲ ಎಂಬುದನ್ನು ಕೂಡ ಖಚಿತಪಡಿಸಿಕೊಳ್ಳಿ. ಅವರು ಸಾಲವನ್ನು ಸರಿಯಾಗಿ ಹಿಂದಿರುಗಿಸದೆ ಇದ್ದರೆ ನಿಮ್ಮ ಕ್ರೆಡಿಟ್ ಅಂಕದ ಮೇಲೆ ಪರಿಣಾಮ ಉಂಟಾಗುತ್ತದೆ.

–ಕೃಪೆ

ರಾಜ್ಯದ ಪಟ್ಟಣ ಬ್ಯಾಂಕುಗಳ ಪ್ರತಿಷ್ಠಿತ ಬ್ಯಾಂಕುಗಳಲ್ಲಿ ಒಂದಾದ ಬೆಂಗಳೂರಿನ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ., - ನಡೆದು ಬಂದ ಹಾದಿಯ ಯಶೋಗಾಥೆ

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಮೊದಲಿಗೆ 1968-1969ರಲ್ಲಿ ಜನತಾ ಸೇವಾ ಪತ್ತಿನ ಸಹಕಾರ ಸಂಘವಾಗಿ ನೋಂದಣಿ ಪಡೆದು ದಿನಾಂಕ : 04-10-1969ರಲ್ಲಿ ವಿಜಯದಶಮಿ ದಿನದಂದೇ, ಶ್ರೀ ದೊರೆಸ್ವಾಮಿ ಗೌಂಡರ್‌ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಥಮವಾಗಿ ಮಾಗಡಿ ರಸ್ತೆಯಲ್ಲಿ ಕಾರ್ಯಾರಂಭ ಮಾಡಿ ಕೆಲವೊಂದು ಏಳು-ಬೀಳುಗಳೊಂದಿಗೆ 1989ನೇ ಇಸವಿಯವರೆಗೂ ಯಾವುದೇ ರೀತಿಯ ಪ್ರಗತಿಯನ್ನು ಕಾಣದಾಗಿತ್ತು.

ಆ ಸಂದರ್ಭದಲ್ಲಿ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದ ಶ್ರೀ ಅರುಣಾಚಲಂ (ಕನ್ನಡ ಚಲನಚಿತ್ರ ನಾಯಕ ನಟರಾದ ವಿ. ರವಿಚಂದ್ರನ್‌ರವರ ಮಾವನವರು) ಹಾಗೂ ಕಾರ್ಯದರ್ಶಿಗಳಾಗಿದ್ದ ಶ್ರೀಮಾನ್ ಟಿ. ತಿಮ್ಮಯ್ಯ ಹಾಗೂ ಉಪಾಧ್ಯಕ್ಷರಾಗಿದ್ದ ಶ್ರೀ ಬಸವರಾಜಪ್ಪ ರವರುಗಳು ಬ್ಯಾಂಕನ್ನು ನಡೆಸಲು ಕಷ್ಟಸಾಧ್ಯವೆಂದು ಶೂನ್ಯಾವಸ್ಥೆ ಯಲ್ಲಿದ್ದ ಬ್ಯಾಂಕನ್ನು ಪುನರುಜ್ಜೀವನಗೊಳಿಸುವಂತಹ ತಂಡದ ಅನ್ವೇಷಣೆಯಲ್ಲಿದ್ದವರಿಗೆ ಸಿಕ್ಕಿದ್ದೇ ಆರ್.ಬಿ. ಮಲ್ಲಿಕಾರ್ಜುನಯ್ಯ, ಸಿ.ಹೆಚ್. ಸುಬ್ಬೋಜಿರಾವ್, ಎನ್.ಸಿ. ಶ್ಯಾಮನೂರ್, ಸಿ. ರಾಮು, ರಾಜಣ್ಣ. ಜಿ., ಮರಿಯಪ್ಪ. ಪಿ., ಡಾ. ಪಿ.ಎಲ್. ವೆಂಕಟೇಶಮೂರ್ತಿ ಮತ್ತು ಇತರರು. ಇವರೆಲ್ಲರ ಸಹಕಾರದೊಂದಿಗೆ ಸಂಸ್ಥೆಯನ್ನು ಪುನರುಜ್ಜೀವನ ಮಾಡಲು ಉದ್ದೇಶಿಸಿ ಯೋಜನೆಗಳನ್ನು ರೂಪಿಸಿಕೊಂಡರು.

1989ನೇ ಇಸವಿಯಲ್ಲಿ ಮಾಗಡಿ ರಸ್ತೆಯಿಂದ ಆರ್.ಪಿ.ಸಿ ಲೇಔಟ್‌ಗೆ ಸ್ಥಳಾಂತರಿಸಿದ ನಂತರ ಸಿ.ಹೆಚ್. ಸುಬ್ಬೋಜಿರಾವ್‌ರವರು ಸಂಸ್ಥೆಯ ಅಧ್ಯಕ್ಷತೆಯನ್ನು ಹಾಗೂ ರಾಮು ಸಿ. ರವರು ಕಾರ್ಯದರ್ಶಿಯಾಗಿ ಮತ್ತು ಇತರರು ಸಂಸ್ಥೆಯನ್ನು ವಹಿಸಿಕೊಂಡಾಗ ಸಂಸ್ಥೆಯ ಷೇರು ಬಂಡವಾಳ ರೂ. 8.37 ಲಕ್ಷ, ಠೇವಣಿ ರೂ. 48.67 ಲಕ್ಷಗಳಾಗಿದ್ದು, ಈ ಆಡಳಿತ ಮಂಡಳಿಯ ನಿರಂತರ ನಿಸ್ವಾರ್ಥ, ದಕ್ಷ, ಪ್ರಾಮಾಣಿಕ ಸೇವೆಯ ಫಲ ಹಾಗೂ ಸಿಬ್ಬಂದಿಗಳ ಸಹಕಾರದಿಂದ ಜನ ಮನ್ನಣೆಯನ್ನು ಗಳಿಸುತ್ತಾ, ಹಂತ-ಹಂತವಾಗಿ ಪ್ರಗತಿಯ ಮೆಟ್ಟಿಲನ್ನು ಏರುತ್ತಾ ಬಂದಿತು. ಕೇವಲ ಇಬ್ಬರು ಸಿಬ್ಬಂದಿಗಳೊಂದಿಗೆ

ಕಾರ್ಯಾರಂಭಗೊಂಡ ಬ್ಯಾಂಕಿನ ಅಂದಿನ ನಿರ್ದೇಶಕರುಗಳು ಮನೆ ಮನೆಗೆ ತೆರಳಿ ಬ್ಯಾಂಕಿನ ಬಗ್ಗೆ ಪ್ರಚಾರ ಮಾಡಿ ಠೇವಣಿಯನ್ನು ಸಂಗ್ರಹಿಸಿ ಹೊಸ ಸದಸ್ಯರನ್ನು ಮಾಡಿಕೊಂಡು ತುಂಬಾ ಕಡಿಮೆ ಮಟ್ಟದಲ್ಲಿ ಸಾಲದ ವಿತರಣೆ ಪ್ರಾರಂಭಿಸಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ಏಳಿಗೆಗಾಗಿ ಅಂದಿನ ನಿರ್ದೇಶಕರಾಗಿದ್ದ, ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿದ್ದ ಶ್ರೀ. ಎಂ. ಕೃಷ್ಣಪ್ಪನವರ ಕೊಡುಗೆ ಅಪಾರವಾದುದು. ಅವರು ದೊಡ್ಡ ಮೊತ್ತದ ಠೇವಣಿಯನ್ನು ಬ್ಯಾಂಕಿನಲ್ಲಿ ಇಟ್ಟು ಬ್ಯಾಂಕಿನ ಅಭಿವೃದ್ಧಿಯ ರೂವಾರಿಗಳಾದರು. ಈ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ : 17-10-1996ರಂದು ಬ್ಯಾಂಕ್ ಪರವಾನಿಗೆ ನೀಡಿತು.

ಆರ್.ಪಿ.ಸಿ. ಬಡಾವಣೆಯಿಂದ ವಿಜಯನಗರ ಮುಖ್ಯ ರಸ್ತೆಗೆ ಬ್ಯಾಂಕ್ ಸ್ಥಳಾಂತರಗೊಂಡ ನಂತರ ಬ್ಯಾಂಕ್ ಹಂತ-ಹಂತವಾಗಿ

ಉನ್ನತ ಶ್ರೇಣಿಗೆ ಏರತೊಡಗಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷತೆಯನ್ನು ಶ್ರೀ ಎನ್.ಸಿ. ಶ್ಯಾಮನೂರ್‌ರವರು ಹಾಗೂ ಶ್ರೀ ಆರ್.ಜಿ. ಶಂಕರ್‌ರವರು ಉಪಾಧ್ಯಕ್ಷರಾಗಿ ಹಾಗೂ ಶ್ರೀ ಸಿ. ರಾಮುರವರು ಅಧಿಕೃತ ನಿರ್ದೇಶಕರಾಗಿ ಆಯ್ಕೆಗೊಂಡು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರ ಶ್ರಮದ ಫಲವಾಗಿ ಬ್ಯಾಂಕ್ ಲಾಭಗಳಿಸಲು ಪ್ರಾರಂಭವಾಗಿ ಸದಸ್ಯರಿಗೆ ಲಾಭಾಂಶಕೊಡಲು ಪ್ರಾರಂಬಿಸಿತು. ಎಲ್ಲಾ ನಿರ್ದೇಶಕರುಗಳು ಠೇವಣಿಗಳನ್ನು ಸಂಗ್ರಹಿಸಲು ತೀರ್ಮಾನಿಸಲಾಗಿ ಹಂತ-ಹಂತವಾಗಿ ಠೇವಣಿಗಳನ್ನು ವೃದ್ಧಿಸುತ್ತಾ ಸದಸ್ಯರನ್ನು ಹೆಚ್ಚಿಸುತ್ತಾ ಸಾಲ ಸೌಲಭ್ಯಗಳನ್ನು ಹೆಚ್ಚಿಸುತ್ತಾ, ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಶಂಸೆಗೆ ಪಾತ್ರವಾಯಿತು.

ನಂತರ 1999ರಲ್ಲಿ ಬ್ಯಾಂಕಿನ ಅಧ್ಯಕ್ಷತೆಯನ್ನು ವಹಿಸಿಕೊಂಡ ಶ್ರೀ ಸಿ. ರಾಮುರವರು ಮತ್ತು ತಂಡದವರು ಬ್ಯಾಂಕನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದರಲ್ಲಿ ಯಶಸ್ವಿಯಾದರು. 2001ರಲ್ಲಿ ಬ್ಯಾಂಕ್ ಎರಡು ಶಾಖೆಗಳನ್ನು ಮೂಡಲಪಾಳ್ಯ ಹಾಗೂ ಮಹಾಲಕ್ಷ್ಮಿಪುರಂಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಪರವಾನಿಗೆಯೊಂದಿಗೆ ಪ್ರಾರಂಭಿಸಲಾಯಿತು. ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿರವರು, ಹಾಲಿ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್‌ರವರು, ಹಾಗೂ ಮಾಜಿ ಸಚಿವರು, ಹಾಲಿ ಶಾಸಕರಾದ ಶ್ರೀ ಎಂ. ಕೃಷ್ಣಪ್ಪರವರು ಹಾಗೂ ಮಾಜಿ ಶಾಸಕರಾದ ಶ್ರೀ ನೆ. ನರೇಂದ್ರ ಬಾಬು ರವರು ಪಾಲ್ಗೊಂಡಿದ್ದರು.

ನಂತರ ಮೂರನೇ ಶಾಖೆಯನ್ನು ರಾಜರಾಜೇಶ್ವರಿ ನಗರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಪರವಾನಿಗೆಯೊಂದಿಗೆ ಪ್ರಾರಂಭಿಸ ಲಾಯಿತು. ವರ್ಷದಿಂದ ವರ್ಷಕ್ಕೆ ಬ್ಯಾಂಕ್ ಪ್ರಗತಿ ಪಥದಲ್ಲಿ ನಡೆಯಲು ಪ್ರಾರಂಭಿಸಿತು. ಬ್ಯಾಂಕ್ ಆರ್.ಬಿ.ಐ. ನಿರ್ದೇಶನದಂತೆ ನೇರ ಚೆಕ್ ತೀರುವಳಿ ವ್ಯವಸ್ಥೆಯನ್ನು ಹಾಗೂ ಕೋರ್ ಬ್ಯಾಂಕಿಂಗ್ ಸಿಸ್ಟಂ ಅನ್ನು ಬ್ಯಾಂಕಿನಲ್ಲಿ ಅಳವಡಿಸಿಕೊಳ್ಳಲಾಯಿತು. ಶ್ರೀ ಸಿ. ರಾಮುರವರು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾಗಿ ಸುಮಾರು 20 ವರ್ಷಗಳ ಕಾಲ ಬ್ಯಾಂಕಿನ ಅಧ್ಯಕ್ಷರಾಗಿ, 1998-99ರಲ್ಲಿ ಇದ್ದ ಕೇವಲ ರೂ. 14.37 ಕೋಟಿಗಳ ಠೇವಣಿಯನ್ನು 2019-2020ರವರೆಗೆ ಇವರ ಅವಧಿಯಲ್ಲಿ ರೂ. 1092.25 ಕೋಟಿಗಳಷ್ಟು ಹೆಚ್ಚಿಸಿ ಬ್ಯಾಂಕಿನ ಯಶಸ್ಸಿನ ಪತಾಕೆಯನ್ನು ಹಾರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಸಿ. ರಾಮುರವರು ಅಕಾಲಿಕ ಮರಣದ ನಂತರ ಅಧ್ಯಕ್ಷರಾಗಿ ಜವಾಬ್ದಾರಿಯನ್ನು ವಹಿಸಿಕೊಂಡ ಶ್ರೀ ಹೆಚ್.ಸಿ. ಗೋಪಾಲ್‌ರವರು ಸದರಿ ಸಮಯದಲ್ಲಿ ಬ್ಯಾಂಕ್ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರನ್ನು, ಠೇವಣಿದಾರರನ್ನು ಮತ್ತು ಗ್ರಾಹಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಾ ಮತ್ತು ಸಾಲಗಾರರಿಂದ ಸಾಲಗಳನ್ನು ವಸೂಲು ಮಾಡಲು ಇದ್ದ ಸವಾಲುಗಳನ್ನು ನಿಭಾಯಿಸಲು ಸೂಕ್ತ ಕ್ರಮವಿಡುತ್ತಾ, ಹಾಗೂ ಆಡಳಿತ ಮಂಡಳಿ ಮಿತ್ರರುಗಳ ಸಹಕಾರದೊಂದಿಗೆ ಬ್ಯಾಂಕಿಗೆ ಬರುವ ಎಲ್ಲಾ ರೀತಿಯ ತೊಡಕುಗಳನ್ನು ನಿವಾರಿಸುತ್ತಾ, ಬ್ಯಾಂಕನ್ನು ನಂಬಿ ಸುಮಾರು ರೂ. 1092.25 ಕೋಟಿ ಠೇವಣಿ ಹಣವನ್ನು ಹೂಡಿರುವ ಠೇವಣಿದಾರರ ಮೊತ್ತವನ್ನು ಸುರಕ್ಷಿತವಾಗಿಡುವುದು ಅವರುಗಳ ಆದ್ಯ ಕರ್ತವ್ಯವಾಗಿಟ್ಟುಕೊಂಡು, ಈ ಹಣವನ್ನು ಅರ್ಹ ಸಾಲಗಾರರಿಗೆ ನೀಡುವ ಪ್ರಕ್ರಿಯೆಯನ್ನು ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದನ್ವಯ ಆದ್ಯತಾ ವಲಯಗಳಿಗೆ ವಿನಿಯೋಗಿಸಲು ಸೂಕ್ತ ಕ್ರಮವಿಡಲಾಗುತ್ತಿದೆ.

ಹೀಗೆ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಾ ಹೊರಟ ಬ್ಯಾಂಕ್ 2019ಕ್ಕೆ ಸುವರ್ಣ ಸಂಭ್ರಮಕ್ಕೆ ಪಾದಾರ್ಪಣೆ ಮಾಡಿ, ಬೆಂಗಳೂರಿನ ಪ್ರತಿಷ್ಠಿತ ಅರಮನೆ ಮೈದಾನದಲ್ಲಿ ಅದ್ದೂರಿ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡು ಇದರ ಅಂಗವಾಗಿ ಪ್ರತಿ ಸದಸ್ಯರಿಗೆ ರೂ. 3,000/-ಗಳ ಮುಖ ಬೆಲೆಯ ಹೆಚ್ಚುವರಿ ಷೇರುಗಳನ್ನು ಉಚಿತವಾಗಿ ನೀಡಿದ್ದು ಮತ್ತು ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಪ್ರಧಾನ ಕಛೇರಿ ಮತ್ತು ವಿಜಯನಗರ ಶಾಖೆಗಾಗಿ ಪ್ರತ್ಯೇಕವಾದ ಬ್ಯಾಂಕಿನ ಸ್ವಂತ ಕಟ್ಟಡ "ಸುವರ್ಣ ಭವನ"ವನ್ನು ಲೋಕಾರ್ಪಣೆ ಮಾಡಿ, ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಾ ರಾಜ್ಯದ ಪಟ್ಟಣ ಬ್ಯಾಂಕುಗಳಲ್ಲಿ ಒಂದು ಪ್ರತಿಷ್ಠಿತ ಬ್ಯಾಂಕ್ ಆಗಿ ಬೆಳೆದು ನಿಂತಿದೆ. ಬ್ಯಾಂಕ್ ತನ್ನ ಮೂಡಲಪಾಳ್ಯ ಮತ್ತು ಮಹಾಲಕ್ಷ್ಮಿಪುರಂ ಮತ್ತು ರಾಜರಾಜೇಶ್ವರಿನಗರ ಶಾಖೆಗಳನ್ನು ಸ್ವಂತ ಕಟ್ಟಡಗಳಲ್ಲಿ ಹಾಗೂ ಅಂದ್ರಹಳ್ಳಿ ಶಾಖೆಯನ್ನು ಬಾಡಿಗೆ ಕಟ್ಟಡದಲ್ಲಿ ಕಾರ್ಯಾಚರಣೆ ನಡೆಸುತ್ತಾ, ಗ್ರಾಹಕರಿಗೆ, ಠೇವಣಿದಾರರಿಗೆ ಮತ್ತು ಸದಸ್ಯರಿಗೆ ಅಚ್ಚುಮೆಚ್ಚಿನ ಬ್ಯಾಂಕ್ ಆಗಿ ಶೇ.15 ರಿಂದ 22ರಷ್ಟು ಲಾಭಾಂಶಗಳನ್ನು ನೀಡುತ್ತಾ, ಹೆಚ್ಚುವರಿ ಷೇರುಗಳ ಹೂಡಿಕೆಗೆ ಅವಕಾಶ ಕಲ್ಪಿಸುತ್ತಾ

ಬಂದಿದೆ. ಕಳೆದ ಸುಮಾರು ಆರ್ಥಿಕ ವರ್ಷಗಳಿಂದಲೂ ನಿರಂತರವಾಗಿ ಆರ್.ಬಿ.ಐ ನಿಗದಿತ FSWM (Financially Sound and well Managed) ಮಾನದಂಡವನ್ನು ಪೂರೈಸುತ್ತಾ ಬಂದಿರುತ್ತದೆ.

ಸಹಕಾರ ತತ್ವಗಳಡಿಯಲ್ಲಿ ಸಾರ್ವಜನಿಕರಿಗೆ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಾ, ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ.

ಬ್ಯಾಂಕು ಈ ಸ್ಪರ್ಧಾತ್ಮಕ ಯುಗದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಹಕಾರ ಇಲಾಖೆಯ ನಿಯಂತ್ರಣದಲ್ಲಿ ಷೇರುದಾರರ ಮತ್ತು ಗ್ರಾಹಕರ ಬೇಡಿಕೆಗಳಿಗೆ ತಕ್ಕಂತೆ ಆರ್ಥಿಕ ಸೇವೆಗಳನ್ನು ನೀಡುತ್ತಾ ಬಂದಿದೆ. ಬ್ಯಾಂಕಿನ ಗ್ರಾಹಕರಿಗೆ ಅನುಕೂಲಕರ ಸೇವೆಗಳನ್ನು ಸರಿಯಾದ ಸಮಯಕ್ಕೆ ಒದಗಿಸುವ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಈ ಸೇವೆಗಳು ಗ್ರಾಹಕರ ಅಗತ್ಯಗಳನ್ನು ಪೂರೈಸಲು ಮತ್ತು ಬ್ಯಾಂಕಿನ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸಹಕಾರಿಯಾಗಿವೆ. ಬ್ಯಾಂಕಿಂಗ್, ಅರ್ಥಶಾಸ್ತ್ರ, ಕಾನೂನು ಮತ್ತು ಮಾನವ ಸಂಪನ್ಮೂಲ ಕ್ಷೇತ್ರಗಳಲ್ಲಿ ಅಪಾರ ಅನುಭವಗಳನ್ನು ಹೊಂದಿರುವ ನುರಿತ ವೃತ್ತಿಪರರನ್ನು ಒಳಗೊಂಡ ಆಡಳಿತ ಮಂಡಳಿಯನ್ನು ಹೊಂದಿದ್ದು, ಸಹಕಾರದಿಂದಲೇ ಪ್ರಗತಿ ಎಂಬುದು ಗ್ರಾಹಕ-ಸ್ನೇಹಿಯಾಗಿರುವ ನಮ್ಮ ಬ್ಯಾಂಕಿನ ಧ್ಯೇಯ ವಾಕ್ಯ.

ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಯಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ನೈತಿಕತೆಯ ಗುಣಮಟ್ಟವನ್ನು ಒದಗಿಸುವ ಉದ್ದೇಶವನ್ನು ಹೊಂದಿದ್ದು, ಬ್ಯಾಂಕಿನ ಠೇವಣಿಗಳನ್ನು, ಸಾಲಗಳನ್ನು ಹೆಚ್ಚಿಸುವ, ಹೊಸ ಹೊಸ

ಗ್ರಾಹಕರನ್ನು ಸೇರಿಸಿಕೊಂಡು, ಚಾಲ್ತಿ ಖಾತೆಗಳನ್ನು, ಉಳಿತಾಯ ಖಾತೆಗಳನ್ನು ಹೆಚ್ಚಿಸುವ ಗುರಿಗಳನ್ನು ಹೊಂದಿದ್ದು, ಒಟ್ಟಾರೆಯಾಗಿ ಉನ್ನತ ಮಟ್ಟದ ಸಮಗ್ರತೆಯನ್ನು ಸಾಧಿಸಲು ಗುರಿಯನ್ನು ಹೊಂದಿದೆ. ಸೈಬರ್ ಸೆಕ್ಯೂರಿಟಿ ಕಂಟ್ರೋಲ್ಸ್ ಗಳನ್ನು ಅಳವಡಿಸಿಕೊಳ್ಳಲು ಮತ್ತು ಬ್ಯಾಂಕಿನ ಗ್ರಾಹಕರು ಡಿಜಿಟಲ್ ಚಾನಲ್‌ಗಳನ್ನು ಉಪಯೋಗಿಸಲು ಉತ್ತೇಜಿಸುತ್ತಾ, ವಿಭಿನ್ನ ರೀತಿಯ ಆಕರ್ಷಕ ಗ್ರಾಹಕ ಸೇವೆಗಳನ್ನು ಒದಗಿಸುವ ಗ್ರಾಹಕ-ಸ್ನೇಹಿ ಬ್ಯಾಂಕ್ ಆಗಿರುವುದು ಮತ್ತು ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯಾಗಿ ಜನಮನ್ನಣೆ ಪಡೆದಿರುತ್ತದೆ.

ಬ್ಯಾಂಕಿನ 2025-2030ರ ವರೆಗಿನ 5 ವರ್ಷಗಳ ಅವಧಿಗೆ ಪದಾಧಿಕಾರಿಗಳ ಚುನಾವಣೆ





ಜರುಗಿದ್ದು, ಮತ್ತೊಮ್ಮೆ ಅಧ್ಯಕ್ಷರಾಗಿ ಹೆಚ್.ಸಿ. ಗೋಪಾಲ್‌ರವರು ಮತ್ತು ಉಪಾಧ್ಯಕ್ಷರಾಗಿ ಡಾ. ಪಿ.ಎಲ್. ವೆಂಕಟೇಶ್‌ಮೂರ್ತಿರವರು ಆಯ್ಕೆಯಾಗಿರುತ್ತಾರೆ.

ಪಟ್ಟಣ ಸಹಕಾರ ಬ್ಯಾಂಕುಗಳ ಪೈಕಿ ಇಡೀ ರಾಜ್ಯದಲ್ಲಿಯೇ ನಮ್ಮ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಬ್ಯಾಂಕಿನ ಡಿಜಿಟಲ್ ಸೌಲಭ್ಯಗಳಾದ UPI, CTS Clearing, RTGS/NEFT/IMPS, Mobile Banking, ATM, SMS Banking Facility, Safe Deposit Lockers ಮುಂತಾದ ಬ್ಯಾಂಕಿಂಗ್ ಸೌಲಭ್ಯಗಳು ಲಭ್ಯವಿದ್ದು, ಬ್ಯಾಂಕಿನ ದುಡಿಯುವ ಬಂಡವಾಳ ರೂ. 1533.13 ಕೋಟಿಗಳು, ಒಟ್ಟು ಷೇರು ಬಂಡವಾಳ ರೂ. 36.68 ಕೋಟಿಗಳು, ನಿಧಿಗಳು ರೂ. 121.92 ಕೋಟಿಗಳು, ರೂ. 693.46 ಕೋಟಿಗಳು ಹೂಡಿಕೆಗಳು, ರೂ. 1237.90 ಕೋಟಿಗಳು ಠೇವಣಿಗಳಿದ್ದು, ಸದರಿ ಸಾಲಿನಲ್ಲಿ ರೂ.726.16 ಕೋಟಿಗಳ ಸಾಲಗಳನ್ನು ವಿತರಿಸಿದ್ದು, ಶೇ.7.75% ಒಟ್ಟು ಎನ್.ಪಿ.ಎ. ಗಳಾಗಿದ್ದು, ನಿವ್ವಳ ಎನ್.ಪಿ.ಎ. 0.00% ಗಳಾಗಿರುತ್ತದೆ. ಒಟ್ಟು ರೂ. 20.69 ಕೋಟಿಗಳ ಲಾಭಗಳಿಸಿದ್ದು, ಆದಾಯ ತೆರಿಗೆ ರೂ. 5.38 ಕೋಟಿಗಳು ಪಾವತಿಸಿ, ನಿವ್ವಳ ಲಾಭ ರೂ. 15.31 ಕೋಟಿಗಳನ್ನು ಹೊಂದಿದ್ದು, ಸದರಿ ವರ್ಷದ ಆಡಿಟ್ ವರ್ಗೀಕರಣದನ್ವಯ "ಎ" ಶ್ರೇಣಿಯನ್ನು ಪಡೆದಿದ್ದು, ಆರ್.ಬಿ.ಐ. ನಿಗದಿತ FSWM (Financial Sound and Well Managed) ಮಾನದಂಡವನ್ನು ಪೂರೈಸಿರುತ್ತದೆ. ಬ್ಯಾಂಕಿನ ಸದಸ್ಯರ, ಗ್ರಾಹಕರ, ಠೇವಣಿದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆರ್.ಬಿ.ಐ. ನಿರ್ದೇಶನದನ್ವಯ, ಸಹಕಾರ ಇಲಾಖೆಯ ಕಾನೂನುಗಳನ್ವಯ ಹಾಗೂ ಬ್ಯಾಂಕಿನ ಉಪನಿಯಮದನ್ವಯ ಬ್ಯಾಂಕು ಸಧೃಡವಾಗಿರುತ್ತದೆ. ಬ್ಯಾಂಕ್ ತನ್ನ ಗ್ರಾಹಕರಿಗೆ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರಗಳನ್ನು, ಸಾಲಗಳ ಮೇಲೆ ತನ್ನ ಸದಸ್ಯರಿಗೆ ಕಡಿಮೆ ಬಡ್ಡಿದರಗಳಲ್ಲಿ ಸಾಲಗಳನ್ನು ನೀಡುತ್ತಾ ಬಂದಿದೆ.

ಬ್ಯಾಂಕು ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯ ಆಧಾರವಾಗಿ ಸದಸ್ಯರುಗಳಿಗೆ ವೈದ್ಯಕೀಯ ವೆಚ್ಚಗಳನ್ನು, ಮರಣ ಪರಿಹಾರ ಮೊತ್ತವನ್ನು, ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡುತ್ತಾ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಹಾಲಿ ಇರುವ 5 ಶಾಖೆಗಳ ಜೊತೆಗೆ ಮತ್ತೊಂದು ಶಾಖೆಯನ್ನು ತೆರೆಯುವ ಯೋಜನೆಯನ್ನು ಹಾಕಿಕೊಂಡಿದೆ.

ಬ್ಯಾಂಕಿನ ಪ್ರಗತಿಯ ಪಕ್ಷಿ ನೋಟ (ರೂ.ಲಕ್ಷಗಳಲ್ಲಿ)

ವರ್ಷ	ಷೇರು ಬಂಡವಾಳ	ಒಟ್ಟು ನಿಧಿಗಳು ಮತ್ತು ಅವಕಾಶಗಳು	ಠೇವಣಿಗಳು	ಸಾಲಗಳು	ದುಡಿಯುವ ಬಂಡವಾಳ	ಗಳಿಸಿದ ಲಾಭ	ಡಿವಿಡೆಂಡ್ ಶೇಕಡ	ಆಡಿಟ್ ವರ್ಗೀಕರಣ	ಶಾಖೆಗಳು
2015-16	3047.41	6317.17	83924.65	58403.58	96302.85	1696.54	20	A	5
2016-17	3083.46	7233.71	101902.01	76692.46	114348.97	2202.89	21	A	5
2017-18	3057.83	8360.75	113359.04	72937.02	127000.00	2239.48	21	A	5
2018-19	3157.81	9514.75	135161.11	77519.29	150220.00	2521.04	22	A	5
2019-20	3129.51	12786.77	109225.22	64906.63	127340.03	1573.79	-	A	5
2020-21	2800.20	16783.54	113407.72	59863.94	134996.70	1363.14	15	A	5
2021-22	2807.26	17981.86	120353.96	51287.81	143527.00	2003.00	15	A	5
2022-23	3143.14	19087.22	114415.90	59541.85	139881.48	1441.61	15	A	5
2023-24	3107.12	20153.97	118484.45	67467.52	145788.14	2232.22	15	A	5
2024-25	3667.59	21407.45	123790.51	72616.78	153312.86	2069.22	15*	A	5

* ಅನುಮೋದನೆಗಾಗಿ

ಸರಕು ಮತ್ತು ಸೇವಾ ತೆರಿಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದು ಅಗತ್ಯ ಇದರಿಂದ ಸಣ್ಣ ಉದ್ದಿಮೆದಾರರಿಗೆ ನಷ್ಟವೇನೂ ಇಲ್ಲ

▶▶ ಮೂಕನಹಳ್ಳಿ

ಜಿಎಸ್‌ಟಿ ಕಂಪೊಸಿಶನ್ ಸ್ಕೀಮ್ ಅಡಿಯಲ್ಲಿ ವಾರ್ಷಿಕ ಒಂದೂವರೆ ಕೋಟಿ ರೂಪಾಯಿ ತನಕ ವಹಿವಾಟು ನಡೆಸುವ ವ್ಯಾಪಾರಿಗಳು ಒಟ್ಟು ಶೇ.1 ರಿಂದ 6ರಷ್ಟು ಜಿಎಸ್‌ಟಿ ಪಾವತಿಸಿದರೆ ಸಾಕಾಗುತ್ತದೆ. ಉದಾಹರಣೆಗೆ ಸಣ್ಣ ವ್ಯಾಪಾರಿಯೊಬ್ಬ ವರ್ಷಕ್ಕೆ ಒಂದೂವರೆ ಕೋಟಿ ರುಪಾಯಿಗಳಷ್ಟು ವ್ಯಾಪಾರ ಮಾಡಿದರೆ ಆಗ ಒಂದೂವರೆ ಲಕ್ಷ ರುಪಾಯಿ ಜಿಎಸ್‌ಟಿ ಕಟ್ಟಿದರೆ ಸಾಕಾಗುತ್ತದೆ. ಹೀಗಾಗಿ ಎಲ್ಲಾ ಸಣ್ಣ ವ್ಯಾಪಾರಿಗಳಿಗೆ ಈ ಸ್ಕೀಮ್ ವರದಾನವಾಗಲಿದೆ. ಕೆಳಗಿನ ಟೇಬಲ್‌ನಲ್ಲಿ ಇದನ್ನು ವಿವರವಾಗಿ ನೋಡಬಹುದು. ಗಮನಿಸಿ ಈಶಾನ್ಯ ರಾಜ್ಯಗಳು ಮತ್ತು ಹಿಮಾಚಲ ಪ್ರದೇಶದಲ್ಲಿನ ವ್ಯಾಪಾರಿಗಳಿಗೆ ಇದರ ಮಿತಿ ವಾರ್ಷಿಕ 75 ಲಕ್ಷ ರೂಪಾಯಿಗಳ ವಹಿವಾಟು ಮಿತಿ ತನಕ 1 ಪ್ರತಿಶತ ಜಿಎಸ್‌ಟಿ ಇರುತ್ತದೆ.

ರಾಜ್ಯದ ಸಣ್ಣ ಉದ್ಯಮಿಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ಸರಕು ಮತ್ತು ಸೇವಾ ತೆರಿಗೆ ವಿಷಯ ಕುರಿತಂತೆ ನೀಡಿದ್ದ ನೋಟೀಸ್ ಸುಖಾಂತ್ಯ ಕಂಡಿದೆ. ಉದ್ದಿಮೆದಾರರ ಹಳೆಯ ತೆರಿಗೆಯನ್ನು ಮನ್ನಾ ಮಾಡಲಾಗಿದ್ದು, ನೋಟೀಸ್ ಪಡೆದ ಎಲ್ಲಾ ವ್ಯಾಪಾರಿಗಳು ಕೂಡ ಕಡ್ಡಾಯವಾಗಿ ಜಿಎಸ್‌ಟಿ ನೊಂದಣಿ ಮಾಡಿಸಿಕೊಳ್ಳಬೇಕು ಎನ್ನುವ ಹೇಳಿಕೆಯನ್ನು ನೀಡಲಾಗಿದೆ. ಇದರಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬೇಕಾಗುತ್ತದೆ. ಮೊದಲಿನದು ಅವರ ತೆರಿಗೆಯನ್ನು ಮನ್ನಾ ಮಾಡಲಾಗಿದೆ ಎನ್ನುವುದು. ಇದು ನಿಜಕ್ಕೂ ಹಾಸ್ಯಾಸ್ಪದ ವಿಷಯ. ಅವರು ಸಂಗ್ರಹಿಸದೆ ಇರುವ ತೆರಿಗೆಯನ್ನು ಕಟ್ಟಲು ಹೇಗೆ ಸಾಧ್ಯ? ಹೀಗಾಗಿ ಅವರು ತೆರಿಗೆ ಕಟ್ಟಬೇಕಾಗಿರಲಿಲ್ಲ.

ಅವರುಗಳಿಗೆ ನೋಟಿಸ್ ನೀಡಿ ಒಂದಷ್ಟು ದಿನ ಸಮಾಜದಲ್ಲಿ ಭದ್ರವಾಗಿ ನೆಲೆಯೂರಿರುವ ಡಿಜಿಟಲ್ ಪೇಮೆಂಟ್ ಸಿಸ್ಟಮ್ ಅಲುಗಾಡಿಸಿದ್ದು ಮಾತ್ರ ಸಾಧನೆ. ಎರಡನೇ ಅಂಶ ನೋಟೀಸ್ ಪಡೆದವರು ಕಡ್ಡಾಯವಾಗಿ ಜಿಎಸ್‌ಟಿ ನೋಂದಣಿ ಮಾಡಿಸಿಕೊಳ್ಳಬೇಕು ಎನ್ನುವುದು. ಖಂಡಿತ ಇದು ಸ್ವಾಗತಾರ್ಹ. ಕೇವಲ ನೋಟೀಸ್ ಪಡೆದವರು ಮಾತ್ರವಲ್ಲ, ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ. ಜಿಎಸ್‌ಟಿಯಿಂದ ಕೆಲವೊಂದು ಪದಾರ್ಥಗಳನ್ನು ಮತ್ತು ಸೇವೆಯನ್ನು ಮುಕ್ತಗೊಳಿಸಲಾಗಿದೆ. ಹೀಗೆ ಯಾವುದೆಲ್ಲಾ ಜಿಎಸ್‌ಟಿ ಅಡಿಯಲ್ಲಿ ಬರುವುದಿಲ್ಲ ಆ ಉದ್ದಿಮೆದಾರರನ್ನು ಹೊರತುಪಡಿಸಿ ಬೇರೆಲ್ಲರೂ ಜಿಎಸ್‌ಟಿ ನೋಂದಾವಣಿ ಮಾಡಿಸಿಕೊಳ್ಳುವುದು ಉತ್ತಮ. ನೆನಪಿರಲಿ ಇಂದಿಗೆ ನಲವತ್ತು ಲಕ್ಷ ದಾಟಿದೆ ಎನ್ನುವ ಕಾರಣಕ್ಕೆ ಯಾರಿಗೆಲ್ಲಾ ನೋಟೀಸ್ ಬಂದಿದೆ ಅವರು ಕಂಪೋಸಿಷನ್ ಸ್ಕೀಮ್ ಅಡಿಯಲ್ಲಿ ನೋಂದಾವಣಿ ಮಾಡಿಸಿಕೊಳ್ಳುವುದು ಉತ್ತಮ.

ಜಿಎಸ್‌ಟಿ ಕಂಪೊಸಿಶನ್ ಸ್ಕೀಮ್ ಅಡಿಯಲ್ಲಿ ವಾರ್ಷಿಕ

ಒಂದೂವರೆ ಕೋಟಿ ರೂಪಾಯಿ ತನಕ ವಹಿವಾಟು ನಡೆಸುವ ವ್ಯಾಪಾರಿಗಳು ಒಟ್ಟು ಶೇ.1 ರಿಂದ 6ರಷ್ಟು ಜಿಎಸ್‌ಟಿ ಪಾವತಿಸಿದರೆ ಸಾಕಾಗುತ್ತದೆ. ಉದಾಹರಣೆಗೆ ಸಣ್ಣ ವ್ಯಾಪಾರಿಯೊಬ್ಬ ವರ್ಷಕ್ಕೆ ಒಂದೂವರೆ ಕೋಟಿ ರುಪಾಯಿಗಳಷ್ಟು ವ್ಯಾಪಾರ ಮಾಡಿದರೆ ಆಗ ಒಂದೂವರೆ ಲಕ್ಷ ರುಪಾಯಿ ಜಿಎಸ್‌ಟಿ ಕಟ್ಟಿದರೆ ಸಾಕಾಗುತ್ತದೆ. ಹೀಗಾಗಿ ಎಲ್ಲಾ ಸಣ್ಣ ವ್ಯಾಪಾರಿಗಳಿಗೆ ಈ ಸ್ಕೀಮ್ ವರದಾನವಾಗಲಿದೆ. ಕೆಳಗಿನ ಟೇಬಲ್‌ನಲ್ಲಿ ಇದನ್ನು ವಿವರವಾಗಿ ನೋಡಬಹುದು. ಗಮನಿಸಿ ಈಶಾನ್ಯ ರಾಜ್ಯಗಳು ಮತ್ತು ಹಿಮಾಚಲ ಪ್ರದೇಶದಲ್ಲಿ ವ್ಯಾಪಾರಿಗಳಿಗೆ ಇದರ ಮಿತಿ ವಾರ್ಷಿಕ 75 ಲಕ್ಷ ರೂಪಾಯಿಗಳ ವಹಿವಾಟು ಮಿತಿ ತನಕ 1 ಪ್ರತಿಶತ ಜಿಎಸ್‌ಟಿ ಇರುತ್ತದೆ. ಇನ್ನೊಂದು ಅಂಶ ಕೂಡ ನೆನಪಿನಲ್ಲಿರಲಿ ಈ ಕಂಪೋಸಿಷನ್ ಸ್ಕೀಮ್ ಅಡಿಯಲ್ಲಿ ಅಂತರರಾಜ್ಯ ಬಿಸಿನೆಸ್ ನಡೆಸಲು ಸಾಧ್ಯವಾಗುವುದಿಲ್ಲ ಮತ್ತು ಇನ್ ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದು ಕೊಳ್ಳಲು ಸಾಧ್ಯವಾಗುವುದಿಲ್ಲ.

ಅಲ್ಲದೆ ಇಲ್ಲಿ ಪ್ರತಿ ತಿಂಗಳೂ ಜಿಎಸ್‌ಟಿ ಡಿಕ್ಲೇರ್ ಮಾಡುವ ಬದಲು ಮೂರು ತಿಂಗಳಿಗೊಮ್ಮೆ ಮಾಡಿದರೆ ಸಾಕಾಗುತ್ತದೆ. ಇದನ್ನು ಬಿಟ್ಟು ಇನ್ನು ಎರಡು ರೀತಿ ಜಿಎಸ್‌ಟಿ ವಿಧಾನಗಳಿಗೆ ಒಂದು ನಿಯಮಿತವಾಗಿ ಅಂದರೆ ಎಲ್ಲರೂ ಬಳಸಬೇಕಾಗಿರುವುದು QRPM ಅಂದರೆ ಮೂರು ತಿಂಗಳಿಗೊಮ್ಮೆ ತೆರಿಗೆ ಪಾವತಿಸಬೇಕಿದೆ. ಆದರೆ, ಪ್ರತಿ ತಿಂಗಳು ರಿಟರ್ನ್ ಫೈಲ್ ಮಾಡಬೇಕಾಗುತ್ತದೆ. ಆದರೆ ಜಿಎಸ್‌ಟಿ ಹಣವನ್ನು ಮೂರು ತಿಂಗಳಿಗೊಮ್ಮೆ ಕಟ್ಟಿದರೆ ಸಾಕಾಗುತ್ತದೆ. ಈ ಮೂರರಲ್ಲಿ ಯಾವುದು ನಮಗೆ ಹೆಚ್ಚು ಸೂಕ್ತ ಎನ್ನಿಸುತ್ತದೆ ಅದರಡಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಇದರ ಜೊತೆಗೆ ಪದಾರ್ಥದಿಂದ ಪದಾರ್ಥಕ್ಕೆ ಜಿಎಸ್‌ಟಿ ರೇಟ್ ಬದಲಾಗುತ್ತದೆ. ತಿಂಗಳಲ್ಲಿ ನೂರಾರು ಮಾರಾಟದ, ಖರೀದಿಯ ಬಿಲ್‌ಗಳು ಉತ್ಪನ್ನವಾಗುತ್ತವೆ. ಹೀಗಾಗಿ ಇದನ್ನು ಸರಿಯಾಗಿ ನೋಡಿಕೊಳ್ಳಲು ವೃತ್ತಿಪರ ಸಹಾಯ ಪಡೆಯುವುದು ಉತ್ತಮ. ಆ ಕಾರಣದಿಂದ ಜಿಎಸ್‌ಟಿ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ. ಇದನ್ನು ಎಷ್ಟೇ ಓದಿದರೂ ಅದನ್ನು ಸರಿಯಾಗಿ ಮೇಂಟೈನ್ ಮಾಡಲು ವೃತ್ತಿಪರರ ಅವಶ್ಯಕತೆ ಖಂಡಿತ ಇದೆ. ಹೀಗಾಗಿ ಇದರ ಬಗ್ಗೆ ವೃತ್ತಿಪರರನ್ನು ಭೇಟಿ ಮಾಡಿ ಅವರ ಸಲಹೆ ಪಡೆಯುವುದು ಉತ್ತಮ. ಜಿಎಸ್‌ಟಿ ಕೂಡ ವೃತ್ತಿಪರ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಕಂಪನಿ ಸೆಕ್ರೆಟರಿ ಅವರ ಸಹಾಯದಿಂದ ಪಡೆದುಕೊಳ್ಳಬಹುದು. ಅಥವಾ ಆನ್ಲೈನ್‌ನಲ್ಲಿ ಕೂಡ ಸಲ್ಲಿಸಬಹುದಾಗಿದೆ.

ಸಾಮಾನ್ಯವಾಗಿ ಜಿಎಸ್‌ಟಿ ಅಪ್ಲೈ ಮಾಡಲು ಬೇಕಾಗಿರುವ ಅನುಮತಿ ಪತ್ರಗಳು ಹೀಗಿವೆ :

1. ಪರ್ಮನೆಂಟ್ ಅಕೌಂಟ್ ನಂಬರ್
2. ಬ್ಯಾಂಕ್ ಡೀಟೇಲ್ಸ್
3. ಅಡ್ರೆಸ್ ಪ್ರೂಫ್
4. ಆಥೋರೈಸ್ಡ್ ಸಿಗ್ನೇಟರಿಯ ಪಾನ್ ಮತ್ತು ಆಧಾರ್ ಕಾರ್ಡ್
5. ಎಲ್ಲಾ ನಿರ್ದೇಶಕರ ಪಾನ್ ಮತ್ತು ಆಧಾರ್ ಕಾರ್ಡ್
6. ಮೆಮೊರೆಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್
7. ಆಥೋರೈಸ್ಡ್ ಸಿಗ್ನೆಟರಿ ನೇಮಕ ಮಾಡಿರುವ ಠರಾವು ಪತ್ರ
8. ಸರ್ಟಿಫಿಕೇಟ್ ಆಫ್ ಇನ್ಕಾರ್ಪೋರೇಶನ್
9. ನಿರ್ದೇಶಕರ ಭಾವಚಿತ್ರಗಳು

ಕೆಳಗಿನ ಲಿಂಕ್ ಬಳಸಿಕೊಂಡು, ಕೆಳಗೆ ನಮೂದಿಸಿರುವ ಹಂತಗಳನ್ನು ಬಳಸಿಕೊಂಡು ಜಿಎಸ್‌ಟಿ ನಂಬರ್ ಪಡೆದುಕೊಳ್ಳಬಹುದು.

https://services.gst.gov.in/services/quicklinks/registration

STEP 1: Access the GST Portal.
STEP 2: Click on “Register Now”
STEP 3: Select Taxpayer.
STEP 4: Select State/UT and District.
STEP 5: Enter Business Name.
STEP 6: Enter PAN Number.
STEP 7: Enter Email Address.
STEP 8: Enter Mobile Number.
STEP 9: Enter Captcha
STEP 10: Temporary Reference Number (TRN)

ಹೀಗೆ ಸಿಕ್ಕಿದ ತಾತ್ಕಾಲಿಕ ಸಂಖ್ಯೆಯ ಮೂಲಕ ಮತ್ತೆ ಜಿಎಸ್‌ಟಿ ವೆಬ್ ಸೈಟ್‌ಗೆ ಲಾಗಿನ್ ಆಗಬೇಕು. ಆಧಾರ್ ಬಳಸಿಕೊಂಡು ಬರುವ ಒಟಿಪಿ ಹಾಕುವುದರ ಮೂಲಕ ಗುರುತು ಪ್ರಾಮಾಣಿಕವಾದದ್ದು ಎಂದು ವೆರಿಫೈ ಮಾಡಿದ ನಂತರ ಜಿಎಸ್‌ಟಿ ಅಪ್ಲಿಕೇಶನ್ ರೆಫರೆನ್ಸ್ ನಂಬರ್ ಸಿಗುತ್ತದೆ. ಎಲ್ಲಾ ದಾಖಲೆ ಪತ್ರಗಳು ಪರಿಶೀಲಿಸಿ ಸರಿಯಾಗಿದ್ದ ಪಕ್ಷದಲ್ಲಿ ಜಿಎಸ್‌ಟಿ 6 ಕೆಲಸದ ದಿನದಲ್ಲಿ ನೀಡಲಾಗುತ್ತದೆ.

ಕೊನೆ ಮಾತು: ಇವತ್ತಿನ ದಿನದಲ್ಲಿ ನಲವತ್ತು ಲಕ್ಷ ಟರ್ನ್ ಓವರ್ ಅದೂ ಒಂದು ವರ್ಷದಲ್ಲಿ ಬಹಳ ಹೆಚ್ಚೇನಲ್ಲ. ಹೀಗಾಗಿ ಬಹಳಷ್ಟು ಜನ ನೋಂದಾವಣಿ ಮಾಡಿಕೊಳ್ಳಬೇಕಾದ ಅವಶ್ಯಕತೆ ಬರುತ್ತದೆ. ನಾವು ಡಿಜಿಟಲ್ ಕರೆನ್ಸಿ ಬಳಸುವುದಿಲ್ಲ ಎನ್ನುವುದು ಸಮಸ್ಯೆಗೆ ಪರಿಹಾರವಾಗುವುದಿಲ್ಲ. ಸರಕಾರ ಮಾಡಿದ ತಪ್ಪಿಗೆ ಗ್ರಾಹಕರ ಮೇಲೆ ಸೇಡು ತೀರಿಸಿಕೊಂಡಂತೆ ಆಗುತ್ತದೆ ಅಷ್ಟೇ. ಆದರೆ ಸಣ್ಣ ಉದ್ದಿಮೆದಾರರ ಬಳಿ ಬೇರೆ ಆಯ್ಕೆ ಕೂಡ ಇರಲಿಲ್ಲ. ಗಮನಿಸಿ ಅವರು ತೆರಿಗೆಯನ್ನು ಸಂಗ್ರಹ ಮಾಡಿರಲಿಲ್ಲ.

ಅಂದರೆ ತಮ್ಮ ಪದಾರ್ಥವನ್ನು ಅಥವಾ ಸೇವೆಯನ್ನು ನೀಡುವಾಗ ಅವರು ಜಿಎಸ್‌ಟಿಯನ್ನು ಗ್ರಾಹಕರಿಂದ ಪಡೆದುಕೊಂಡಿಲ್ಲ. ಅಂದಮೇಲೆ ಅವರು ಹೇಗೆ ಮತ್ತು ಎಲ್ಲಿಂದ ತೆರಿಗೆ ಹಣವನ್ನು ತಂದುಕೊಡಲು ಸಾಧ್ಯ? ಈ ಒಂದು ಸಣ್ಣ ಸಾಮಾನ್ಯ ಜ್ಞಾನ ಅಧಿಕಾರಿಗಳಲ್ಲಿ ಇದ್ದಿದ್ದರೆ ಸಾಕಾಗಿತ್ತು. ಅವರು ಎಚ್ಚರಿಕೆ ನೋಟೀಸ್ ನೀಡಬಹುದಿತ್ತು. ನೋಡಿ ನಿಮ್ಮ ಟರ್ನ್ ಓವರ್ ರೂ. 40 ಲಕ್ಷ ಮೀರುತ್ತಿದೆ. ಹೀಗಾಗಿ ನೀವು ಜಿಎಸ್‌ಟಿ ನೋಂದಾವಣಿ ಮಾಡಿಕೊಳ್ಳಿ. ಇಲ್ಲದಿದ್ದಲ್ಲಿ ಮುಂದಿನ ವರ್ಷದಿಂದ ತೆರಿಗೆ ಸಂಗ್ರಹಿಸಿರಿ ಅಥವಾ ಬಿಡಿ, ನೀವು ಕಟ್ಟಬೇಕಾಗುತ್ತದೆ ಎನ್ನುವ ನೋಟೀಸ್ ನೀಡಿದ್ದರೆ ಸಾಕಾಗಿತ್ತು. ನಿಧಾನವಾದರೂ ಸರಕಾರ ತನ್ನ ತಪ್ಪು ತಿದ್ದುಕೊಂಡಿದೆ. ಪ್ರಹಸನ ಸುಖಾಂತ್ಯ ಕಂಡಿದೆ. ಆದರೆ ವರ್ತಕರೇ ಎಚ್ಚರದಿಂದಿರಿ. ಆದಷ್ಟು ಬೇಗ ಜಿಎಸ್‌ಟಿ ನೋಂದಾವಣಿ ಮಾಡಿಕೊಳ್ಳಿ. ಇದರಲ್ಲಿ ನೀವು ಕಳೆದುಕೊಳ್ಳುವುದು ಏನಿಲ್ಲ. ನೀವು ಗ್ರಾಹಕನಿಂದ ಸಂಗ್ರಹಿಸಿ ಮತ್ತು ಅದನ್ನು ಸರಕಾರಕ್ಕೆ ಕಟ್ಟಿದರೆ ಸಾಕು. ವೃತ್ತಿಪರರಿಗೆ ನೀಡುವ ಫೀಸ್ ಮಾತ್ರ ನಿಮ್ಮ ಖರ್ಚಿನ ಪಟ್ಟಿ ಸೇರುತ್ತದೆ. ಅದೊಂದು ಹೆಚ್ಚುವರಿ ತೂಕ ನಿಮ್ಮ ಮೇಲೆ ಬೀಳಲಿದೆ. ಆದರೆ ಗಮನಿಸಿ ಈ ಜಿಎಸ್‌ಟಿ ರಿಟರ್ನ್ಸ್ ಸರಿಯಾಗಿ ಕಟ್ಟಿದ್ದರೆ ಅದರ ಆಧಾರದ ಮೇಲೆ ಕೂಡ ಬ್ಯಾಂಕುಗಳು ಸಾಲ ನೀಡುತ್ತವೆ. ಎಲ್ಲವೂ ಡಿಕ್ಲೇರ್ ಆಗಿದ್ದಾಗ ಅದರಿಂದ ಹೆಚ್ಚಿನ ಲಾಭ ಉದ್ದಿಮೆಗೆ ಮತ್ತು ಉದ್ದಿಮೆದಾರರಿಗೆ ಆಗುತ್ತದೆ. ಹೀಗಾಗಿ ನೋಂದಾವಣಿ ಮಾಡಿಸಿಕೊಳ್ಳಲು ತಡ ಮಾಡುವುದು ಬೇಡ. –ಕೃಪೆ

ಉಳಿತಾಯ ಖಾತೆಯಲ್ಲಿನ ಕನಿಷ್ಠ ಬ್ಯಾಲೆನ್ಸ್
ಆರ್‌ಬಿಐ ನಿಯಂತ್ರಣದ ವ್ಯಾಪ್ತಿಯಲ್ಲಿ ಬರುವುದಿಲ್ಲ : ಸಂಜಯ್ ಮಲ್ಹೋತ್ರಾ

ನವದೆಹಲಿ : ಬ್ಯಾಂಕ್‌ವೊಂದು ಉಳಿತಾಯ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್‌ನ್ನು ಹೆಚ್ಚಿಸಿದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಆರ್‌ಬಿಐ ಗವರ್ನರ್, ಸಂಜಯ್ ಮಲ್ಹೋತ್ರಾ, ಉಳಿತಾಯ ಖಾತೆಯಲ್ಲಿನ ಕನಿಷ್ಠ ಬ್ಯಾಲೆನ್ಸ್ ಅವಶ್ಯಕತೆ ಆರ್‌ಬಿಐ ನಿಯಂತ್ರಣದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅದು ಬ್ಯಾಂಕುಗಳಿಗೆ ಬಿಟ್ಟ ವಿಚಾರವಾಗಿದೆ ಎಂದಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಸಂಜಯ್ ಮಲ್ಹೋತ್ರಾ, ಕೆಲ ಬ್ಯಾಂಕ್‌ಗಳು ಕನಿಷ್ಠ ರೂ. 10,000 ಕನಿಷ್ಠ ಬ್ಯಾಲೆನ್ಸ್ ನಿಗದಿಪಡಿಸಿದರೆ ಮತ್ತೆ ಕೆಲವು ಬ್ಯಾಂಕುಗಳು ರೂ. 2,000 ನಿಗದಿಪಡಿಸಿವೆ. ಕನಿಷ್ಠ ಬ್ಯಾಲೆನ್ಸ್ ಹಣವನ್ನು ಹೆಚ್ಚಿಸುವ ನಿರ್ಧಾರ ಬ್ಯಾಂಕುಗಳಿಗೆ ಬಿಟ್ಟಿದ್ದು ಎಂದು ಹೇಳಿದರು.

ಯಾವುದೇ ಬಾಂಕಿನ ಕನಿಷ್ಠ ಬ್ಯಾಲೆನ್ಸ್ ಮೊತ್ತ ವಿಷಯ ಆಯಾ ಬ್ಯಾಂಕಿಗೆ ಸೇರಿದ್ದು, ಅದನ್ನು ಆರ್‌ಬಿಐ ನಿಯಂತ್ರಿಸದ ಕಾರಣ ಪ್ರತಿ ಬ್ಯಾಂಕ್ ತನ್ನ ಕಾರ್ಯಾಚರಣೆಯ ಮಾದರಿ ಮತ್ತು ಗ್ರಾಹಕರ ಆಧಾರದ ಮೇಲೆ ಕನಿಷ್ಠ ಬ್ಯಾಲೆನ್ಸ್ ಮೊತ್ತದ ಮೇಲೆ ತನ್ನದೇ ಆದ ನೀತಿ ರೂಪಿಸಲು ಸ್ವತಂತ್ರವಾಗಿವೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

ಉಳಿತಾಯ ಖಾತೆಗಳಲ್ಲಿ ಹೆಚ್ಚುತ್ತಿರುವ ಶುಲ್ಕಗಳು ಮತ್ತು ಬ್ಯಾಲೆನ್ಸ್ ಅಗತ್ಯತೆಗಳ ಬಗ್ಗೆ ಹಲವು ಗ್ರಾಹಕರು ಕಳವಳ ವ್ಯಕ್ತಪಡಿಸುತ್ತಿರುವಂತೆಯೇ ಆರ್‌ಬಿಐ ಗರ್ವನರ್ ಈ ಸ್ಪಷ್ಟೀಕರಣ ನೀಡಿದ್ದಾರೆ. ಕನಿಷ್ಠ ತಿಂಗಳ ಬ್ಯಾಲೆನ್ಸ್ ಹಣವನ್ನು ಖಾತೆಯಲ್ಲಿ ಇಡದ ಗ್ರಾಹಕರ ಮೇಲೆ ಶೇ. 6ರಷ್ಟು ಅಥವಾ ರೂ.500 ದಂಡ ವಿಧಿಸಲಾಗುತ್ತದೆ.

ವೀರಶೈವ ಸಹಕಾರಿ ಬ್ಯಾಂಕ್ ಲಿ.,

ನಂ.1732/32, ಎಂ.ಸಿ.ರಸ್ತೆ, ಎಂ.ಸಿ.ಬಡಾವಣೆ, ವಿಜಯನಗರ, ಬೆಂಗಳೂರು-560040

ದಿನಾಂಕ : 31-03-2025ರ ಅಂತ್ಯಕ್ಕಿದ್ದಂತೆ ಬ್ಯಾಂಕಿನ ಹಣಕಾಸಿನ ಅಂಕಿ-ಅಂಶಗಳ ವಿವರ (ರೂ.ಲಕ್ಷಗಳಲ್ಲಿ)

ಕ್ರ.ಸಂ.	ವಿವರಗಳು	31-03-2025
1.	ಷೇರು ಬಂಡವಾಳ	1172.35
2.	ಆಪದ್ಧನ ಮತ್ತು ಇತರೆ ನಿಧಿಗಳು	2803.73
3.	ಅವಕಾಶಗಳು	1191.60
4.	ಠೇವಣಿಗಳು	35916.49
5.	ಸಾಲ ಮತ್ತು ಮುಂಗಡಗಳು	21051.91
6.	ಹೂಡಿಕೆಗಳು	15990.54
7.	ದುಡಿಯುವ ಬಂಡವಾಳ	41630.54
8.	ತೆರಿಗೆಗೆ ಮುನ್ನ ಲಾಭ	296.37
9.	ತೆರಿಗೆಯ ನಂತರ ನಿವ್ವಳ ಲಾಭ	330.43
10.	ಎನ್.ಪಿ.ಎ ಮೊತ್ತ ಒಟ್ಟು (Gross) ಎನ್.ಪಿ.ಎ (%) ನಿವ್ವಳ (Net) ಎನ್.ಪಿ.ಎ (%)	411.52 1.96% 0%
11.	ಒಟ್ಟು ವ್ಯವಹಾರ	56968.40
12.	ಬಂಡವಾಳ ಪರ್ಯಾಪ್ತ ಅನುಪಾತ (CRAR)	18

ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು

1.	ಶ್ರೀ ಬಿ.ಎಸ್.ಪರಮಶಿವಯ್ಯ	ಅಧ್ಯಕ್ಷರು	12.	ಶ್ರೀ ಸದಾಶಿವಯ್ಯ	ನಿರ್ದೇಶಕರು
2.	ಶ್ರೀ ಮಹದೇವ ಪ್ರಸಾದ್.ಬಿ.ಪಿ	ಉಪಾಧ್ಯಕ್ಷರು / ವ್ಯವಸ್ಥಾಪನ ಮಂಡಲಿ ನಿರ್ದೇಶಕರು	13.	ಶ್ರೀ ಸಿ. ಸಿದ್ಧಲಿಂಗಯ್ಯ	ವ್ಯವಸ್ಥಾಪನ ಮಂಡಲಿ ನಿರ್ದೇಶಕರು
3.	ಶ್ರೀ ಆರ್. ಚಂದ್ರಶೇಖರಯ್ಯ	ನಿರ್ದೇಶಕರು	14.	ಶ್ರೀಮತಿ ಎನ್. ಗಿರಿಜ	ನಿರ್ದೇಶಕರು
4.	ಶ್ರೀಮತಿ ಗಂಗಮ್ಮ.ಎಸ್	ನಿರ್ದೇಶಕರು	15.	ಶ್ರೀ ರಾಜು. ಹೆಚ್	ನಿರ್ದೇಶಕರು
5.	ಶ್ರೀ ಟಿ.ಎಸ್. ಗಂಗಾಧರ್	ನಿರ್ದೇಶಕರು	16.	ಶ್ರೀ ಶಿವಣ್ಣ ಸಿ.ಬಿ.	ನಿರ್ದೇಶಕರು
6.	ಶ್ರೀ ನಟರಾಜ್ ಎಂ.ಎಸ್.	ನಿರ್ದೇಶಕರು	17.	ಶ್ರೀಮತಿ ರುದ್ರಾಂಬ	ನಿರ್ದೇಶಕರು
7.	ಶ್ರೀ ಬಿ.ಎಸ್. ಪ್ರಭುದೇವರು	ನಿರ್ದೇಶಕರು	18.	ಶ್ರೀ ಬಿ.ಪಿ. ಶಿವಕುಮಾರಸ್ವಾಮಿ	ನಿರ್ದೇಶಕರು
8.	ಶ್ರೀ ಬಿ.ಎಸ್. ಪುಟ್ಟಸ್ವಾಮಯ್ಯ	ವ್ಯವಸ್ಥಾಪನ ಮಂಡಲಿ ಅಧ್ಯಕ್ಷರು	19.	ಶ್ರೀ CA ಪ್ರದೀಪ್ ಕುಮಾರ್ ಜಿ.	ವೃತ್ತಿಪರ ನಿರ್ದೇಶಕರು
9.	ಶ್ರೀ ಪುಟ್ಟಗಂಗಯ್ಯ ಎಸ್.ಹೆಚ್.	ನಿರ್ದೇಶಕರು	20.	ಶ್ರೀ ಬಿ.ಎನ್. ಈಶ್ವರಯ್ಯ	ವೃತ್ತಿಪರ ನಿರ್ದೇಶಕರು
10.	ಶ್ರೀ ಸಿದ್ದೇಶ್ ಬಿ.ಟಿ. ಉಮೇಶ್	ನಿರ್ದೇಶಕರು	21.	ಶ್ರೀ ವಿಶ್ವೇಶ್ವರ ಜೆ.ಸಿ.	ವ್ಯವಸ್ಥಾಪನ ಮಂಡಲಿ ನಿರ್ದೇಶಕರು
11.	ಶ್ರೀ ಸಿ.ವಿ. ವಿಶ್ವನಾಥ್	ನಿರ್ದೇಶಕರು	22.	ಶ್ರೀ CA ಬಸವರಾಜ	ವ್ಯವಸ್ಥಾಪನ ಮಂಡಲಿ ನಿರ್ದೇಶಕರು

ಠೇವಣಿಗಳ ಮೇಲೆ ನೀಡುವ ಬಡ್ಡಿ ದರದ ವಿವರ

ಠೇವಣಿ ಅವಧಿ	ಬಡ್ಡಿದರ	ಆರು ತಿಂಗಳು ಮೇಲ್ಪಟ್ಟ ಅವಧಿಯ ಠೇವಣಿ ಖಾತೆ ಹೊಂದಿರುವ ಹಿರಿಯ ನಾಗರೀಕರಿಗೆ ಶೇ.0.50% ಹೆಚ್ಚಿನ ಬಡ್ಡಿದರ ನೀಡಲಾಗುವುದು
15 ದಿನದಿಂದ 30 ದಿನಗಳವರೆಗೆ	3.75%	
31 ದಿನದಿಂದ 45 ದಿನಗಳವರೆಗೆ	4.50%	
46 ದಿನದಿಂದ 90 ದಿನಗಳವರೆಗೆ	4.75%	
91 ದಿನದಿಂದ 180 ದಿನಗಳವರೆಗೆ	5.50%	
181 ದಿನದಿಂದ 1 ವರ್ಷದವರೆಗೆ	6.50%	
1 ವರ್ಷ ಮೇಲ್ಪಟ್ಟು 4 ವರ್ಷದವರೆಗೆ	7.75%	
4 ವರ್ಷ ಮೇಲ್ಪಟ್ಟು 10 ವರ್ಷದವರೆಗೆ	7.50%	

ಬೃಹತ್ ಠೇವಣಿಗಳು	ಬಡ್ಡಿದರ
1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ ರೂ.15.00 ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ	8.00%
1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ ರೂ.25.00ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ	8.10%
ಹಿರಿಯ ನಾಗರಿಕರಿಗೆ ನೀಡುವ ಹೆಚ್ಚಿನ ಬಡ್ಡಿದರ ಈ ಮೇಲ್ಕಂಡ ಬೃಹತ್ ಠೇವಣಿಗಳಿಗೆ ಅನ್ವಯಿಸುವುದಿಲ್ಲ.	

– ಶ್ರೀಮತಿ ಬಿ.ಸಿ. ವಿಜಯಕುಮಾರಿ, ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿಂಗ್ ಉದ್ಯಮದಲ್ಲಿ ಹೀಗೊಂದು ಗ್ರಾಹಕ ಸ್ನೇಹಿ ಬೆಳವಣಿಗೆ

▶▶ ರಮಾನಂದ ಶರ್ಮಾ

ಬ್ಯಾಂಕಿಂಗ್ ಉದ್ಯಮದಲ್ಲಿ ಇತ್ತೀಚೆಗೆ ಎರಡು ಗ್ರಾಹಕ-ಸ್ನೇಹಿ ಬೆಳವಣಿಗೆಗಳಾಗಿದ್ದು, ಇದರಿಂದಾಗಿ ಬ್ಯಾಂಕ್ ಗ್ರಾಹಕರು ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ಗ್ರಾಹಕರು ತಮ್ಮ ಉಳಿ ತಾಯ ಖಾತೆಗಳಲ್ಲಿ ನಿಗದಿತ ಕನಿಷ್ಠ ಮೊತ್ತವನ್ನು ಇರಿಸದಿದ್ದರೆ, ಅಂಥವರಿಗೆ ಬ್ಯಾಂಕುಗಳು ದಂಡ ವಿಧಿಸುತ್ತವೆ. ಈ ದಂಡ ಪ್ರಮಾಣವು ಏಕರೂಪವಾಗಿರದೆ ಬ್ಯಾಂಕಿನಿಂದ ಬ್ಯಾಂಕಿಗೆ ಭಿನ್ನವಾಗಿರುತ್ತದೆ. ಜತೆಗೆ, ಪಟ್ಟಣ, ನಗರ ಮತ್ತು ಮೆಟ್ರೋಪಾಲಿಟನ್ ಶಾಖೆಗಳ ಖಾತೆಗಳಲ್ಲಿ ಉಳಿಸಬೇಕಿರುವ ಕನಿಷ್ಠ ಮೊತ್ತದ ಪ್ರಮಾಣವನ್ನು ಕಾಯ್ದುಕೊಳ್ಳದಿದ್ದರೆ ವಿಧಿಸಲಾಗುವ ದಂಡಗಳಲ್ಲೂ ವ್ಯತ್ಯಾಸ ಇರುತ್ತದೆ. ಬೇಸಿಕ್ ಉಳಿತಾಯ ಠೇವಣಿ ಖಾತೆಗಳು ಮತ್ತು ಪ್ರಧಾನಮಂತ್ರಿ ಜನಧನ ಯೋಜನೆ ಖಾತೆಗಳಿಗೆ ಈ ದಂಡ ನಿಬಂಧನೆಯಿಂದ ವಿನಾಯಿತಿ ನೀಡಲಾಗಿದೆ. ಈ ದಂಡವನ್ನು ಪ್ರತಿ ತಿಂಗಳೂ ವಿಧಿಸಲಾಗುತ್ತಿದ್ದು, ಇದು ಉಳಿತಾಯ ಖಾತೆಗಳಿಗೆ ರೂಪಾಯಿ 25ರಿಂದ 600ರವರೆಗೆ ಮತ್ತು ಚಾಲ್ತಿ ಖಾತೆಗಳಿಗೆ ರೂಪಾಯಿ 1000ದಿಂದ 10000ದವರೆಗೆ ಇದೆ ಎಂದು ಹೇಳಲಾಗುತ್ತಿದೆ.

ಕೇಂದ್ರ ಸರ್ಕಾರ ರಾಜ್ಯಸಭಾ ಪ್ರಶ್ನೋತ್ತರದಲ್ಲಿ ನೀಡಿದ ಹೇಳಿಕೆ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಬ್ಯಾಂಕುಗಳು ರೂ. 35000 ಕೋಟಿ ದಂಡವನ್ನು ಸಂಗ್ರಹಿಸಿದ್ದು, ಅದರಲ್ಲಿ ಸಾರ್ವಜನಿಕ ರಂಗದ ಬ್ಯಾಂಕುಗಳ ಪಾಲು ರೂ. 8495 ಕೋಟಿಯಷ್ಟಿದೆ. ಬ್ಯಾಂಕುಗಳು ಸಾಲಮನ್ನಾ ಮತ್ತು ರೈಟ್-ಆಫ್‌ನಿಂದ ಆದ ನಷ್ಟವನ್ನು ಈ ರೀತಿ ಸಮತೋಲನಗೊಳಿಸುತ್ತವೆ ಎಂದು ಕೆಲ ಆರ್ಥಿಕ ತಜ್ಞರು ಟೀಕೆ ಮಾಡಿದ್ದರು.

ಈ ದಂಡದ ಬಗ್ಗೆ ಸಾರ್ವಜನಿಕರಿಂದ ಭಾರಿ ಆಕ್ರೋಶ ವ್ಯಕ್ತವಾಗಿತ್ತು; ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2020ರಲ್ಲಿಯೇ ಈ ದಂಡವನ್ನು ನಿಲ್ಲಿಸಿದ್ದು, ಈಗ ಕೆನರಾ ಬ್ಯಾಂಕ್ ಈ ತಿಂಗಳ 1ನೇ ತಾರೀಖಿನಿಂದ ಅನ್ವಯವಾಗುವಂತೆ ಇದನ್ನು ನಿಲ್ಲಿಸುವುದಾಗಿ ಹೇಳಿದೆ. ಇದರಿಂದಾಗಿ ವೇತನ ವರ್ಗ, ಹಿರಿಯ ನಾಗರಿಕರು, ಆರ್ಥಿಕವಾಗಿ ಕೆಳಸ್ತರದಲ್ಲಿರುವವರಿಗೆ, ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತಿದೆ. ಮೊತ್ತ ಸಣ್ಣದಿದ್ದರೂ, ಹಣದುಬ್ಬರದ ಕಾಲದಲ್ಲಿ ಆ ಮೊತ್ತ ಎಷ್ಟೇ ಸಣ್ಣದಿರಲಿ ಅದಕ್ಕೆ ತೂಕ ಇರುತ್ತದೆ. ಈ ಗಲ್ಲಿಯ ಕೋಳಿ ಕೂಗಿದರೆ, ಪಕ್ಕದ ಗಲ್ಲಿಯ ಕೋಳಿಯೂ ಕೂಗುತ್ತದೆ ಎಂಬ ಜಾಣನುಡಿಯಂತೆ, ಕೆನರಾ ಬ್ಯಾಂಕ್ ರೀತಿಯಲ್ಲಿ ಉಳಿದ ಬ್ಯಾಂಕುಗಳೂ ಈಗಿನ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ವ್ಯವಹಾರವನ್ನು ಉಳಿಸಿ-ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸ್ವಲ್ಪ ಅನನುಕೂಲವಾದರೂ ಅನಿವಾರ್ಯವಾಗಿ ಈ ಹಾದಿಯನ್ನು ಹಿಡಿಯಲೇ ಬೇಕಾಗಿದೆ.

ಹೀಗಾಗಿ, ಗ್ರಾಹಕರು ತಮ್ಮ ಖಾತೆಯಲ್ಲಿ ಕನಿಷ್ಠ ಮೊತ್ತವನ್ನು ಉಳಿಸದಿದ್ದರೆ ದಂಡ ಇರುಸುವಿಕೆ ಪರಿಪಾಠವು ಇತಿಹಾಸದ ಪುಟವನ್ನು ಸೇರುವುದು ಖಾತ್ರಿ.

ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಯಾವುದೇ ಕಾರಣಕ್ಕೆ ಮುಚ್ಚಿದರೆ, ಸಮಾಪ್ತಿಯಾದರೆ, ದಿವಾಳಿಯಾದರೆ, ವಿಫಲಗೊಂಡರೆ, ಅದರಿಂದಾಗಿ ಠೇವಣಿದಾರರು ಅತಂತ್ರಗೊಳ್ಳುವುದನ್ನು ತಪ್ಪಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧೀನ ಸಂಸ್ಥೆಯಾದ 'ಠೇವಣಿ ವಿಮಾ ಮತ್ತು ಸಾಲ ಖಾತ್ರಿ ನಿಗಮವು (Deposit Insurance and Credit Guarantee Corporation- DICGC) ಠೇವಣಿದಾರರಿಗೆ

ಪರಿಹಾರವನ್ನು ನೀಡುತ್ತದೆ.

1962ರಲ್ಲಿ ಆರಂಭವಾಗಿರುವ ಈ ನಿಗಮವು, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಗ್ರಾಹಕರು ಹೊಂದಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿನ ಠೇವಣಿಗಳಿಗೆ ವಿಮಾ ಭದ್ರತೆಯನ್ನು ಒದಗಿಸುತ್ತದೆ. ಈ ನಿಗಮದಲ್ಲಿ ಪ್ರಸ್ತುತ 140 ವಾಣಿಜ್ಯ ಬ್ಯಾಂಕುಗಳು ಮತ್ತು 1857 ಸಹಕಾರಿ ಬ್ಯಾಂಕುಗಳು ನೋಂದಾಯಿಸಿಕೊಂಡಿವೆ. ಈ ನಿಗಮ ಆರಂಭವಾದಾಗ ಗರಿಷ್ಠ ಪರಿಹಾರ ರೂ. 1500 ಆಗಿತ್ತು.

ಇದು 1976ರಲ್ಲಿ ರೂ. 20000, 1980ರಲ್ಲಿ ರೂ. 30000ಗೆ ಏರಿತು. ಹಣದುಬ್ಬರ, ಕುಸಿಯುತ್ತಿರುವ ರೂಪಾಯಿ ಮೌಲ್ಯ ಮತ್ತು ವಿದೇಶಗಳಲ್ಲಿ ಈ ನಿಟ್ಟಿನಲ್ಲಿ ನೀಡುವ ಪರಿಹಾರದ ಮೊತ್ತವನ್ನು ಪರಿಗಣಿಸಿ, ಗರಿಷ್ಠ ವಿಮಾ ಪರಿಹಾರ ಮೊತ್ತವನ್ನು 1993ರಲ್ಲಿ 1 ಲಕ್ಷ ರೂಪಾಯಿಗೆ ಏರಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ವೈಫಲ್ಯ ಹೆಚ್ಚುತ್ತಿದ್ದು, ಠೇವಣಿದಾರರು ಬೀದಿಗೆ ಬೀಳುವುದನ್ನು ತಪ್ಪಿಸಲು ವಿಮಾ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕೆಂದು ದೇಶಾದ್ಯಂತ ಆಗ್ರಹ ಹೊಮ್ಮಿತ್ತು.

ಆಗ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2020–21ರ ಬಜೆಟ್‌ನಲ್ಲಿ ಠೇವಣಿ ವಿಮಾ ಪರಿಹಾರ ಮೊತ್ತವನ್ನು 1 ರಿಂದ 5 ಲಕ್ಷ ರೂಪಾಯಿಗೆ ಏರಿಸಿದ್ದರು. ಇದು ಒಟ್ಟು ಠೇವಣಿ ಖಾತೆಗಳ ಶೇ.92ರಷ್ಟು ಮತ್ತು ಒಟ್ಟು ಠೇವಣಿಯ ಶೇ.28ರಷ್ಟು ಭಾಗಕ್ಕೆ ವಿಮಾ ರಕ್ಷಣೆ ನೀಡುತ್ತಿದೆ. ಹಣದುಬ್ಬರ ಮತ್ತು ಬ್ಯಾಂಕುಗಳ ವೈಫಲ್ಯ ನಿರಂತರವಾಗಿ ಹೆಚ್ಚುತ್ತಿರುವುದನ್ನು ನೋಡಿ ಬ್ಯಾಂಕುಗಳ ಗ್ರಾಹಕರು ಠೇವಣಿ ವಿಮಾ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕೆಂದು ಸರಕಾರವನ್ನು ಆಗ್ರಹಿಸುತ್ತಿದ್ದಾರೆ. ಹೀಗಾಗಿ, ಸರಕಾರವು ಪ್ರಸ್ತುತ ಇರುವ ರೂ. 5 ಲಕ್ಷ ಪರಿಹಾರದ ಗರಿಷ್ಠ ಮಿತಿಯನ್ನು ಇನ್ನು ಆರು ತಿಂಗಳಿನಲ್ಲಿ ಹೆಚ್ಚಿಸುವ ಚಿಂತನೆಯಲ್ಲಿದೆ ಎಂಬ ಹಣಕಾಸು ಸಚಿವಾಲಯದ ಮಾಹಿತಿಯನ್ನು ಉಲ್ಲೇಖಿಸಿ ಹಣಕಾಸು ಮಾಧ್ಯಮಗಳು ವರದಿ ಮಾಡಿವೆ. ಈ ವಿಷಯದಲ್ಲಿ ಹಣಕಾಸು ಸಚಿವಾಲಯವು ಅಂತಿಮ ನಿರ್ಣಯ ಕೈಗೊಳ್ಳುವುದು ಇನ್ನೂ ಬಾಕಿಯಿದ್ದು, ಐದು ವರ್ಷಗಳ ಹಿಂದೆ ನಿಗದಿ ಯಾಗಿದ್ದ ರೂ. 5 ಲಕ್ಷ ಗರಿಷ್ಠ ಮಿತಿಯು ರೂ. 10 ಲಕ್ಷ ವರೆಗೆ ಏರುವ ಸಾಧ್ಯತೆ ದಟ್ಟವಾಗಿದೆ.

ಈ ನಿಟ್ಟಿನಲ್ಲಿ ಸಚಿವಾಲಯವು ಕಾರ್ಯೋನ್ಮುಖವಾಗಿದ್ದು, ಇದಕ್ಕೆಷ್ಟು ಠೇವಣಿದಾರರನ್ನು ಒಳಪಡಿಸಬಹುದು, ಒಳಪಡುವ ಒಟ್ಟು ಠೇವಣಿ, ಎಷ್ಟು ಠೇವಣಿಗೆ ಸರಕಾರ ಗ್ಯಾರಂಟಿ ಕೊಡಬಹುದು ಮತ್ತು ಸದ್ಯ ವಿಮಾ ರಕ್ಷಣೆಗೆ ಒಳಪಟ್ಟ ಠೇವಣಿ ಮುಂತಾದ ಮಾಹಿತಿಗಳನ್ನು ಅದು ಕಲೆಹಾಕುತ್ತಿದೆ.

ಪರಿಹಾರದ ಲೆಕ್ಕಾಚಾರ ಹೇಗೆ? : ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯು ದಿವಾಳಿಯಾದಾಗ, ವಿಫಲಗೊಂಡಾಗ, ಸಮಾಪ್ತಿಯಾದಾಗ ಅಥವಾ ಲಿಕ್ವಿಡೇಟ್ ಆದಾಗ, ಠೇವಣಿ ವಿಮಾ ನಿಗಮವು ಠೇವಣಿದಾರರಿಗೆ, ಅವರು ಬ್ಯಾಂಕ್‌ನಲ್ಲಿ ಇರಿಸಿದ ಠೇವಣಿ (ಬಡ್ಡಿಯೂ ಸೇರಿ) ಅಥವಾ ಗರಿಷ್ಠ ಐದು ಲಕ್ಷ ರುಪಾಯಿಗಳ ಪರಿಹಾರವನ್ನು, ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಸ್ಥಗಿತವಾದ ದಿನ ಖಾತೆ ಯಾರ ಹೆಸರಿನಲ್ಲಿ ಇರುತ್ತದೆಯೋ ಅವರಿಗೆ ನೀಡಲಾಗುತ್ತದೆ. ಈ ಪರಿಹಾರದ ಮೊತ್ತವು ಗ್ರಾಹಕನು ಒಂದು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಹೊಂದಿರುವ ಎಲ್ಲಾ ರೀತಿಯ (ಉಳಿತಾಯ, ಚಾಲ್ತಿ, ರೆಕರಿಂಗ್ ಮತ್ತು ನಿಶ್ಚಿತ ಠೇವಣಿ) ಖಾತೆಗಳಿಗೆ ಅನ್ವಯವಾಗುತ್ತದೆ. ಈ ಪರಿಹಾರವನ್ನು ನೀಡುವಾಗ ಒಂದು ಬ್ಯಾಂಕ್ ಹೆಸರಿನಲ್ಲಿ ಲೆಕ್ಕ ಹಾಕಲಾಗುತ್ತದೆಯೇ ವಿನಾ, ಶಾಖೆಗಳಲ್ಲಿ ಇರುವ ಠೇವಣಿಗಳನ್ನು ಪ್ರತ್ಯೇಕವಾಗಿ ಪರಿಗಣಿಸುವುದಿಲ್ಲ. ಉದಾಹರಣೆಗೆ, ಗ್ರಾಹಕನೊಬ್ಬನು ಕೆನರಾ ಬ್ಯಾಂಕಿನ ನಾಲ್ಕು ಶಾಖೆಗಳಲ್ಲಿ ಠೇವಣಿ ಇಟ್ಟಿದ್ದರೆ, ವಿಮಾ ಪರಿಹಾರ ನೀಡುವಾಗ ಠೇವಣಿ ವಿಮಾ ನಿಗಮವು, ನಾಲ್ಕೂ ಶಾಖೆಗಳಲ್ಲಿರುವ ಠೇವಣಿಗಳನ್ನು ಪ್ರತ್ಯೇಕವಾಗಿ ಪರಿಗಣಿಸದೇ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಲೆಕ್ಕ ಹಾಕಿ ಪರಿಹಾರವನ್ನು ನೀಡುತ್ತದೆ.

ಗ್ರಾಹಕನೊಬ್ಬ ಒಂದು ಶಾಖೆಯಲ್ಲಿ ನಿಶ್ಚಿತ ಠೇವಣಿಯಾಗಿ ರೂ. 4 ಲಕ್ಷ, ರೆಕರಿಂಗ್ ಡಿಪಾಸಿಟ್ ಆಗಿ ರೂ. 25000, ಉಳಿತಾಯ ಖಾತೆಯಲ್ಲಿ ರೂ. 75000, ಚಾಲ್ತಿ ಖಾತೆಯಲ್ಲಿ ರೂ. 50000 ಮತ್ತು ಸಂಚಿತ ಖಾತೆಯಲ್ಲಿ ರೂ. 2500 ಇರಿಸಿದ್ದು, ಅಕಸ್ಮಾತ್ತಾಗಿ ಬ್ಯಾಂಕ್ ಸ್ಥಗಿತಗೊಂಡರೆ / ದಿವಾಳಿಯಾದರೆ, ಆ ಗ್ರಾಹಕನಿಗೆ ಆತನ ಒಟ್ಟು ರೂ. 575000 ಠೇವಣಿಗೆ ಬದಲಾಗಿ ರೂ. 500000 ಪರಿಹಾರ ದೊರಕುತ್ತದೆ. ಇದೇ ಬ್ಯಾಂಕಿನ ಇನ್ನೊಂದು ಶಾಖೆಯಲ್ಲಿ ಬೇರೆ ಡಿಪಾಸಿಟ್ ಇದ್ದರೆ, ಈಗಾಗಲೇ ಈ ಬ್ಯಾಂಕಿನಲ್ಲಿ ಈ ಗ್ರಾಹಕನ ಕೋಟಾ ಮುಗಿದಿದ್ದು ಬೇರೆ ಪರಿಹಾರ ದೊರಕುವುದಿಲ್ಲ.

ಡಿಪಾಸಿಟರ್ ಅಪ್ರಾಪ್ತನ ಪೋಷಕರಾಗಿದ್ದರೆ, ಆ ಗ್ರಾಹಕನಿಗೆ ಐದು ಲಕ್ಷದವರೆಗೆ ಪರಿಹಾರ ದೊರಕುತ್ತದೆ. ಹಾಗೆಯೇ ಠೇವಣಿ ಇರಿಸಿದ ಪ್ರತಿ ಬ್ಯಾಂಕ್‌ನಲ್ಲೂ ಐದು ಲಕ್ಷ ರುಪಾಯಿವರೆಗೆ ಪರಿಹಾರ ಸಿಗುತ್ತದೆ. ಈ 5 ಲಕ್ಷ ರೂಪಾಯಿಯ ಗರಿಷ್ಠ ಮಿತಿಯು ಸದ್ಯದಲ್ಲೇ ಗಮನಾರ್ಹವಾಗಿ ಏರುವ ಸೂಚನೆಯು ಹಣಕಾಸು ಸಚಿವಾಲಯದಿಂದ ಬಂದಿದ್ದು, ಬ್ಯಾಂಕ್ ಠೇವಣಿದಾರರು ಸ್ವಲ್ಪ ನೆಮ್ಮದಿಯನ್ನು ಎದುರು ನೋಡುತ್ತಿದ್ದಾರೆ. ಈ ಹೊಸ ವ್ಯವಸ್ಥೆ ಜಾರಿಗೆ ಬಂದರೆ, ಠೇವಣಿದಾರರು ತಮ್ಮ ಠೇವಣಿಯನ್ನು ವಿಭಜಿಸಿ, ಬೇರೆ ಬೇರೆ ಬ್ಯಾಂಕುಗಳಲ್ಲಿ ಇರಿಸುವ ತಂತ್ರಗಾರಿಕೆಯು ಸ್ವಲ್ಪ ನಿಯಂತ್ರಣಕ್ಕೆ ಬರಬಹುದು, ಬ್ಯಾಂಕ್ ಶಾಖೆಗಳಲ್ಲಿ ಠೇವಣಿ ಸ್ವಲ್ಪ ಹೆಚ್ಚಬಹುದು. ಯಾವುದೇ ಒಂದು ಬ್ಯಾಂಕಿನಲ್ಲಿ (ಎಲ್ಲ ಶಾಖೆಗಳು ಸೇರಿ) ತಮ್ಮ ಠೇವಣಿಯು 5 ಲಕ್ಷ ರೂಪಾಯಿಯನ್ನು ಮೀರದಂತೆ ಎಚ್ಚರ ವಹಿಸುವವರು, ಈ ಮೊತ್ತವನ್ನು ಸ್ವಲ್ಪ ಏರಿಸಬಹುದು. ಒಟ್ಟಾರೆ ಹೇಳುವುದಾದರೆ, ಬ್ಯಾಂಕಿಂಗ್ ಉದ್ಯಮದ ಈ ಎರಡು ಬೆಳವಣಿಗೆಗಳಿಂದಾಗಿ ಗ್ರಾಹಕರು ಕೊಂಚ ನಿರಾಳರಾಗುವಂತಾಗಿದೆ. ಗ್ರಾಹಕರ ಠೇವಣಿ ಮೇಲಿನ ಬಡ್ಡಿ ಇಳಿತ ಮತ್ತು ಸಾಲದ ಮೇಲಿನ ಬಡ್ಡಿ ಏರಿಕೆ ಎಂಬ ಮಾತುಗಳನ್ನಷ್ಟೇ ಬ್ಯಾಂಕುಗಳಿಂದ ಕೇಳುತ್ತಿದ್ದ ಗ್ರಾಹಕರಿಗೆ ಈ ಎರಡು ಬೆಳವಣಿಗೆಗಳು ಅಚ್ಚರಿ ಮೂಡಿಸಿವೆ. ಬ್ಯಾಂಕುಗಳ ವೈಫಲ್ಯದ ಪ್ರಮಾಣ ಇತ್ತೀಚೆಗೆ ಹೆಚ್ಚಿರುವುದು ಠೇವಣಿದಾರರಲ್ಲಿ ಚಿಂತೆಗೆ ಕಾರಣವಾಗಿತ್ತು.

ಠೇವಣಿದಾರರಲ್ಲಿ ಹಿರಿಯ ನಾಗರಿಕರು ಮತ್ತು ನಿವೃತ್ತರು ಹೆಚ್ಚಿನ ಪ್ರಮಾಣದಲ್ಲಿದ್ದು, ತಾವು ಜತನದಿಂದ ಕೂಡಿಟ್ಟ ಹಣವು ತಮ್ಮ ಕೊನೆಗಾಲದಲ್ಲಿ ತಮಗೇ ಸಿಗುವಂತಾಗಲಿ ಎಂದು ಅವರು ಆಶಿಸುತ್ತಿದ್ದರು. ಸರಕಾರದ ಈ ಕ್ರಮದಿಂದಾಗಿ ಅವರ ಆತಂಕ ಪೂರ್ಣವಾಗಿ ದೂರವಾಗದಿದ್ದರೂ, ಅವರ ನೆಮ್ಮದಿಯನ್ನು ಅದು ಸ್ವಲ್ಪ ಹೆಚ್ಚಿಸಲಿದೆ ಎಂದು ತೋರುತ್ತದೆ. –ಕೃಪೆ

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಡಿಜಿಟಲ್ ಪಾವತಿ ದಾಖಲೆ : ಜುಲೈನಲ್ಲಿ 25 ಟ್ರಿಲಿಯನ್ ವಹಿವಾಟು

ನವದೆಹಲಿ: ಭಾರತದ ಏಕೀಕೃತ ಪಾವತಿ ಇಂಟರ್ಫೇಸ್ ಯುಪಿಐ ವಹಿವಾಟುಗಳು ನೂತನ ದಾಖಲೆ ಬರೆದಿದ್ದು, ಜುಲೈನಲ್ಲಿ ಬರೊಬ್ಬರಿ 19.47 ಬಿಲಿಯನ್ ತಲುಪಿದೆ. ಆ ಮೂಲಕ ಯುಪಿಐ ವಹಿವಾಟು ಹಿಂದಿನ ತಿಂಗಳಿಗಿಂತ ಶೇ. 6ರಷ್ಟು ಹೆಚ್ಚಾಗಿದ್ದು, ಇದು ಡಿಜಿಟಲ್ ಹಣಕಾಸು ವೇದಿಕೆಯ ಜನಪ್ರಿಯತೆಯನ್ನು ಸೂಚಿಸುತ್ತದೆ.

ಭಾರತದಲ್ಲಿ ಯುಪಿಐ ವಹಿವಾಟು ಪ್ರಮಾಣ 25.08 ಟ್ರಿಲಿಯನ್ ರೂ. ಗಳಾಗಿದ್ದು, ಮೌಲ್ಯದಲ್ಲಿ ಶೇ.4ರಷ್ಟು ಹೆಚ್ಚಳವಾಗಿದೆ. ಪ್ರಮುಖವಾಗಿ ಜೂನ್‌ನಲ್ಲಿ 24.04 ಟ್ರಿಲಿಯನ್ ರೂ.ಗಳ ಮೌಲ್ಯದ 18.4 ಬಿಲಿಯನ್ ವಹಿವಾಟುಗಳು ನಡೆದಿವೆ ಎಂದು ಭಾರತೀಯ ರಾಷ್ಟ್ರೀಯ ಪಾವತಿ ನಿಗಮ ತಿಳಿಸಿದೆ. ದತ್ತಾಂಶಗಳ ಪ್ರಕಾರ, ಮೇ ತಿಂಗಳಲ್ಲಿ 18.68 ಬಿಲಿಯನ್ ವಹಿವಾಟುಗಳು ನಡೆದಿದ್ದ ದಾಖಲೆಯ ಗರಿಷ್ಠ ರೂ. 25.14 ಟ್ರಿಲಿಯನ್‌ಗೆ ಹೋಲಿಸಿದರೆ ಯುಪಿಐ ವಹಿವಾಟುಗಳ ಮೌಲ್ಯ ಕಡಿಮೆಯಾಗಿದೆ.

ದೈನಂದಿನ ವಹಿವಾಟುಗಳು ಜೂನ್‌ನಲ್ಲಿ 613 ಮಿಲಿಯನ್‌ನಿಂದ ಜುಲೈನಲ್ಲಿ 628 ಮಿಲಿಯನ್‌ಗೆ ಏರಿದೆ. ಅವುಗಳ ಮೌಲ್ಯವು 80,131 ಕೋಟಿ ರೂ.ಗಳಿಂದ 80,919 ಕೋಟಿ ರೂ.ಗಳಿಗೆ ಏರಿದೆ. ಜುಲೈ ತಿಂಗಳ ಯುಪಿಐ ಸಂಖ್ಯೆಗಳು 2024ರ ಅದೇ ತಿಂಗಳಿಗೆ ಹೋಲಿಸಿದರೆ ಪ್ರಮಾಣದಲ್ಲಿ ಶೇ. 35 ರಷ್ಟು ಮತ್ತು ಮೌಲ್ಯದಲ್ಲಿ ಶೇ. 22 ರಷ್ಟು ಹೆಚ್ಚಾಗಿದೆ ಎಂದು ಮಾಹಿತಿಯಲ್ಲಿ ತಿಳಿಸಿದೆ.

ರೈಲ್ವೆ ಉದ್ಯೋಗಿಗಳ ಆರ್ಥಿಕ ಸ್ವಾವಲಂಬನೆಯ ಪ್ರೇರಣಾ ಶಕ್ತಿ

ನೌಕರರಿಗೆ ಉಪಯುಕ್ತ ಪಟ್ಟಣ ಸಹಕಾರ ಬ್ಯಾಂಕ್ ಎಂಬ ಹೆಗ್ಗಳಿಕೆ

ತಂತ್ರಜ್ಞಾನ ಆಧಾರಿತ ಸೇವೆ, ಸದಸ್ಯರ ಸ್ವಾವಲಂಬನೆಗೆ ನೆರವು

ಶತಮಾನದ ಸಂಭ್ರಮಾಚರಣೆಯೊಂದಿಗೆ, ಸಂತೃಪ್ತ ಸೇವೆ ಸಲ್ಲಿಸುತ್ತಿರುವ ಮೈಸೂರಿನ ರೈಲ್ವೆ – ಕೋ ಆಪರೇಟಿವ್ ಬ್ಯಾಂಕ್

ಕರ್ನಾಟಕವು ಸಹಕಾರ ಚಳವಳಿಯಲ್ಲಿ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದ್ದು, ಸುಮಾರು 45 ಸಾವಿರ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಚಳವಳಿಯ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿವೆ.

ಈ ಸಂಸ್ಥೆಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ವಲಯ ಪ್ರಮುಖ ಪಾತ್ರ ವಹಿಸಿದ್ದು, ಪಟ್ಟಣ ಪ್ರದೇಶದ ಜನರಿಗೆ ಆರ್ಥಿಕವಾಗಿ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಯಶಸ್ವಿಯಾಗಿದೆ. ಇವುಗಳ ಮೂಲ ಆಶಯ ಪಟ್ಟಣ ಪ್ರದೇಶದ ಅಬಲವರ್ಗದವರಿಗೆ ಅಗತ್ಯವಿರುವ ಹಣಕಾಸಿನ ನೆರವನ್ನು ನೀಡುವುದಾಗಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ 251 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕುಗಳಲ್ಲಿ ಮೈಸೂರಿನ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ 'ಸಹ ಉತ್ತಮ ಖ್ಯಾತಿ ಪಡೆದಿದ್ದು, ಗ್ರಾಹಕರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗುವ ಮೂಲಕ 100 ವರ್ಷಗಳ ಸುದೀರ್ಘ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಾ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾಗಿದೆ.

ಬ್ಯಾಂಕಿನ ಆರಂಭ : ಬ್ಯಾಂಕ್ 1919–1920ರ ಸಹಕಾರ ವರ್ಷದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಎಲ್.ವಿ. ಗೋಪಾಲನ್ (ಕಛೇರಿ ಅಧೀಕ್ಷರು, ಆಡಿಟ್ ಕಛೇರಿ) ರವರು ಮೊದಲು ಈ ಸಂಸ್ಥೆಯನ್ನು ರೈಲ್ವೆ ಸೊಸೈಟಿಯಾಗಿ ರೈಲ್ವೆ ಆಡಿಟ್ ಕಛೇರಿಯಲ್ಲಿ 112 ಸದಸ್ಯರನ್ನೊಳಗೊಂಡು 2580 ರೂ.ಗಳ ಷೇರು ಬಂಡವಾಳದೊಂದಿಗೆ ಪ್ರಾರಂಭಿಸಿದರು. ಭಾರತೀಯ ರೈಲ್ವೆಯಾಗಿ ಗುರುತಿಸಿಕೊಂಡ ನಂತರ ಸಂಘವು ಸದರನ್ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ಲಿ., ಆಗಿ ಪುನರ್ ನಾಮಕರಣಗೊಂಡು ಮೈಸೂರಿನ ರೈಲ್ವೆ ಕಛೇರಿಯ ಕಟ್ಟಡದಲ್ಲಿ ಎಂ.ಎನ್. ಕಾಶಿಪತಯ್ಯ (ಚೀಫ್ ಕ್ಲರ್ಕ್, ಟ್ರಾಫಿಕ್ ಮ್ಯಾನೇಜರ್ ಕಛೇರಿ) ರವರು ಪ್ರಾರಂಭಿಸಿದರು. ಹೀಗೆ ರೈಲ್ವೆ ಇಲಾಖೆಯಲ್ಲಿ ಕಾರ್ಯನಿರತರಾಗಿರುವ ಉದ್ಯೋಗಿಗಳ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿ, ಪ್ರೇರಕವಾಗಿ ಬ್ಯಾಂಕು ಕಳೆದ ಒಂದು ಶತಮಾನದಿಂದ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕ್ 1945 ರಲ್ಲಿ ಸಿಲ್ವರ್ ಜುಬ್ಲಿ, 1970 ರಲ್ಲಿ ಗೋಲ್ಡನ್ ಜುಬ್ಲಿ, ದಿನಾಂಕ 28.12.1980 ರಲ್ಲಿ ಬ್ಯಾಂಕಿನ ಅಧ್ಯಕ್ಷರು ಹಾಗೂ ವಿಭಾಗೀಯ ರೈಲ್ವೆ ಮ್ಯಾನೇಜರ್ ಪಿ ಎಂ ಜೊಸೇಫ್ ರವರ ಅಧ್ಯಕ್ಷತೆಯಲ್ಲಿ ಡೈಮಂಡ್ ಜುಬ್ಲಿಯನ್ನು ಆಚರಿಸಿಕೊಂಡಿದೆ.

ಸದಸ್ಯತ್ವ : ಬ್ಯಾಂಕಿನ ಸದಸ್ಯತ್ವವನ್ನು ಖಾಯಂ ರೈಲ್ವೆ ನೌಕರರು ಹೊಂದುವ ಅರ್ಹತೆ ಇದ್ದು, ಕರ್ನಾಟಕ ರಾಜ್ಯ ಪರಿಮಿತಿಯೊಳಗೆ ಕಾರ್ಯನಿರ್ವಹಿಸುತ್ತಿರುವ ರೈಲ್ವೆ ನೌಕರರು ಸದಸ್ಯತ್ವವನ್ನು ಪಡೆಯಬಹುದಾಗಿದ್ದು, ಬ್ಯಾಂಕಿನ ಕಾರ್ಯಕ್ಷೇತ್ರ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುತ್ತದೆ. ಸದಸ್ಯರ ಉಳಿತಾಯ ಮತ್ತು ಮಿತವ್ಯಯದ ಸಂಬಂಧ ಸದಸ್ಯರ ವೇತನದಿಂದ MBF ಮತ್ತು DRF ಮೊತ್ತವನ್ನು ರಿಕವರಿ ಮಾಡಲಾಗುತ್ತಿದೆ.

ಸಾಲಗಳು : ಬ್ಯಾಂಕಿನ ಸದಸ್ಯರಿಗೆ ಪ್ರಾರಂಭದ ದಿನಗಳಲ್ಲಿ ವೈಯಕ್ತಿಕ ಸಾಲವನ್ನು ಮಾತ್ರ 200 ರೂ. ಗಳವರಗೆ ನೀಡಲಾಗುತ್ತಿತ್ತು.

ಪ್ರಸ್ತುತ ಸದಸ್ಯರಿಗೆ ರೂ. 25 ಲಕ್ಷಗಳ ವರಗೆ ವಿಶೇಷಸಾಲ, ರೂ. 3 ಲಕ್ಷಗಳವರಗೆ ವಿದ್ಯಾಭ್ಯಾಸ ಸಾಲ, ರೂ. 8 ಲಕ್ಷಗಳ ವರಗೆ ವೇತನ ರಿಕವರಿ ಆಧಾರಿತ ಸಾಲ ಮತ್ತು ರೂ. 2 ಲಕ್ಷಗಳ ವರಗೆ ಗ್ರಾಹಕರ ಸಾಲವನ್ನು ವಿತರಿಸಲಾಗುತ್ತಿರುತ್ತದೆ.

ಅವಧಿ ಠೇವಣಿ : 1945 ರಲ್ಲಿ 2 ಲಕ್ಷ ರೂ. ಅವಧಿ ಠೇವಣಿಗಳಿದ್ದುದು ಪ್ರಸ್ತುತ ರೂ. 439 ಕೋಟಿಗಳಷ್ಟು ಬೃಹದಾಕಾರವಾಗಿ ಬೆಳವಣಿಗೆ ಹೊಂದಿರುತ್ತದೆ.

ಷೇರು ಬಂಡವಾಳ : 2,580/– ರೂ. ಷೇರು ಬಂಡವಾಳದಿಂದ ಪ್ರಾರಂಭಗೊಂಡು ಪ್ರಸ್ತುತ ರೂ. 66 ಕೋಟಿಗಳಷ್ಟು ಸಂಗ್ರಹಣೆಯಾಗಿದ್ದು ಷೇರು ಬಂಡವಾಳ ಗಮನಾರ್ಹವಾಗಿ ವೃದ್ಧಿಯಾಗಿರುತ್ತದೆ.

2000ನೇ ಇಸವಿ ನಂತರ ಬ್ಯಾಂಕಿನ ಬೆಳವಣಿಗೆಯ ಕುರಿತು

- ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ವತಿಯಿಂದ ಜಿಲ್ಲೆಯ ಅತ್ಯುತ್ತಮ ಸಹಕಾರಿ ಬ್ಯಾಂಕೆಂದು ಪರಿಗಣಿಸಿ ಪ್ರಸಸ್ತಿಯನ್ನು ನೀಡಿ ಗೌರವಿಸಲಾಗಿದೆ.
- ಬ್ಯಾಂಕು 2009ರಲ್ಲಿ ಮೈಸೂರಿನಲ್ಲೇ ಪ್ರಪ್ರಥಮ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡ ಕೋ ಆಪರೇಟಿವ್ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ಸಹ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.
- 2009ರಲ್ಲಿ ಪ್ರಕೃತಿ ವಿಕೋಪದ ಸಂಬಂಧ ದಿನಾಂಕ 10.10.2009 ರಂದು ಬ್ಯಾಂಕಿನ ವತಿಯಿಂದ 5 ಲಕ್ಷ ರೂ.ಗಳ ದೇಣಿಗೆಯನ್ನು ಪ್ರಕೃತಿ ವಿಕೋಪ ನಿಧಿಗೆ ನೀಡಲಾಗಿದೆ.
- ಬ್ಯಾಂಕ್ ಸತತವಾಗಿ 2002ನೇ ಸಾಲಿನಿಂದ ಆಡಿಟ್ ವರ್ಗೀಕರಣದಲ್ಲಿ "ಎ" ಶ್ರೇಣಿಯ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ.
- ಬ್ಯಾಂಕಿನ ಠೇವಣಿದಾರರುಗಳ ಬಡ್ಡಿದರಗಳನ್ನು NEFT ಮುಖಾಂತರ ಠೇವಣಿದಾರರುಗಳು ಸೂಚಿಸಿದ ಬ್ಯಾಂಕ್‌ಗಳಿಗೆ ವರ್ಗಾವಣೆ ಮಾಡಲಾಗುತ್ತಿರುತ್ತದೆ.
- ಬ್ಯಾಂಕಿನ ರೇಕಾರ್ಡ್‌ಗಳನ್ನು ಸಂರಕ್ಷಿಸಿಡಲು Docket Filing System ಅನ್ನು ಅಳವಡಿಸಿಕೊಂಡಿದೆ.
- ವಿಶೇಷ ಸಾಲದ ಮೇಲಿನ ಬಡ್ಡಿದರಗಳನ್ನು 13% ರಿಂದ 10%ಕ್ಕೆ ಇಳಿಕೆ ಮಾಡಲಾಗಿರುತ್ತದೆ.
- ಬ್ಯಾಂಕಿನ ಸದಸ್ಯರು ಹಾಗೂ ಠೇವಣಿದಾರರಿಗೆ Transaction ಮಾಹಿತಿಯನ್ನು SMS Alert ಮುಖಾಂತರ ರವಾನಿಸಲಾಗುತ್ತಿದೆ.
- ಬ್ಯಾಂಕಿಗೆ IFSC Code ಅನ್ನು ಪಡೆಯಲಾಗಿದೆ.
- ಬ್ಯಾಂಕಿನಲ್ಲಿ ಸದಸ್ಯರುಗಳಿಗೆ ಹಾಗೂ ಠೇವಣಿದಾರರಿಗೆ ಬ್ಯಾಂಕಿನ ಮಾಹಿತಿಗಾಗಿ ವೆಬ್‌ಸೈಟ್‌ಅನ್ನು (www.swrcbmysore.com) ಅನಾವರಣಗೊಳಿಸಲಾಗಿದೆ.
- ಬ್ಯಾಂಕಿನ ಹೊಸ ನೋಂದಾಯಿತ ಸದಸ್ಯರುಗಳಿಗೆ ವಿಶೇಷ ಸಾಲವನ್ನು ಸದಸ್ಯರ ಒಂದು ತಿಂಗಳ ಸಂಬಳ ಕಟಾವಣೆಯಾದ

ಬ್ಯಾಂಕ್ 5 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯ ಪಕ್ಷಿನೋಟ (ರೂ.ಲಕ್ಷಗಳಲ್ಲಿ)

ಕ್ರ.ಸಂ.	ವರ್ಷಗಳು	ಸದಸ್ಯರು	ಷೇರು ಬಂಡವಾಳ	ಠೇವಣಿಗಳು	ಸಾಲ ವಿತರಣೆ	ದುಡಿಯುವ ಬಂಡವಾಳ	ಬ್ಯಾಂಕಿನ ವಹಿವಾಟು	ನಿವ್ವಳ ಲಾಭ
1	2020–21	11731	6075.25	70468.42	47638.43	77141.73	118106.87	242.93
2	2021–22	10698	5958.06	68730.37	46063.55	75747.03	114915.22	738.06
3	2022–23	9590	5753.67	58172.44	45328.93	64977.12	103561.36	707.12
4	2023–24	9702	6082.94	58896.36	51462.06	66340.72	110358.43	1062.90
5	2024–25	9706	6604.81	63340.75	57740.41	71354.10	121081.17	935.07

ನಂತರ ಸಾಲ ವಿತರಿಸಲಾಗುತ್ತಿದೆ.

- ಸದಸ್ಯರುಗಳಿಗೆ ವಿಶೇಷ ಸಾಲವನ್ನು 12 ತಿಂಗಳಿಗೊಮ್ಮೆ ನವೀಕರಿಸುವ ಸೌಲಭ್ಯವನ್ನು ನೀಡಲಾಗುತ್ತಿದೆ.
- ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯಂತೆ ಬ್ಯಾಂಕಿನಲ್ಲಿ CASA Deposit ಸಂಗ್ರಹಣೆ ಬಗ್ಗೆ ಕ್ರಮ ಕೈಗೊಂಡಿದ್ದು, ಬ್ಯಾಂಕಿನಲ್ಲಿ CASA Deposit ಗಳಾದ ಆವರ್ತ ಠೇವಣಿ, ಉಳಿತಾಯ ಖಾತೆ ಮತ್ತು ಪಿಗ್ಮೀ ಠೇವಣಿ ಸಂಗ್ರಹಣೆ ಬೃಹದಾಕಾರವಾಗಿ ಬೆಳವಣಿಗೆ ಹೊಂದಿದೆ.

ನೌಕರರ ಕ್ಷೇಮಾಭಿವೃದ್ಧಿಗಾಗಿ ಸಹಕಾರ ತತ್ವಾಧಾರದ ಮೇಲೆ ಆರಂಭವಾದ ಬ್ಯಾಂಕೊಂದು ಈಗಾಗಲೇ ಶತಮಾನ ದಾಟಿ, ಅಭಿವೃದ್ಧಿ ಪಥದಲ್ಲಿ ಮುಂದುವರೆದಿರುವುದು ಸಹಕಾರಿಗಳಲ್ಲಿ ಸಹಕಾರ ಬ್ಯಾಂಕಿಂಗ್ ವಲಯದ ಕುರಿತು ಅಭಿಮಾನ ಹಾಗೂ ನಂಬಿಕೆಯನ್ನು ಭದ್ರಗೊಳಿಸಿದೆ. ಈ ಬ್ಯಾಂಕಿನ ಕಾರ್ಯಚಟುವಟಿಕೆಗಳು ಮಾದರಿ ಹಾಗೂ ಅನುಕರಣೀಯ ಎಂದು ಬ್ಯಾಂಕಿನ ಪ್ರಗತಿ ವೀಕ್ಷಿಸಿದಾಗ ತಿಳಿದು ಬರುತ್ತದೆ.

ಆಡಳಿತ ಮಂಡಳಿ

ಎಲ್.ವಿ. ಗೋಪಾಲನ್
ಸಂಸ್ಥಾಪಕರು

ಎಂ.ಎಸ್. ಕಾಶಿಪತಯ್ಯ
ಸಂಸ್ಥಾಪಕರು

ಮಂಜೇಗೌಡ ಎಂ.ಬಿ.
ಅಧ್ಯಕ್ಷರು

ಆನಂದ ಎಸ್.
ಉಪಾಧ್ಯಕ್ಷರು

ಹನುಮಂತ
ನಿರ್ದೇಶಕರು

ಯೋಗಾನಂದ ಎಂ.ಬಿ.
ನಿರ್ದೇಶಕರು

ಮುತ್ತುಕುಮಾರ್ ಎಸ್.
ನಿರ್ದೇಶಕರು

ಚಂದ್ರಶೇಖರ್ ಆರ್.
ನಿರ್ದೇಶಕರು

ಯತಿರಾಜು ಎಂ.
ನಿರ್ದೇಶಕರು

ರಾಮನಾದನ್ ಸಿ.
ನಿರ್ದೇಶಕರು

ಮಂಜುನಾಥ ಸಿ.ಹೆಚ್.
ನಿರ್ದೇಶಕರು

ಶಿವಶಂಕರ್ ಸಿ.
ನಿರ್ದೇಶಕರು

ಉತ್ತೇಜ್.ಎಸ್.
ನಿರ್ದೇಶಕರು

ಶ್ವೇತಾ ಎಸ್.
ನಿರ್ದೇಶಕರು

ನಿರ್ಮಲ ಸಿ.
ನಿರ್ದೇಶಕರು

ಚಂದ್ರಶೇಖರ್ ಪಿ.
ನಿರ್ದೇಶಕರು

ನಂದಕುಮಾರ್ ಎನ್.ಎಸ್.
ನಿರ್ದೇಶಕರು

ಫೋನ್ ಪೇ ಮತ್ತು ಗೂಗಲ್ ಪೇ ಎಷ್ಟು ಬಳಸಿದರೆ ತೆರಿಗೆ ಕಟ್ಟಬೇಕು

ಫೋನ್ ಪೇ ಹಾಗೂ ಗೂಗಲ್ ಪೇ ಬಳಕೆದಾರರಿಗೆ ಕರ್ನಾಟಕ ಸರ್ಕಾರವು (ವಾಣಿಜ್ಯ ಇಲಾಖೆ) ಶೋಕಾಸ್ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ಎಷ್ಟು ಹಣ ವಹಿವಾಟು ಮಾಡಿದರೆ ಜಿಎಸ್‌ಟಿ ಪಾವತಿ ಮಾಡಬೇಕು ಹಾಗೂ ಈಗ ಎದುರಾಗಿರುವ ಗೊಂದಲ ಏನು. ಇದೀಗ 13,000 ಸಾವಿರ ಸಣ್ಣ ವ್ಯಾಪಾರಿಗಳಿಗೆ ಶೋಕಾಸ್ ನೋಟಿಸ್ ನೀಡಿರುವುದು ಯಾವ ಕಾರಣಕ್ಕೆ ಎನ್ನುವ ಸಂಪೂರ್ಣ ವಿವರ ಇಲ್ಲಿದೆ. ಕರ್ನಾಟಕದ ಸಣ್ಣ ಹಾಗೂ ಮಧ್ಯಮ ವರ್ಗದ ಅಂಗಡಿಗಳ ವ್ಯಾಪಾರಿಗಳು ಕಂಗಾಲಾಗಿ ಹೋಗಿದ್ದಾರೆ. ಹಾಗಾದರೆ ಗೂಗಲ್ ಪೇ ಹಾಗೂ ಫೋನ್ ಪೇ ಬಳಕೆದಾರರು ಯಾವಾಗ ಜಿಎಸ್‌ಟಿ ವ್ಯಾಪ್ತಿಗೆ ಬರುತ್ತಾರೆ. ಏನಿದು ಚರ್ಚೆ ಎನ್ನುವ ಸಂಪೂರ್ಣ ಮಾಹಿತಿ ಇಲ್ಲಿದೆ. ಭಾರತದಲ್ಲಿ ಡಿಜಿಟಲ್ ಕ್ಷೇತ್ರದಲ್ಲಿ ಭಾರೀ ಬದಲಾವಣೆಗಳು ಆಗಿವೆ. ಕಳೆದ 10 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಡಿಜಿಟಲ್ ಕ್ರಾಂತಿಯೇ ಆಗಿದೆ. ಆದರೆ ಅದೇ ಡಿಜಿಟಲ್ ಕ್ರಾಂತಿಯಿಂದ ಇದೀಗ ಹಲವು ಸಣ್ಣ ವ್ಯಾಪಾರಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದೆ. ಕರ್ನಾಟಕ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯು ಜಿಎಸ್‌ಟಿ ಪಾವತಿಸದ ಆರೋಪದ ಮೇಲೆ ಬೀದಿ ವ್ಯಾಪಾರಿಗಳು ಹಾಗೂ ಸಣ್ಣ ವ್ಯವಹಾರಗಳು ಸೇರಿದಂತೆ ಅಂದಾಜು 13,000 ಸಣ್ಣ ವ್ಯಾಪಾರಿಗಳಿಗೆ ಶೋಕಾಸ್ ನೋಟಿಸ್‌ಗಳನ್ನು ನೀಡಿದೆ ಎನ್ನಲಾಗಿದ್ದು, ಇದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ.

ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ನಿರ್ದೇಶಕರುಗಳ ಜವಾಬ್ದಾರಿ ಹಾಗೂ ಕರ್ತವ್ಯಗಳು

▶▶ ಹೆಚ್.ಎಸ್. ನಾಗರಾಜಯ್ಯ, ಕೆ.ಸಿ.ಎಸ್., ಸಹಕಾರ ಸಂಘಗಳ ಅಪರ ನಿಬಂಧಕರು (ನಿ), ಬೆಂಗಳೂರು.

ಪಟ್ಟಣ ಸಹಕಾರ ಬ್ಯಾಂಕುಗಳು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರಡಿಯಲ್ಲಿ ದ್ವಿನಿಯಂತ್ರಣದಡಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಆಡಳಿತ ಮತ್ತು ವ್ಯವಸ್ಥಾಪನೆ ವಿಷಯದಲ್ಲಿ ಸಹಕಾರ ಇಲಾಖೆ ಹಾಗೂ ಹಣಕಾಸಿನ ವ್ಯವಹಾರ ಮತ್ತು ವಹಿವಾಟಿನ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನದಂತೆ ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ.

ಆಡಳಿತ ಮಂಡಳಿ ಸಹಕಾರ ಬ್ಯಾಂಕ್‌ಗಳಲ್ಲಿ ಪ್ರಧಾನ ಘಟಕ ಹಾಗೂ ನೀತಿ–ನಿರೂಪಣೆ (Policy Making body) ರಚಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಇದರ ಕರ್ತವ್ಯವಾಗಿದೆ. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 28ಸಿ ಮತ್ತು ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ : 2/14.01.062/15–16 ದಿನಾಂಕ:01.07.2015 ಹಾಗೂ 1/18.10.010/24–25 ದಿನಾಂಕ : 01.04.2024 ಕ್ರೋಢಿಕೃತ ಅಂಶಗಳು ಕೆಳಕಂಡಂತಿವೆ.

- ಬ್ಯಾಂಕಿನಲ್ಲಿ ಸದಸ್ಯತ್ವ ಅಂಗೀಕರಿಸುವ, ಸಕಾರಣದೊಂದಿಗೆ ತಿರಸ್ಕರಿಸುವ ಹಾಗೂ ಷೇರು ಹಂಚಿಕೆ ಮತ್ತು ಹಿಂದಿರುಗಿಸುವ ಅಧಿಕಾರ ಆಡಳಿತ ಮಂಡಳಿಗೆ ದತ್ತವಾಗಿದೆ. ಸದಸ್ಯತ್ವ ಕೋರಿ ಬಂದಂತ ಅರ್ಜಿಗಳನ್ನು ವಿಳಂಬ ಮಾಡದೆ, ಗರಿಷ್ಠ ಅವಧಿ ಎರಡು ತಿಂಗಳೊಳಗೆ ಇತ್ಯರ್ಥಪಡಿಸುವುದು. ಸಹಸದಸ್ಯತ್ವದ ಮಿತಿ ಒಟ್ಟು ಸಾಮಾನ್ಯ ಸದಸ್ಯತ್ವದ ಶೇ.15% ಮೀರತಕ್ಕದ್ದಲ್ಲ. ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿನ ಅರ್ಹರಿಗೆ ಸದಸ್ಯತ್ವ ನೋಂದಾಯಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ಕೊಡುವ ಮೂಲಕ ಯಾವುದೇ ವೆಚ್ಚವಿಲ್ಲದ ಷೇರು ಸಂಗ್ರಹಣೆಗೆ ಗಮನಹರಿಸಿದಂತಾಗುತ್ತದೆ.
- **ಸಂಪನ್ಮೂಲ ಸಂಗ್ರಹಣೆ :** ಬ್ಯಾಂಕಿನ ಸಂಪನ್ಮೂಲ ಸಂಗ್ರಹಣೆ ಬಾಬ್ತುಗಳಾದ ಷೇರು, ಠೇವಣಿ, ಸಾಲ, ನಿಧಿಗಳು, ದೇಣಿಗೆ ಹಾಗೂ ಆರ್ಥಿಕ ನೆರವುಗಳ ಬಗ್ಗೆ ಆಡಳಿತ ಮಂಡಳಿ ಪೂರ್ಣ ಅಧಿಕಾರ ಹೊಂದಿರುತ್ತದೆ. ಠೇವಣಿ ಸಂಗ್ರಹಣೆಯಲ್ಲಿ ಠೇವಣಿ ಮಿಶ್ರಣವಿರಬೇಕು. (Deposit Mix) ಅಂದರೆ ವಿವಿಧ ರೀತಿಯ ಠೇವಣಿಗಳು, ಅದರಲ್ಲೂ ದೀರ್ಘಾವಧಿ ಠೇವಣಿಗಿಂತ ಅಲ್ಪಾವಧಿ ಠೇವಣಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ವಿಶೇಷವಾಗಿ ಕಡಿಮೆ ಬಡ್ಡಿದರದ ಠೇವಣಿಯ ಪ್ರಮಾಣದ ಅನುಪಾತ ಕನಿಷ್ಠ ಶೇ.35 ರಿಂದ 40 ಹಾಗೂ ಹೆಚ್ಚು ಬಡ್ಡಿ ದರದ ಅನುಪಾತ ಶೇ.60ರ ನಿರ್ವಹಣೆ, ಸರಾಸರಿ ಠೇವಣಿ ವೆಚ್ಚ (Cost of Deposit) ನಿಯಂತ್ರಿಸಲು ಪೂರಕವಾಗುತ್ತದೆ. ಇದು ಆಡಳಿತ ಮಂಡಳಿಯು ನಿಗದಿಪಡಿಸುವ ವಿವೇಚನಾಯುಕ್ತ ಬಡ್ಡಿದರದ ತೀರ್ಮಾನಕ್ಕೆ ಸಹಕಾರಿಯಾಗಿದೆ. ಬ್ಯಾಂಕಿನ ಸ್ವಂತ ಬಂಡವಾಳ ಕೊರತೆ ಇದ್ದು, ಸದಸ್ಯರಿಂದ ಸಾಲ ಬೇಡಿಕೆ ಜಾಸ್ತಿ ಇದ್ದಲ್ಲಿ ಮಾತ್ರ ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕ ಅವಧಿಗೆ ಮಾತ್ರ ಬೇರೆ ಬ್ಯಾಂಕಿನಿಂದ ಸಾಲ ಪಡೆದು ವಿತರಿಸಬೇಕಾಗಿದೆ. ಆದರೆ ಖಾಯಂ ರೂಡಿಯಲ್ಲಿರಬಾರದು.
- **ಸಾಲ ಮಂಜೂರಾತಿ :** ಆಡಳಿತ ಮಂಡಳಿಯಿಂದ ಮತ್ತೊಂದು ಪ್ರಧಾನ ಅಧಿಕಾರ ಮತ್ತು ಕರ್ತವ್ಯವೆಂದರೆ ವಿವಿಧ ರೀತಿಯ ಸಾಲ ಮಂಜೂರಾತಿ ಮಾಡುವುದು. ಒಂದೇ ರೀತಿಯ ಸಾಲ ಮಂಜೂರಾತಿಗೆ ಸೀಮಿತವಾಗದೆ ಸಾಲ ಮಿಶ್ರಣ ನೀತಿ (Loan Mixing Policy) ಅನುಸರಿಸುವುದು. ಮೇಲಾಗಿ ವಿವಿಧ ಸಾಲ ನಿಯಮಾವಳಿಗಳನ್ನು ಬೈಲಾ, ರಿಸರ್ವ್ ಬ್ಯಾಂಕಿನ ನಿರ್ದೇಶನಗಳನ್ವಯ ರೂಪಿಸಿ ಅನುಷ್ಠಾನಕ್ಕೆ ತರುವುದು. ಸಾಲದ ಮೊತ್ತಕ್ಕೆ ಸೂಕ್ತ ಭದ್ರತೆ, ಮರುಪಾವತಿ ಸಾಮರ್ಥ್ಯ, ವಿಮೆ, ಪೂರ್ವ ಸಮೀಕ್ಷೆ ವರದಿ, ಮರುಪಾವತಿ ಅವಧಿ, ದಸ್ತಾವೇಜುಗಳು, ಬಡ್ಡಿದರ ಮುಂತಾದ ವಿವರಗಳ ಸಾಲ ನಿಯಮಾವಳಿಗಳನ್ನು ಸ್ಪಷ್ಟವಾಗಿ ರೂಪಿಸಿ ಜಾರಿಗೆ ಕೊಡುವುದು ಮುಖ್ಯವಾಗಿದೆ. ಮೇಲಾಗಿ, ವಿವೇಚನಾಯುಕ್ತ ಸಾಲ ಮಂಜೂರಾತಿ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಿರ್ದೇಶಕರು ಮತ್ತು ಅವರು ಹೊಂದಿರುವ ಕಂಪನಿಗಳಿಗೆ ಹಾಗೂ ಸಂಬಂಧಿಕರಿಗೆ ಸಾಲ ನೀಡಲು ಅವಕಾಶವಿರುವುದಿಲ್ಲ.
- **ಹೂಡಿಕೆ (Investment) :** ಬ್ಯಾಂಕಿನ ಆಡಳಿತ ಮಂಡಳಿ

ರಿಸರ್ವ್ ಬ್ಯಾಂಕಿನ ಸುತ್ತೋಲೆ ಹಾಗೂ ನಿರ್ದೇಶನದ ರೀತ್ಯಾ ಹೂಡಿಕೆ ಸಮಿತಿಯನ್ನು ಕಡ್ಡಾಯವಾಗಿ ರಚಿಸಿಕೊಂಡು ಕಾರ್ಯನಿರ್ವಹಿಸುವುದು. ಯಾವುದೇ ಹೂಡಿಕೆ ಮಾಡಬೇಕಾದಲ್ಲಿ ಪ್ರಥಮ ಆದ್ಯತೆ ಕೇಂದ್ರ, ರಾಜ್ಯ ಸರ್ಕಾರ ಹಾಗೂ ನೇರವಾಗಿ ರಿಜರ್ವ್ ಬ್ಯಾಂಕ್ ಸೂಚಿಸಿದ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸೂಕ್ತವಾಗಿದೆ. ಹಲವಾರು ಬ್ಯಾಂಕ್‌ಗಳು ಹೂಡಿಕೆಯಿಂದ ನಷ್ಟ ಅನುಭವಿಸಿರುವುದು ಸ್ಪಷ್ಟವಾಗಿದೆ. ಹೂಡಿಕೆಗೆ ಅನುಸರಿಸಬೇಕಾದ ಅಂಶಗಳೆಂದರೇ, ಕಾನೂನು ಸಮ್ಮತವೇ, ಸಾಕಷ್ಟು ಸುರಕ್ಷಿತವೇ (Secured) ಆದಾಯ ತರುತ್ತದೆಯೇ (Income) ಸುಲಭವಾಗಿ ನಗದೀಕರಣ ಸಾಧ್ಯವೇ (Liquidity) ಹಾಗೂ ಮಧ್ಯವರ್ತಿಗಳ ಮೂಲಕ ವ್ಯವಹರಿಸುವುದನ್ನು ತಪ್ಪಿಸುವುದು. ಹೂಡಿಕೆ ನಿಯಮಾವಳಿಗಳ ರೀತ್ಯಾ ಹೂಡಿಕೆ ಸಮಿತಿ ಸಭೆ ನಡೆಸಿ ವಿಮರ್ಶಿಸುವುದು. ಅನಧೀಕೃತ ಮತ್ತು ಅಸುರಕ್ಷಿತ ಸಂಸ್ಥೆಗಳಲ್ಲಿ ಯಾವುದೇ ಕಾರಣಕ್ಕೂ ಹೂಡಿಕೆ ಮಾಡಬಾರದು.

- **ನಿಧಿಗಳ ರಚನೆ ಹಾಗೂ ನಿರ್ವಹಣೆ :** ಬ್ಯಾಂಕಿನ ಬೈಲಾ ಹಾಗೂ ರಿಸರ್ವ್ ಬ್ಯಾಂಕಿನ ನಿರ್ದೇಶನದ ಪ್ರಕಾರ ನಿಧಿಗಳ ರಚನೆ ಮತ್ತು ನಿರ್ವಹಣೆ ಕಡ್ಡಾಯ. ಆಯಾ ಸಂಬಂಧಿತ ನಿಧಿಗಳಲ್ಲಿನ ಮೊತ್ತವನ್ನು ಆಯಾ ನಿರ್ದಿಷ್ಟ ಉದ್ದೇಶಕ್ಕೆ ಮಾತ್ರ ಬಳಸುವುದು. ಬ್ಯಾಂಕಿನ ದುಡಿಯುವ ಬಂಡವಾಳದ ಷೇರು, ಗ್ರಾಹಕರ ಠೇವಣಿ, ಬ್ಯಾಂಕಿನಿಂದ ಪಡೆದ ಸಾಲಗಳನ್ನು ಯಾವುದೇ ಕಾರಣಕ್ಕೂ ಚರ ಮತ್ತು ಸ್ಥಿರಾಸ್ತಿಗಳ ಖರೀದಿ ಮತ್ತು ಕಟ್ಟಡ ನಿರ್ಮಾಣಕ್ಕೆ ಬಳಸದೆ ಸಂಬಂಧಿಸಿದ ನಿಧಿಯಲ್ಲಿ ಲಭ್ಯವಿರುವ ಮೊತ್ತವನ್ನು ಉಪಯೋಗಿಸುವುದು. ಮೇಲಾಗಿ ಬ್ಯಾಂಕಿನ ಬೆಳ್ಳಿಹಬ್ಬ, ಸುವರ್ಣ ಮಹೋತ್ಸವ, ಅಮೃತ ಮಹೋತ್ಸವ, ಶತಮಾನೋತ್ಸವ ಇತರೆ ಆಚರಣೆಗಳಿಗೆ ಬೈಲಾದಲ್ಲಿ ಪ್ರತ್ಯೇಕ ನಿಧಿಗೆ ಲಾಭದಿಂದ ವರ್ಗಾಯಿಸಿ ಅದರಿಂದ ಖರ್ಚು ಮಾಡಬಹುದೇ ಹೊರತು ದಿನನಿತ್ಯದ ಬಂಡವಾಳಕ್ಕೆ ಕೈಹಾಕಬಾರದು. ಇದರಿಂದ ದಿನನಿತ್ಯದ ವಹಿವಾಟು ಹಾಗೂ ಠೇವಣಿದಾರರ ಹಿತಾಸಕ್ತಿಗೆ ಧಕ್ಕೆವುಂಟಾಗುತ್ತದೆ. ಈ ಬಗ್ಗೆ ಆಡಳಿತ ಮಂಡಳಿಯವರ ತೀರ್ಮಾನಗಳು ವಿವೇಚನಾಯುಕ್ತವಾಗಿರಬೇಕು.
- **ಆಡಳಿತ ಮಂಡಳಿ ಸಭೆ ಹಾಗೂ ಉಪಸಮಿತಿಗಳ ಸಭೆಗಳಲ್ಲಿ ನಿರ್ದೇಶಕರ ಸಕ್ರಿಯ ಭಾಗವಹಿಸುವಿಕೆ :** ಬ್ಯಾಂಕಿನ ಬೈಲಾ ಹಾಗೂ ರಿಸರ್ವ್ ಬ್ಯಾಂಕಿನ ಸುತ್ತೋಲೆ ಮತ್ತು ನಿರ್ದೇಶನಗಳ ರೀತ್ಯಾ ನಿಯತಕಾಲಿಕೆ ಪ್ರಕಾರ ಸಭೆಗಳನ್ನು ತಪ್ಪದೆ ನಡೆಸತಕ್ಕದ್ದು. ಸಭೆಯಲ್ಲಿ ಚರ್ಚಿಸಿ ತೆಗೆದುಕೊಳ್ಳಬೇಕಾದ ವಿಷಯಗಳು / ಕಾರ್ಯಸೂಚಿಗಳ ಬಗ್ಗೆ ಮುಖ್ಯನಿರ್ವಾಹಕನು ವಿಷಯವಾರು ಪೂರಕ ಟಿಪ್ಪಣಿಯನ್ನು ಸಾಕಷ್ಟು ಮುಂಚಿತವಾಗಿ ಕಳಿಸುವುದು. ಈ ಬಗ್ಗೆ ನಿರ್ದೇಶಕರು ಪೂರ್ವ ತಯಾರಿಯೊಂದಿಗೆ ಹಾಜರಾಗಿ, ವಿವರವಾಗಿ ಚರ್ಚಿಸಿ, ಬೈಲಾ ಕಾಯ್ದೆ, ನಿಯಮಗಳು ಹಾಗೂ ಬ್ಯಾಂಕಿನ ಸದಸ್ಯರು ಮತ್ತು ಠೇವಣಿದಾರರ ಹಿತವನ್ನು ಕಾಪಾಡುವುದರ ಮೂಲಕ ತೀರ್ಮಾನಗಳನ್ನು ಮಾಡುವುದು. ಯಾವುದೇ ಸ್ವಹಿತಾಸಕ್ತಿ ವಿಷಯಗಳು ಚರ್ಚೆಗೆ ಬಂದಾಗ ಸಂಬಂಧಿಸಿದ ನಿರ್ದೇಶಕರು ಭಾಗಿಯಾಗದೇ, ಕಾನೂನಾತ್ಮಕ ನಿರ್ಣಯಗಳು ಹೊರಹೊಮ್ಮಲು ಸಹಕರಿಸುವುದು ಸೂಕ್ತವಾಗಿದೆ. ನಿರ್ದೇಶಕರು ವೃತ್ತಿಪರ ಮತ್ತು ನೈಪುಣ್ಯತೆಯಿಂದ ಪಕ್ಕ ಬ್ಯಾಂಕುಗಳಾಗಿ ಅಧ್ಯಯನ ಮತ್ತು ಅನುಭವದಿಂದ ತಂಡವಾಗಿ ಕಾರ್ಯನಿರ್ವಹಿಸುವುದು ಇಂದಿನ ಸ್ಪರ್ಧಾತ್ಮಕ ಬ್ಯಾಂಕಿಂಗ್ ಕ್ಷೇತ್ರದ ಅಗತ್ಯವಾಗಿದೆ. ಪ್ರತಿಯೊಂದು ಉಪಸಮಿತಿಯ ನಿರ್ಣಯಗಳು.

ಆಡಳಿತ ಮಂಡಳಿಯಿಂದ ಅನುಮೋದನೆ ಸ್ಥಿರಿಕರಿಸಬೇಕು. ಆಡಳಿತ ಮಂಡಳಿಯಲ್ಲಿ ತೆಗೆದುಕೊಂಡ ತೀರ್ಮಾನಗಳು ಕಾಲಬದ್ಧವಾಗಿ ಜಾರಿಯಾಗಬೇಕು. ಇದನ್ನು ಮೇಲ್ವಿಚಾರಣೆ ಮತ್ತು ಪರಿಶೀಲಿಸುವ ಅಧಿಕಾರ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಆಡಳಿತ ಮಂಡಳಿಯಲ್ಲಿ ವೃತ್ತಿಪರ ನಿರ್ದೇಶಕರು ತಮ್ಮ ಜ್ಞಾನ ಮತ್ತು ಅನುಭವದಿಂದ ಯಾವುದೇ ಬೈಲಾ, ಕಾಯ್ದೆ, ನಿಯಮ ಹಾಗೂ ನಿರ್ದೇಶನಗಳು ಉಲ್ಲಂಘನೆಯಾಗದಂತೆ ಮಾರ್ಗದರ್ಶನ ಮತ್ತು ಸಲಹೆ ಮಂಡಿಸುವುದು. ಬ್ಯಾಂಕಿನ ಆಡಳಿತ ಮಂಡಳಿ ತೀರ್ಮಾನಗಳಿಂದ ನಷ್ಟಕ್ಕೆ ಕಾರಣವಾಗದಂತೆ ಎಚ್ಚರಿಕೆಯಿಂದ ವಿವೇಚನಾಯುಕ್ತವಾಗಿ ಕಾರ್ಯನಿರ್ವಹಿಸುವುದು ವೈಯಕ್ತಿಕ ಹಾಗೂ ಸಾಮೂಹಿಕ ಜವಾಬ್ದಾರಿಯಾಗಿದೆ.

- **ಗಣಕೀಕರಣ ಮತ್ತು ಮಾಹಿತಿ ತಂತ್ರಜ್ಞಾನ ಅಳವಡಿಸುವುದು:** ಬ್ಯಾಂಕ್ ಗ್ರಾಹಕರಿಗೆ ಶೀಘ್ರ ಮತ್ತು ನಿಖರ ಸೇವೆಯನ್ನು ನೀಡಲು ಬ್ಯಾಂಕಿನ ಲೆಕ್ಕಪುಸ್ತಕಗಳು ಮತ್ತು ವಹಿವಾಟು ಪೂರ್ಣ ಪ್ರಮಾಣದಲ್ಲಿ ಗಣಕೀಕರಣಕ್ಕೆ ಅಳವಡಿಸಿ ಅನುಷ್ಠಾನಗೊಳಿಸುವುದು ಇಂದಿನ ಅಗತ್ಯವಾಗಿದೆ. ಈ ಬಗ್ಗೆ ಆಡಳಿತ ಮಂಡಳಿ ಆದ್ಯತೆ ಮೇರೆಗೆ ಕ್ರಮವಹಿಸುವುದು. ಇದರಿಂದ ಸದೃಢ ವ್ಯವಸ್ಥಾಪನೆ ಹಾಗೂ ಅಭಿವೃದ್ಧಿಗೆ ನಾಂದಿಯಾಗುತ್ತದೆ.

- **ಲೆಕ್ಕಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ ಕ್ರಮಗಳು :** ಬ್ಯಾಂಕಿನ ಲೆಕ್ಕಪುಸ್ತಕಗಳು ಮತ್ತು ವಹಿವಾಟು ಚಟುವಟಿಕೆಗಳು ಆಂತರಿಕ ಲೆಕ್ಕಪರಿಶೋಧನೆ, ಪರಿವೀಕ್ಷಣೆ, ಲೆಕ್ಕಗಳ ಸಮನ್ವಯತೆ, ಇ–ಆಡಿಟ್, ಶಾಸನ ಬದ್ಧ ಲೆಕ್ಕಪರಿಶೋಧನೆ ನಿಗಧಿತ ಕಾಲಮಿತಿಯೊಳಗೆ ಮುಕ್ತಾಯಗೊಂಡು, ವಾರ್ಷಿಕ ಮಹಾಸಭೆಯಲ್ಲಿ ಚರ್ಚಿತವಾಗಿ ಅಂಗೀಕಾರವಾಗಬೇಕು ಹಾಗೂ ಆಡಿಟ್ ವರದಿ ಪ್ರಕಟಣೆಯಾಗಿ, ಭಾರತೀಯ ರಿಜರ್ವ್ ಬ್ಯಾಂಕ್‌ಗೆ ಸಲ್ಲಿಕೆಯಾಗಬೇಕು. ಬ್ಯಾಂಕಿನಲ್ಲಿ ಪ್ರತ್ಯೇಕ ಆಡಿಟ್ ಸಮಿತಿ ನೇಮಕಮಾಡುವುದಲ್ಲದೆ, ನಿಯತಕಾಲಿಕವಾಗಿ ಸಭೆ ನಡೆಸಿ, ಅದರಲ್ಲಿ ನಮೂದಿಸಿರುವ ನ್ಯೂನ್ಯತೆಗಳ ಬಗ್ಗೆ ಸ್ಪಷ್ಟ ಹಾಗೂ ನಿಖರ ಅನುಪಾಲನ ವರದಿಯನ್ನು ರಿಜರ್ವ್ ಬ್ಯಾಂಕ್ ಹಾಗೂ ಇಲಾಖೆಗಳಿಗೆ ಸಲ್ಲಿಸುವುದು. ಅನುಪಾಲನ ಕ್ರಮ ಅಸ್ಪಷ್ಟ ಹಾಗೂ ಹಾರಿಕೆ, ಉದಾಸಿನ ಉತ್ತರಗಳಿಂದ ಕೂಡಿರದಂತೆ ಕ್ರಮವಿಡುವುದು. ಇದರ ಜೊತೆಗೆ ಇದೇ ಸಮಿತಿಯಲ್ಲಿ ಆರ್.ಬಿ.ಐ. ಪರಿವೀಕ್ಷಣಾ ವರದಿಗೆ ಆಂತರಿಕ ಸಮವರ್ತಿ ಲೆಕ್ಕಪರಿಶೋಧನಾ ವರದಿ ವಿಮರ್ಶೆ, ಸಹಕಾರ ಕಾಯ್ದೆ ಕಲಂ 64ರಡಿ ವಿಚಾರಣಾ ವರದಿ, 65 ರಡಿ ಪರಿವೀಕ್ಷಣಾ ವರದಿಗಳಲ್ಲಿನ ನ್ಯೂನ್ಯತೆಗಳ ಬಗ್ಗೆ ಸಮಂಜಸ ಹಾಗೂ ಸೂಕ್ತ ಅನುಪಾಲನ ವರದಿ ಸಲ್ಲಿಸುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ.
- ಸಹಕಾರ ಕಾಯ್ದೆ, ನಿಯಮ ಹಾಗೂ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಡಿಯಲ್ಲಿ ನಿರ್ವಹಿಸಬೇಕಾದ ಶಾಸನ ಬದ್ಧ ಕರ್ತವ್ಯ ಮತ್ತು ಜವಾಬ್ದಾರಿಗಳು.
- ಬ್ಯಾಂಕಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಪ್ರತಿ ವರ್ಷ ಸೆಪ್ಟೆಂಬರ್ 25ರೊಳಗಾಗಿ ಕಡ್ಡಾಯವಾಗಿ ನಡೆಸುವುದು.
- ಬ್ಯಾಂಕ್‌ಗಳು ಜೂನ್ 30ರೊಳಗೆ ಶಾಸನ ಬದ್ಧ ಲೆಕ್ಕಪರಿಶೋಧನೆ ವರದಿಯನ್ನು ಅಂಗೀಕರಿಸಿ, ಹಣಕಾಸು ತಃಖ್ತೆಗಳನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿ, ರಿಜರ್ವ್ ಬ್ಯಾಂಕ್‌ಗೆ ಸಲ್ಲಿಸುವುದು ಕಡ್ಡಾಯವಾಗಿದೆ.
- ಬ್ಯಾಂಕಿನ ಆಡಳಿತ ಮಂಡಳಿ ಅವಧಿ ಮುಕ್ತಾಯದ ಆರು ತಿಂಗಳು ಪೂರ್ವದಲ್ಲಿ ಹೊಸ ಆಡಳಿತ ಮಂಡಳಿಗೆ ಚುನಾವಣೆಗೆ ಪೂರ್ವ ಸಿದ್ದತೆ ನಡೆಸುವುದು.
- ಸಹಕಾರ ಕಾಯ್ದೆ ಕಲಂ 27ಬಿ ರೀತ್ಯಾ ಸೆಪ್ಟೆಂಬರ್ 30ರೊಳಗೆ ಏಳು ತಃಖ್ತೆಗಳನ್ನು ಕಡ್ಡಾಯವಾಗಿ ಬ್ಯಾಂಕುಗಳು ನಿಬಂಧಕರಿಗೆ ಸಲ್ಲಿಸುವುದು.
- ಬ್ಯಾಂಕ್‌ಗಳು ನಗದು ಮೀಸಲು ಅನುಪಾತ C.R.R ಮತ್ತು S.L.R ದ್ರವ್ಯಾಸ್ತಿ ನಿರ್ವಹಣೆಯನ್ನು ಕೊರತೆಯಾಗದಂತೆ ನಿರ್ವಹಿಸುವುದನ್ನು ಆಡಳಿತ ಮಂಡಳಿ ನಿಗಾವಹಿಸುವುದು.
- ಆದ್ಯತಾ ವಲಯ ಮತ್ತು ದುರ್ಬಲ ವರ್ಗದವರಿಗೆ ಸಾಲ ಹಂಚಿಕೆಯಲ್ಲಿ ಗುರಿ ಸಾಧಿಸುವುದು.
- ಬ್ಯಾಂಕಿನಲ್ಲಿ ಸಂಭವಿಸಿರುವ ಹಣ ದುರುಪಯೋಗ, ಮೋಸ, ವಂಚನೆ ಮತ್ತು ಅವ್ಯವಹಾರಗಳ ಬಗ್ಗೆ ರಿಸರ್ವ್ ಬ್ಯಾಂಕಿಗೆ ತಕ್ಷಣ ವರದಿ ಸಲ್ಲಿಸುವುದು ಮತ್ತು ಅಂತಹ ಪ್ರಕರಣಗಳ ಮೇಲೆ ಸಿವಿಲ್, ಕ್ರಿಮಿನಲ್ ಹಾಗೂ ಶಿಸ್ತು ಕ್ರಮ ಜರುಗಿಸಿ, ವರದಿ ಮಾಡುವುದು ವಿಚಕ್ಷಣಾದಳ (Vigilence Committee) ರಚನೆ ಮಾಡುವುದು.
- ಸಾಲ ವಸೂಲಾತಿಗೆ ಕಾನೂನು ಮತ್ತು ಕಾನೂನುಯೇತರ (Legal & Non-legal) ಕ್ರಮ ಜರುಗಿಸಲು ಸಿಬ್ಬಂದಿಗೆ ಸೂಕ್ತ ಸೂಚನೆ ಮತ್ತು ಮಾರ್ಗದರ್ಶನ ನೀಡುವುದಲ್ಲದೆ, ಹಿಂಬಾಲಿಕೆ ಕ್ರಮ ಜರುಗಿಸುವುದು. ಇದರಿಂದ ಸುಸ್ತಿ ಸಾಲದ ಪ್ರಮಾಣ ಕಡಿಮೆಮಾಡುವುದಲ್ಲದೆ ಅನುತ್ಪಾದಕ ಆಸ್ತಿ (N.P.A)ಯನ್ನು ನಿಯಂತ್ರಿಸುವುದು ಆಡಳಿತ ಮಂಡಳಿ ಕರ್ತವ್ಯವಾಗಿದೆ.
- ಬ್ಯಾಂಕಿನ ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿ ಆದಾಯ ಗುರುತಿಸುವುದು ಹಾಗೂ ಆಸ್ತಿ ವರ್ಗೀಕರಣ (IRAC) ಮತ್ತು ಅನುತ್ಪಾದಕ ಆಸ್ತಿ ಪ್ರಮಾಣಕ್ಕೆ ಅನುಗುಣವಾಗಿ ಲಾಭದಲ್ಲಿ ಅವಕಾಶ ಕಲ್ಪಿಸುವುದು ಆಡಳಿತ ಮಂಡಳಿಯ ಆದ್ಯ ಕರ್ತವ್ಯವಾಗಿದೆ.
- ಆಡಳಿತ ಮಂಡಳಿ ಪ್ರತಿ ಮಾಹೆಯ ಸಭೆಯಲ್ಲಿ ಅಭಿವೃದ್ಧಿ ಕ್ರಿಯಾ ಯೋಜನೆ (Development Action Plan) ಪ್ರಗತಿ ವಿಮರ್ಶೆ, ಸಿಬ್ಬಂದಿಗಳ ಕರ್ತವ್ಯಲೋಪ, ಕರ್ತವ್ಯ ಚ್ಯುತಿ, ನಿರ್ಲಕ್ಷತೆ ಬಗ್ಗೆ ಶಿಸ್ತು ಕ್ರಮ ಜರುಗಿಸುವುದು.
- ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ರೀತ್ಯಾ ಆಡಳಿತ ಮಂಡಳಿ ನಿರ್ದೇಶಕರು ಮಾಡುವ ಮತ್ತು ಮಾಡದಿರುವ (Dos & Don'ts)ಗಳ ಬಗ್ಗೆ ಗಮನವಹಿಸಿ ಅನುಪಾಲನೆ ಮಾಡುವುದು ಸಮಂಜಸ ಹಾಗೂ ಸೂಕ್ತ್ಮವಾಗಿದೆ.
- ಬ್ಯಾಂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು ಹಾಗೂ ಅವರ ವಿರುದ್ಧ ಅವಿಶ್ವಾಸ ತಂದು ಅಧಿಕಾರದಿಂದ ಕೆಳಗಿಳಿಸುವ ಅಧಿಕಾರ ಆಡಳಿತ ಮಂಡಳಿ ಕಾಯ್ದೆ ರೀತ್ಯಾ ದತ್ತವಾಗಿರುತ್ತದೆ.

ಕರ್ನಾಟಕ ಸರ್ಕಾರ

ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, "ಎ" ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027.
Email: coea-coop@karnataka.gov.in | Website: coea.karnataka.gov.in | Ph: 080-2220066/29709014

ಸಂಖ್ಯೆ: ಸಚುಪ್ರಾ/ಆಡಳಿತ/ಚು.ಸಂ./29/2021–22 ದಿನಾಂಕ: 18.12.2021

ವಿಷಯ : **ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿಗಳು, ಪರಿಶೀಲನಾಧಿಕಾರಿಗಳು ಮತ್ತು ಇತರೆ ಚುನಾವಣಾ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ.**

ಉಲ್ಲೇಖ : **1) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಆರ್ ಎಸ್.ಆರ್/ಚು.ಸಂಭಾವನೆ/ 187/2009–10 ದಿನಾಂಕ 20.01.2010.**
2) ಈ ಕಛೇರಿಯ ಆದೇಶ ಸಂಖ್ಯೆ: ಸಚುಆ/ಚುನಾವಣೆ ಸಂಭಾವನೆ/11/2013–14 ದಿನಾಂಕ 25.07.2013.
3) ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ/56/ಇಯುಬಿ/ 2018 ಬೆಂಗಳೂರು, ದಿನಾಂಕ 06.08.2018.

ಪ್ರಸ್ತಾವನೆ :

ಸಹಕಾರ ಸಂಘಗಳಿಗೆ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ ನಡೆಯುವ ಚುನಾವಣೆ ಮತ್ತು ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಸದರಿ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಮತಗಟ್ಟೆ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿ / ನೌಕರರಿಗೆ ಉಲ್ಲೇಖ(1)ರಂತೆ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಪಾವತಿಸಬೇಕಾದ ಸಂಭಾವನೆ, ಪ್ರವಾಸ ಭತ್ಯೆ ಹಾಗೂ ದಿನಭತ್ಯೆ ಕುರಿತಂತೆ ಸುತ್ತೋಲೆಯನ್ನು ಹೊರಡಿಸಿದ್ದು ಸರಿಯಷ್ಟೆ. ನಂತರ, ದಿನಾಂಕ 18.03.2013 ರಲ್ಲಿ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗವು ಅಸ್ತಿತ್ವಕ್ಕೆ ಬಂದಿದ್ದು, ಉಲ್ಲೇಖ(2)ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ 2012ರಲ್ಲಿ ಮಾಡಲಾದ ತಿದ್ದುಪಡಿಯನ್ವಯ ಪ್ರಕರಣ 39ಎ ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ರ ರೀತ್ಯಾ ಸಹಕಾರ ಸಂಘಗಳಿಗೆ / ಸೌಹಾರ್ದ ಸಹಕಾರಿಗಳಿಗೆ ನಡೆಯುವ ಆಡಳಿತ ಮಂಡಲಿ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಹಾಗೂ ನಿರ್ದೇಶನದನ್ವಯ ನಡೆಸುವುದರಿಂದ ಮತದಾರರ ಪಟ್ಟಿ ಸಿದ್ಧಪಡಿಸುವಿಕೆ. ಪ್ರವಾಸ ಮತ್ತು ಇತರೆ ಭತ್ಯೆಗಳು, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಅಧ್ಯಕ್ಷಾಧಿಕಾರಿ ಮತ್ತು ಇನ್ನಿತರ ಮತಗಟ್ಟೆ ಸಿಬ್ಬಂದಿಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹಕಾರ ಚುನಾವಣಾ ಆಯೋಗವು ಗೊತ್ತುಪಡಿಸಿ ದಿನಾಂಕ 25.07.2013ರಲ್ಲಿ ಆದೇಶವನ್ನು ಹೊರಡಿಸಿರುತ್ತದೆ. ಕೇಂದ್ರ ಚುನಾವಣಾ ಆಯೋಗವು 2018ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾವಣಾ ಕರ್ತವ್ಯ ನಿರ್ವಹಿಸುವ ಅಧಿಕಾರಿ/ ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(3)ರಲ್ಲಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ರಾಜ್ಯದಲ್ಲಿ ಜರುಗಲಿರುವ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಚುನಾವಣಾ ಕರ್ತವ್ಯಕ್ಕೆ ನೇಮಿಸಲ್ಪಡುವ ವಿವಿಧ ಹಂತಗಳ ಅಧಿಕಾರಿ/ಸಿಬ್ಬಂದಿಗಳಿಗೆ ನೀಡುವ ಸಂಭಾವನೆಯನ್ನು ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ. ಅದರಂತೆ, ಪ್ರಾಧಿಕಾರದಿಂದ ಉಲ್ಲೇಖ(2)ರ ಚುನಾವಣಾ ಸಂಭಾವನೆಯ ಆದೇಶವನ್ನು ಹೊರಡಿಸಿ ಈಗಾಗಲೇ 8 ವರ್ಷಗಳು ಗತಿಸಿರುವುದರಿಂದ, ಇತ್ತೀಚಿನ ಜೀವನಾವಶ್ಯಕ ಅಗತ್ಯ ವಸ್ತುಗಳು / ಗ್ರಾಹಕ ವಸ್ತುಗಳು / ಪ್ರಯಾಣದರ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ / ಮತಗಟ್ಟೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಈ ಕಛೇರಿಯ ಆದೇಶದಂತೆ ನೀಡುತ್ತಿರುವ ಸಂಭಾವನೆಯನ್ನು ಪರಿಷ್ಕರಿಸುವ ಅವಶ್ಯಕತೆ ಇದೆ ಎಂಬುದನ್ನು ಮನಗಂಡು, ಸಂಭಾವನೆಯನ್ನು ಪರಿಷ್ಕರಿಸುವ ಕುರಿತು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಬಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 14ಎಎ ರೀತ್ಯಾ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಡಾ: ಎನ್.ಎಸ್. ಚನ್ನಪ್ಪಗೌಡ, ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಆದ ನಾನು, ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ / ಪದಾಧಿಕಾರಿಗಳ ಚುನಾವಣೆಗಳ ಸಂಬಂಧ ನೇಮಕವಾಗುವ ರಿಟರ್ನಿಂಗ್ ಅಧಿಕಾರಿ / ಸಹಾಯಕ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳಿಗೆ / ಪರಿಶೀಲನಾಧಿಕಾರಿಗೆ ನೀಡಬೇಕಾದ ಸಂಭಾವನೆಯನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶಿಸಿರುತ್ತೇನೆ. ಈ ಆದೇಶವು ಕೂಡಲೇ ಜಾರಿಗೆ ಬಂದಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

(ಅ). ಆಡಳಿತ ಮಂಡಲಿ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯ ಪರಿಷ್ಕೃತ ಚುನಾವಣಾ ಸಂಭಾವನೆ. (ರೂ.ಗಳಲ್ಲಿ)

ಕ್ರ. ಸಂ.	ವರ್ಗ	ಸಂಘದಲ್ಲಿನ ಅರ್ಹ ಬಿಡಿ ಸದಸ್ಯರ ಸಂಖ್ಯೆ	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ	ಅಧ್ಯಕ್ಷಾಧಿಕಾರಿ	ಮತಗಟ್ಟೆ ಅಧಿಕಾರಿ/ ಸಿಬ್ಬಂದಿ	ಸಹಾಯಕ 'ಡಿ' ಗ್ರೂಪ್
1	2	3	4	5	6	7	8
1	ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	1000ಕ್ಕಿಂತ ಕಡಿಮೆ	1500	900	850	750	500
		1000 ರಿಂದ 2500ರವರೆಗೆ	2000	1000	850	750	500
		2500 ರಿಂದ 5000ರವರೆಗೆ	2500	1500	850	750	500
		5000 ಹಾಗೂ ಮೇಲ್ಪಟ್ಟು	3000	2000	850	750	600
2	ಮಾಧ್ಯಮಿಕ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು	3000 ಕ್ಕಿಂತ ಕಡಿಮೆ	3500	2500	1500	1000	750
		3000ಕ್ಕೆ ಮೇಲ್ಪಟ್ಟು	4000	3000	1500	1000	750
3	ಫೆಡರಲ್ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು	–	4500	3000	2000	1500	750

4	ಅಪೆಕ್ಸ್ ಸಹಕಾರ ಸಂಘಗಳು/ಸೌಹಾರ್ದ ಸಹಕಾರಿಗಳು	–	5000	5000	2000	1500	750

ಮೇಲ್ಕಂಡ ಕೋಷ್ಟಕದಲ್ಲಿ ನಮೂದಿಸಿರುವ ಸಂಭಾವನೆಯು ಒಂದು ಸಹಕಾರ ಸಂಘ/ ಸೌಹಾರ್ದ ಸಹಕಾರಿಯ ಪೂರ್ಣ ಚುನಾವಣೆ ಪ್ರಕ್ರಿಯೆಯನ್ನು ಕೈಗೊಳ್ಳಲು ನಿಗದಿಪಡಿಸಿರುವ ಒಟ್ಟು (ಇಡಿಗಂಟು) ಮೊತ್ತವಾಗಿರುತ್ತದೆ.

(ಆ) ಮುಂದುವರೆದು, ಚುನಾವಣೆ ಪ್ರಕ್ರಿಯೆಯಲ್ಲಿ ಮತದಾನದ ನಂತರ ನಡೆಯುವ ಮತ ಎಣಿಕೆ ಕಾರ್ಯಕ್ಕೆ ನಿಯೋಜಿಸಲ್ಪಡುವ ಚುನಾವಣಾ ಸಿಬ್ಬಂದಿಗಳು ಹಾಗೂ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ಈ ಕೆಳಕಂಡಂತೆ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ. (ರೂ.ಗಳಲ್ಲಿ)

ಕ್ರಮ ಸಂಖ್ಯೆ	ವರ್ಗ	ರಿಟರ್ನಿಂಗ್ ಅಧಿಕಾರಿ	ಸಹಾಯಕ ರಿಟರ್ನಿಂಗ್ ಅಧಿಕಾರಿ	ಮತ ಎಣಿಕೆ ಅಧಿಕಾರಿ/ ಸಿಬ್ಬಂದಿ	ಸಹಾಯಕ 'ಡಿ' ಗ್ರೂಪ್
1	2	3	4	5	6
1	ಪ್ರಾಥಮಿಕ/ಮಾಧ್ಯಮಿಕ/ ಫೆಡರಲ್/ ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	1000	600	500	300

1) ಅಲ್ಲದೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಇತರೆ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳು ಕೆ.ಸಿ.ಎಸ್.ಆರ್. ರೀತ್ಯಾ ಪ್ರವಾಸಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
2) ಆದರೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ ರವರುಗಳು ಚುನಾವಣಾ ವೇಳಾ ಪಟ್ಟಿಯ ನಿಗದಿಪಡಿಸಿರುವ ಕಾರ್ಯಗಳನ್ನು ಕೈಗೊಳ್ಳಲು ಮಾತ್ರ ಚುನಾವಣಾ ವೇಳಾ ಪಟ್ಟಿಯಲ್ಲಿನ ಅವಧಿಗೆ ಸೀಮಿತವಾಗಿ ಕೆ.ಸಿಎಸ್.ಆರ್. ರೀತ್ಯಾ ಪ್ರವಾಸ ಭತ್ಯೆ ಮತ್ತು ದಿನ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
3) ಇತರೆ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳು ಚುನಾವಣೆ ನಡೆಯುವ ದಿನಕ್ಕೆ ಮಾತ್ರ ಕೆ.ಸಿ.ಎಸ್.ಆರ್. ರೀತ್ಯಾ ಪ್ರವಾಸ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4) ಚುನಾವಣಾ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ, ಪ್ರವಾಸ ಭತ್ಯೆ ಹಾಗೂ ದಿನಭತ್ಯೆಯನ್ನು ಸಂಬಂಧಿಸಿದ ಸಹಕಾರ ಸಂಘ/ ಸೌಹಾರ್ದ ಸಹಕಾರಿಯು ಭರಿಸತಕ್ಕದಾಗಿದೆ.
5) ಪರಿಷ್ಕರಿಸಿರುವ ದರದಂತೆ ಪಡೆಯುವ ಸಂಭಾವನೆ/ ಪ್ರವಾಸ ಭತ್ಯೆ/ ದಿನಭತ್ಯೆಯನ್ನು ಹೊರತುಪಡಿಸಿ ಇನ್ನಾವುದೇ ರೂಪದಲ್ಲಿ ಸಂಭಾವನೆಯನ್ನು ಸಹಕಾರ ಸಂಘ/ ಸೌಹಾರ್ದ ಸಹಕಾರಿಗಳಿಂದ ಪಡೆಯುವಂತಿಲ್ಲ.
6) ರಿಟರ್ನಿಂಗ್ ಅಧಿಕಾರಿರವರು ಮತದಾನದ ಹಕ್ಕನ್ನು ಹೊಂದಿರುವ ಸುಮಾರು 500 ಅರ್ಹ ಸದಸ್ಯರಿಗೆ ಅನ್ವಯವಾಗುವಂತೆ ಒಂದು ಮತಗಟ್ಟೆರಂತೆ ಮತಗಟ್ಟೆಗಳನ್ನು ಸಿದ್ಧಪಡಿಸುವುದು.

(ಇ) ಆಕಸ್ಮಿಕವಾಗಿ ತೆರವಾಗುವ ಪದಾಧಿಕಾರಿಗಳ ಸ್ಥಾನಗಳಿಗೆ ನಡೆಯುವ ಪದಾಧಿಕಾರಿಗಳ ಚುನಾವಣೆಯ ಸಂಬಂಧ ರಿಟರ್ನಿಂಗ್ ಅಧಿಕಾರಿ ಈ ಕೆಳಕಂಡಂತೆ ಸಂಭಾವನೆಯನ್ನು ಪಡೆಯಲು ಅರ್ಹರಿರುತ್ತಾರೆ. (ರೂ.ಗಳಲ್ಲಿ)

ಕ್ರಮ ಸಂಖ್ಯೆ	ವರ್ಗ	ಪದಾಧಿಕಾರಿಗಳ ಚುನಾವಣೆ ಸಂಬಂಧ ರಿಟರ್ನಿಂಗ್ ಅಧಿಕಾರಿಯ ಸಂಭಾವನೆ
1	2	3
1	ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	1000
2	ಮಾಧ್ಯಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	1500
3	ಫೆಡರಲ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	2000
4	ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	2500

ಮೇಲ್ಕಂಡಂತೆ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿ/ ಚುನಾವಣಾ ಕಾರ್ಯನಿರತ ಸಿಬ್ಬಂದಿಗಳಿಗೆ ನಿಗದಿಪಡಿಸಿರುವ ಸಂಭಾವನೆ / ಭತ್ಯೆಗಳನ್ನು ಹೊರೆತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ನಗದು ಮೊತ್ತವನ್ನು ಪಾವತಿಸಿದಲ್ಲಿ ಸದರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು. ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿರವರು ನಿಗದಿಪಡಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಕ್ಲೇಂ ಮಾಡಿದ್ದಲ್ಲಿ, ಸದರಿ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಂಡಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕ್ರಮವನ್ನು ಅನುಮೋದಿಸುವ ಆಡಳಿತ ಮಂಡಳಿಯು ಸಹ ನೇರವಾಗಿ ಹೊಣೆಗಾರರಾಗುತ್ತಾರೆ.

(ಈ) ಪ್ರಾಥಮಿಕ, ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘ/ ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ / ಭರ್ತಿ ಮಾಡಿರುವ ಡೆಲಿಗೇಟ್ ನಮೂನೆಗಳ ಪರಿಶೀಲನೆಗೆ ಪರಿಶೀಲನಾಧಿಕಾರಿಯಾಗಿ ನೇಮಕ ಮಾಡಲ್ಪಡುವ ಅಧಿಕಾರಿ/ ಸಿಬ್ಬಂದಿ ಈ ಕೆಳಕಂಡಂತೆ ಸಂಭಾವನೆಯನ್ನು ಒಟ್ಟು (ಇಡಿಗಂಟು) ಮೊತ್ತವಾಗಿ ಪಡೆಯಲು ಅರ್ಹರಿರುತ್ತಾರೆ. (ರೂ.ಗಳಲ್ಲಿ)

ಕ್ರಮ ಸಂಖ್ಯೆ	ವರ್ಗ	ಸಂಘದ / ಸಹಕಾರಿಯ ಸದಸ್ಯರ ಸಂಖ್ಯೆ	ಸಂಭಾವನೆ
1	ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	1000 ಕ್ಕಿಂತ ಕಡಿಮೆ	1000
		1000 ರಿಂದ 4000 ರವರೆಗೆ	2500
		4000 ಕ್ಕಿಂತ ಮೇಲ್ಪಟ್ಟು	3000

2	ಮಾಧ್ಯಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	3500
3	ಫೆಡರಲ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	4000
4	ಅಪೆಕ್ಸ್ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು	4500

ಪರಿಶೀಲನಾಧಿಕಾರಿಯ ಸಂಭಾವನೆಯನ್ನು ಹೊರತುಪಡಿಸಿ ಇನ್ನಿತರರಿಗೆ ಯಾವುದೇ ಸಂಭಾವನೆಯನ್ನು ನೀಡಲು ಅವಕಾಶವಿರುವುದಿಲ್ಲ. ಒಂದು ಪಕ್ಷ ಚುನಾವಣಾಧಿಕಾರಿಗೆ ಒಂದಕ್ಕಿಂತ ಹೆಚ್ಚು ಪರಿಶೀಲನಾಧಿಕಾರಿಗಳನ್ನು ನೇಮಕ ಮಾಡುವ ಅಗತ್ಯತೆ ಇದ್ದಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆದು ನೇಮಕ ಮಾಡುವುದು. ಸಹಕಾರ ಚುನಾವಣಾ ಪ್ರಾಧಿಕಾರದಿಂದ ಜರುಗಲಿರುವ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/8/2014 ದಿನಾಂಕ : 18.03.2014ರಲ್ಲಿ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜಿಸುವ ಪೊಲೀಸ್ ಸಿಬ್ಬಂದಿ / ಅಧಿಕಾರಿಗಳಿಗೆ ಶುಲ್ಕವನ್ನು ಪಾವತಿಸುವ ಸಂಬಂಧ ಸರ್ಕಾರಿ ಆದೇಶ ಸಂಖ್ಯೆ: ಹೆಚ್.ಡಿ/136/ಇ.ಎಫ್.ಎಸ್/2010 ಬೆಂಗಳೂರು, ದಿನಾಂಕ 21.08.2012ರಲ್ಲಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಮತ್ತು, ಸರ್ಕಾರದ ಆದೇಶ ಸಂಖ್ಯೆ : ಹೆಚ್.ಡಿ/210/ಎಸ್.ಎಸ್.ಟಿ/2016, ಬೆಂಗಳೂರು, ದಿನಾಂಕ 04.03.2014 ಗಳಲ್ಲಿ ತಿಳಿಸಲಾಗಿರುವಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣಾ ಕರ್ತವ್ಯಕ್ಕಾಗಿ ನಿಯೋಜನೆಗೊಳ್ಳುವ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಶುಲ್ಕವನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಅದರಂತೆಯೇ ಚುನಾವಣಾ ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಶುಲ್ಕವನ್ನು ಪಾವತಿಸತಕ್ಕದ್ದು. ಮುಂದುವರೆದು, ಸಹಕಾರ ಚುನಾವಣಾ ಕೈಪಿಡಿ–2016ರಲ್ಲಿ ತಿಳಿಸಲಾಗಿರುವ ಲೇಖನ ಸಾಮಗ್ರಿ, ಅಂಚೆವೆಚ್ಚ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆ ಬಾಡಿಗೆ, ಅಳಿಸಲಾಗದ ಶಾಯಿ ಇನ್ನು ಮುಂತಾದ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸುವುದು ಮತ್ತು ಖರ್ಚು–ವೆಚ್ಚಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ–14ಎಎ ರೀತ್ಯಾ ಆಯಾಯ ಸಂಘಗಳೇ ಭರಿಸತಕ್ಕದ್ದಾಗಿದೆ. ಈ ಆದೇಶದ ಮೂಲಕ ಪರಿಷ್ಕೃತಗೊಳಿಸಿರುವ ಚುನಾವಣಾ ಸಂಭಾವನೆ ದರವು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಸಹಿ/–
ಡಾ. ಎನ್.ಎಸ್. ಚನ್ನಪ್ಪಗೌಡ
ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52

ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/158/2024–25 ದಿನಾಂಕ: 04–01–2025

ವಿಷಯ : **ಸಹಕಾರ ಸಂಘಗಳ/ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ, ಮತಗಟ್ಟೆ ಅಧಿಕಾರಿ, ಪರಿಶೀಲನಾಧಿಕಾರಿಗಳು ಮತ್ತು ಇತರೆ ಚುನಾವಣಾ ಸಿಬ್ಬಂದಿಗಳಿಗೆ ನೀಡುವ ಸಂಭಾವನೆ ಕುರಿತು.**

ಉಲ್ಲೇಖ:
1) **ಈ ಕಛೇರಿಯ ಸುತ್ತೋಲೆ ಸಂಖ್ಯೆ: ಆರ್‌ಎಸ್‌ಆರ್/ಚು.ಸಂಭಾವನೆ/187/2009–10, ದಿನಾಂಕ: 20.01.2010.**
2) **ಆಯುಕ್ತರು, ಸಹಕಾರ ಚುನಾವಣಾ ಆಯೋಗ, ಬೆಂಗಳೂರು ಇವರ ಆದೇಶ ಸಂ. ಸಚುಆ/ಚುನಾವಣೆ ಸಂಭಾವನೆ/11/2013–14, ದಿನಾಂಕ: 25–07–2013.**
3) **ರಾಜ್ಯ ಚುನಾವಣಾ ಆಯೋಗದ ಆದೇಶ ಸಂ.ರಾಚುಆ/56/ಇಯುಬಿ/2018, ಬೆಂಗಳೂರು, ದಿನಾಂಕ: 06.08.2018.**
4) **ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂ. ಸಚುಪ್ರಾ/ಆಡಳಿತ/ಚು.ಸಂ./29/2021–22, ದಿನಾಂಕ: 18–12–2021.**

ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ /ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ಸದರಿ ಚುನಾವಣೆಗಳಲ್ಲಿ ರಿಟರ್ನಿಂಗ್ ಅಧಿಕಾರಿ/ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಮತಗಟ್ಟೆ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿ / ನೌಕರರಿಗೆ ಹಾಗೂ ಪರಿಶೀಲನಾಧಿಕಾರಿಗೆ ನೀಡಬೇಕಾದ ಸಂಭಾವನೆಯನ್ನು ಹಾಗೂ ಇತರೆ ಚುನಾವಣಾ ವೆಚ್ಚವನ್ನು ಪರಿಷ್ಕರಿಸಿ ಉಲ್ಲೇಖ(4) ರಲ್ಲಿ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರು ಆದೇಶ ಹೊರಡಿಸಿರುತ್ತಾರೆ.

ಮುಂದುವರೆದು, ಉಲ್ಲೇಖ(4) ರಂತೆ ಚುನಾವಣಾ ಸಂಭಾವನೆಯನ್ನು ಪರಿಷ್ಕರಿಸಿ ನಿಗಧಿಪಡಿಸಿ ಹೊರಡಿಸಿರುವ ಆದೇಶವನ್ನು ಉಲ್ಲಂಘಿಸಿ ಹೆಚ್ಚಿನ ಸಂಭಾವನೆಯನ್ನು ಪಡೆಯುತ್ತಿರುವುದಾಗಿ ಹಲವಾರು ಸಹಕಾರ ಸಂಘಗಳ ಆಡಳಿತ ಮಂಡಳಿಯವರು/ ಜನಪ್ರತಿನಿಧಿಗಳು ಇಲಾಖೆಗೆ ದೂರನ್ನು ನೀಡಿರುತ್ತಾರೆ. ಈ ರೀತಿ ಆದೇಶವನ್ನು ಮೀರಿ ಚುನಾವಣಾ ಸಂಭಾವನೆಯನ್ನು ಪಡೆಯುತ್ತಿರುವುದು ಸದರಿ ಆದೇಶದ ಉಲ್ಲಂಘನೆಯಾಗುವುದಲ್ಲದೆ, ಹಣ ದುರುಪಯೋಗ ಮಾಡಿದಂತಾಗುತ್ತದೆ.

ಆದ್ದರಿಂದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಗಳಿಗೆ / ಪದಾಧಿಕಾರಿಗಳ ಆಯ್ಕೆಗಳಿಗಾಗಿ ನಡೆಯುವ ಚುನಾವಣೆಗಳಿಗೆ ಸಂಬಂಧಿಸಿದಂತೆ ನೇಮಕಗೊಂಡ ಅಧಿಕಾರಿ/ಸಿಬಂದಿಗಳು ಸಹಕಾರ ಚುನಾವಣಾ ಪ್ರಾಧಿಕಾರದ ಉಲ್ಲೇಖ(4)ರ ಆದೇಶದಲ್ಲಿ ಚುನಾವಣಾ ಸಂಭಾವನೆಯನ್ನು ನಿಗಧಿಪಡಿಸಿರುವ ಮೊತ್ತವನ್ನು ಪಡೆಯತಕ್ಕದ್ದು. ಆದೇಶ ಮೀರಿ ಹೆಚ್ಚಿನ ಸಂಭಾವನೆಯನ್ನು ಪಡೆದಲ್ಲಿ ಅಂತಹ ಮೊತ್ತವನ್ನು ಹಣ ದುರುಪಯೋಗವೆಂದು ಪರಿಗಣಿಸಿ ವಸೂಲಾತಿಗೆ ಕ್ರಮವಿಡುವುದಲ್ಲದೆ, ಸದರಿ ಕರ್ತವ್ಯಲೋಪವೆಸಗಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಯತಕ್ಕದ್ದು.

ಸಹಿ/–
ಟಿ.ಹೆಚ್.ಎಂ. ಕುಮಾರ್. ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು

SREE SUBRAMANYESWARA CO-OPERATIVE BANK LIMITED

Estd : 1971 (R.B.I. Licence No.UBD KA 550 P)
H.O. & A.O., "Rajatha Bhavana" No.106, R.V.Road, V.V.Puram, Bangalore-560 004
e-mail: sscbank@yahoo.com, website: www.subcobank.com, PH:080-22422464/1/3

Celebrated Golden Jubilee in 2024

BRANCHES		
1.	V.V.PURAM BRANCH B-04.	Ph: 26622462, 22422461/63
2.	AVENUE ROAD (K G Road) BRANCH B-09	Ph: 22262722, 22281261, 22260043
3.	VIJAYANAGAR BRANCH B-40,	Ph: 23400993, 23206878, 23147896
4.	SUBRAMANYANAGAR BRANCH B-21,	Ph: 23321252, 23426677, 23322570
5.	PADMANABHANAGAR BRANCH, B-85	Ph: 26694660, 26797274
6.	KACHARAKANAHALLI BRANCH, B-84	Ph: 25490999, 25487147
7.	YESHWANTHAPURA BRANCH, B-54	Ph: 23378136 / 37
8.	NAGARABHAVI BRANCH, B-72	Ph: 23183787 / 88
9.	KONANKUNTE BRANCH, B-62	Ph: 26320086 / 87

FINANCIAL HIGHLIGHTS AS ON 31-03-2025	
Number of Members	33884
Own Funds	Rs. 92.74 Crores
Total Business	Rs. 629.30 Crores
Deposits	Rs. **379.03 Crores**
Advances	Rs. **250.27 Crores**
Credit Facilities	Max. Rs. 5.00 Crores per Individual
Net profit after tax	Rs. 1.23 Crores
Capital Adequacy	22.26%
Net NPA	0.35 %

INTEREST RATES w.e.f. 01-05-2025

DEPOSITS			LOANS	p.a. *
PERIOD	GENERAL	Sr. Citizen*	Personal Loans	12% & 17%
			Housing Loans site purchase	9.25% & 9.90% 12.00%
30 days to 180 days	5.50%	5.50%	Vehicle Loans	11.00% to 12.00%
181 days to 365 days	6.50%	6.50%	Gold Loan (22 carat)	9.25%
Above 1 year and upto 2 years	8.00%	8.50%	S.S.I. Loans (SME Loan)	11.00%
			Business	11.00%
Above 2 year and upto 3 years	7.40%	7.90%	Self-Employment	10.50%
			Education	11.50%
above 3 years	7.15%	7.65%	Mortgage Loan	12.00% to 13.00%
Savings Bank A/c	2.50% on daily balance		Loan on LIC/NSC/KVP	10.00%
* Senior Citizen (person completed 60 years in age)			MMP Loans	13.00%

Celebrated Golden Jubilee in 2024

SALIENT FEATURES:

- RTGS / NEFT/NACH and E-stamping facility available.
- Lockers facilities available
- Deposit up to Rs.5.00 Lakhs is Guaranteed under the Deposit Insurance Scheme
- Attractive Deposit schemes to the choice of all classes of people
- CLEAN & Secured Financial assistance to MEMBERS of all classes for Legitimate credit needs
- Prompt, Personal & Efficient services always.
- Free Personal Accident Insurance Coverage for Personal Loanees.
- Continuous working hours from 10.00AM to 6.00PM without lunch break

BOARD OF DIRECTORS

Sri. Vijaya Sarathi D.R. - President, Dr. K.M.Rangadhama Setty - Founder & Vice President

CA Venkatachalapathy B.L. | Smt.Mahalakshmi N | Sri.Rudramurthy P | Sri.Maruthi H
Sri.Sathyamurthy S | Smt.Annnapurnamma | Sri.Palanetrappa M C | Smt.Jayalakshmi G Totager
Sri.Lohith G | Sri.Nagabhushan S.A. | Sri.Nanjegowda | Smt.Rachana S
Dr.Raveendra P.K.

Sri.Nagaraja B.R [Ex-GM] Full time Advisor

Sri. K.N.Krishnaiah Setty - I/c General Manager

ರಡ್ಡಿ ಸಹಕಾರ ಬ್ಯಾಂಕ ನಿಯಮಿತ, ಧಾರವಾಡ

ಪ್ರಧಾನ ಕಚೇರಿ : ಬ್ಯಾಂಕ ರೋಡ, ಧಾರವಾಡ-580 001 ಫೋನ್ : 0836-2448118
ನೋಂದಣಿ : 724 - ರಿಜರ್ವ ಬ್ಯಾಂಕ ಲೈಸನ್ಸ್ : ಯುಬಿಡಿ : ಕೆ.ಎನ್.1140 ಪಿ : ಸ್ಥಾಪನೆ : 04-02-1914
website : www.raddibank.com, e-mail : headoffice@raddibank.com, accounts@raddibank.com

ಶಾಖೆಗಳು

ಧಾರವಾಡ, ಹುಬ್ಬಳ್ಳಿ, ಹಾವೇರಿ, ರಾಣೆಬೆನ್ನೂರ, ಗದಗ, ನವಲಗುಂದ, ಅಣ್ಣಿಗೇರಿ, ನರಗುಂದ, ಮುಳಗುಂದ, ಬೆಳಗಾಂವ, ಸವದತ್ತಿ, ರಾಮದುರ್ಗ, ಗೋಕಾಕ, ಯರಗಟ್ಟಿ, ಮೂಡಲಗಿ, ಬಾಗಲಕೋಟ, ಜಮಖಂಡಿ, ಮುಧೋಳ, ಗಲಗಲಿ, ವಿಜಯಪುರ, ಮುದ್ದೇಬಿಹಾಳ, ಚಿತ್ರದುರ್ಗ, ದಾವಣಗೆರೆ, ಹೂವಿನಹಡಗಲಿ, ಕೊಪ್ಪಳ, ಮಹಿಳಾ ವಿಸ್ತೀರ್ಣ ಮುಂಗಟ್ಟೆ ಸರಸ್ವತಪೂರ, ಧಾರವಾಡ.

- 111 ವರ್ಷಗಳ ಸಾರ್ಥಕ ಸಹಕಾರ ರಂಗದ ಸೇವೆ.
- ಶೇರ ಬಂಡವಾಳ ರೂ. 21.55 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಆಪದ್ಧನ ಮತ್ತು ಇತರ ಕಾಯ್ದಿಟ್ಟ ನಿಧಿಗಳು ರೂ, 80.91 ಕೋಟಿ.
- ದುಡಿಯುವ ಬಂಡವಾಳ ರೂ.811.36 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಠೇವಣಿಗಳು ರೂ. 708.91 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಸಾಲ ಹಾಗೂ ಮುಂಗಡಗಳು ರೂ, 423.71 ಕೋಟಿ.
- ಠೇವಣಿಗಳಿಗೆ ಡಿ.ಆಯ್.ಸಿ.ಜಿ.ಸಿ ವಿಮಾ ರಕ್ಷಣೆ ಹೊಂದಿರುತ್ತವೆ.
- ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರ.
- ಹಿರಿಯ ನಾಗರಿಕರಿಗೆ 0.50% ಹೆಚ್ಚಿನ ಬಡ್ಡಿದರ ಸೌಲಭ್ಯ.
- ಸೇಫ್ ಡಿಪಾಜಿಟ್ ಲಾಕರ್‌ಗಳ ಸೌಲಭ್ಯ.
- ಕಡಿಮೆ ಬಡ್ಡಿದರದಲ್ಲಿ ಸಾಲದ ಸೌಲಭ್ಯ.
- ಸಂಪೂರ್ಣ ಗಣಕೀಕೃತ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಸೇವೆ.
- ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಸೌಲಭ್ಯ.
- ನೇರವಾದ ಕ್ಲಿಯರಿಂಗ್ ಸೌಲಭ್ಯ.
- ಆದ್ಯತಾರಂಗ ಮತ್ತು ದುರ್ಬಲ ವರ್ಗದವರಿಗೆ ಸಾಲದ ಸೌಲಭ್ಯ.
- ಎ.ಟಿ.ಎಂ. ಸೌಲಭ್ಯವಿರುತ್ತದೆ.
- ನಿವ್ವಳ ಅನುತ್ಪಾದಕ ಸಾಲ 0.00%.

ಶ್ರೀ ಬಿ.ಎಮ್. ಮುದರಡ್ಡಿ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ಎಸ್.ಎನ್. ನಾಡಗೌಡರ
ಉಪಾಧ್ಯಕ್ಷರು

ಶ್ರೀ ಕೆ.ಎಲ್. ಪಾಟೀಲ
ಅಧ್ಯಕ್ಷರು

ಆಡಳಿತ ಮಂಡಳಿ ನಿರ್ದೇಶಕರು

ಶ್ರೀಯುತ ಎಚ್.ಕೆ. ಪಾಟೀಲ, ಎನ್.ಎಚ್. ಕೋನರಡ್ಡಿ, ವ್ಹಿ.ಡಿ. ಕಾಮರಡ್ಡಿ, ಕೆ.ಬಿ. ನಾಯಿಕ ಎಲ್.ಆರ್. ಉದಪುಡಿ, ಆರ್.ಜಿ. ಬೂದಿಹಾಳ, ಕೆ.ವ್ಹಿ. ಹುಲಕೋಟಿ, ವ್ಹಿ.ಎಚ್. ಬಿದರಿ, ಎಲ್.ವ್ಹಿ. ಸಾವಕಾರ, ವಾಯ್. ಬಿ. ಕರಿಕಟ್ಟಿ. ಪಿ.ವ್ಹಿ. ಚವ್ವಣ್ಣವರ, ಎಚ್.ಎಸ್. ಕೋರಡ್ಡಿ, ಎಸ್.ಆರ್. ಸೋನವಾಲ್ಕರ, ಶ್ರೀಮತಿ ಬಿ.ವ್ಹಿ. ನವಲಗುಂದ, ಶ್ರೀಮತಿ ಎಸ್.ಸಿ. ಹುಚ್ಚಣ್ಣವರ, ಡಿ.ಜಿ. ಜೋಗಣ್ಣವರ್, ಎ.ಎಲ್. ಪೋತ್ನಿಸ್, ಶ್ರೀನಿವಾಸ ದೇವರಡ್ಡಿ.

Growth with Tech

JJIT Fintech Pvt. Ltd
Technology Partner For Banking Services
Since 1997

ABOUT US

JJIT Fintech Pvt. Ltd. specializes in providing innovative banking solutions. With a client base spanning more than 100 cooperative banks across India, JJIT is dedicated to offering comprehensive IT supportto ensure the success of its partners in the banking sector.

CORE BANKING SOLUTION

- More than 25 Years of expereince as Fintech solution provider
- Strong Banking Domain Knowledge
- Large Client Base in Maharashtra and eight other states
- Integration with all Digital Banking Channels
- ISO 9001:2015, ISO 27001:2013 Certified
- 100% Data migration from existing CBS
- Team of professionals with rich expertise in latest technologies and Banking domain
- Partenred with Technology Giants to cater superior Solution
- First CBS vendor to host CBS on Public Cloud
- More than 45 client Banks are hosted on Cloud monitored by JJIT

Most Preferred Module →

RISK BASED INTERNAL AUDIT

- Automated Audit Report
- Scheme wise Rule Definition
- Automated Identification of risk Weight Age
- Automated 3 x 3 Control Matrix
- Automated Calculation of Score

LOAN ORIGINATING SYSTEM

- Work flow management for Loan Processing
- Assessment of all types of Loans
- Dashboard for Decision Making and Review
- Configurable Loan Products/Schemes and related parameters
- Status updates and notifications to stakeholders and Applicants
- Role-based Access control to ensure Data security
- Access to Lawyer and Valuer for Quick Reporting

CONTACT US!

9226052716 9823042282 Pune www.jjit.net

ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ.,

ESTD 1978

ಆಡಳಿತ ಕಛೇರಿ : ಡಾ॥ ಎಸ್. ರಾಧಾಕೃಷ್ಣನ್ ರಸ್ತೆ, ಎಸ್.ಎಸ್.ಪುರಂ, ತುಮಕೂರು-572 102.
ದೂರವಾಣಿ: 0816-2254394, 2254027,
Email: tvcbank@gmail.com Website: www.tvcbltd.com

ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರಗಳು

15 ದಿನಗಳಿಂದ 90 ದಿನಗಳವರೆಗೆ	5.00%
91 ದಿನಗಳಿಂದ 180 ದಿನಗಳವರೆಗೆ	6.00%
181 ದಿನಗಳಿಂದ 1 ವರ್ಷದವರೆಗೆ	6.50%
1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ	7.00%
ಉಳಿತಾಯ ಖಾತೆ	3.00%

15 ಲಕ್ಷ ಮತ್ತು ಮೇಲ್ಪಟ್ಟ ಠೇವಣಿಗಳಿಗೆ
1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ **7.50%**
(ಒಂದೇ ಠೇವಣಿ ರಸೀದಿಗೆ ಮಾತ್ರ)
ಹಿರಿಯ ನಾಗರೀಕರಿಗೆ ಅನ್ವಯಿಸುವುದಿಲ್ಲ

ಹಿರಿಯ ನಾಗರೀಕರಿಗೆ 1 ವರ್ಷ ಮೇಲ್ಪಟ್ಟ ಠೇವಣಿಗಳಿಗೆ ಶೇ. 0.50% ಹೆಚ್ಚುವರಿ ಬಡ್ಡಿ ನೀಡಲಾಗುವುದು.

ಸಾಲಗಳ ಮೇಲಿನ ಬಡ್ಡಿದರಗಳು

ಕಟ್ಟಡಧಾರ ಸಾಲ	8.00%	ಸರಕು ಒತ್ತೆ ಸಾಲ	8.50%
ಗೃಹ ನಿರ್ಮಾಣ ಸಾಲ	8.00%	ಹೊಸ ಮತ್ತು ಸ್ವಂತ ಕಾರುಗಳಿಗೆ (ರೂ. 30 ಲಕ್ಷಗಳ ವರೆಗೆ)	8.25%
ನಿವೇಶನಾಧಾರ ಸಾಲ	11.00%	ಸಂಘ ಸಂಸ್ಥೆ ಮತ್ತು ಶಾಲಾ ಕಾಲೇಜುಗಳಿಗೆ ವಾಹನ ಸಾಲ (ರೂ. 30 ಲಕ್ಷಗಳ ವರೆಗೆ)	9.00%
ಚಿನ್ನಾಭರಣ ಸಾಲ	8.00%	ಎಲೆಕ್ಟ್ರಿಕ್ ಕಾರು ಸಾಲ (ರೂ. 30 ಲಕ್ಷಗಳ ವರೆಗೆ)	8.25%
		ಎಲೆಕ್ಟ್ರಿಕ್ ಬೈಕ್ ಸಾಲ	10.00%

2024-25ನೇ ಸಾಲಿನ ಪ್ರಗತಿಯ ಅಂಕಿ ಅಂಶಗಳು

ಕ್ರ.ಸಂ.	ವಿವರಗಳು	2024-25 Rs in Lakh
01	ಸದಸ್ಯರ ಸಂಖ್ಯೆ	10246
02	ಷೇರು ಬಂಡವಾಳ	1923.64
03	ಠೇವಣಿಗಳು	55884.44
04	ಸಾಲ ಮತ್ತು ಮುಂಗಡಗಳು	37519.05
05	ಒಟ್ಟು ಹೂಡಿಕೆಗಳು	19565.59
06	ನಿವ್ವಳ ಲಾಭ	728.08
07	ನಿವ್ವಳ ಅನುತ್ಪಾದಿತ ಆಸ್ತಿ ಶೇಕಡಾವಾರು	0.0
08	ಸಿ. ಆರ್. ಎ. ಆರ್ . ಶೇಕಡಾವಾರು	23.13%
09	ಆಡಿಟ್ ವರ್ಗೀಕರಣ	"ಎ"

ನಮ್ಮ ಬ್ಯಾಂಕಿಗೆ ಆರ್.ಬಿ.ಐ. ವಿಧಿಸಿದ್ದ ಮೇಲ್ವಿಚಾರಣ ನಿರ್ಬಂಧನೆ SAF (Supervisory Action Framework) ಅನ್ನು ಹಿಂಪಡೆದಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಕಾರ್ಯಕಾರಿ ಮಂಡಳಿ ನಿರ್ದೇಶಕರು

ತುಮಕೂರು ಶಾಖೆಗಳು: ಎಸ್.ಎಸ್.ಪುರಂ ಶಾಖೆ, ಜೆ.ಸಿ. ರಸ್ತೆ ಶಾಖೆ, ಗುಬ್ಬಿ ಶಾಖೆ, ಅಶೋಕನಗರ ಶಾಖೆ, ತಿಪಟೂರು ಶಾಖೆ
ಬೆಂಗಳೂರಿನ ಶಾಖೆಗಳು: ನೆಲಮಂಗಲ ಶಾಖೆ, ಬಸವೇಶ್ವರನಗರ ಶಾಖೆ, ಚಾಮರಾಜಪೇಟೆ ಶಾಖೆ, ನಾಗರಬಾವಿ ಶಾಖೆ

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು

ಶ್ರೀ ಪರಮಶಿವಯ್ಯ ಬಿ.ಎಸ್.
ಉಪಾಧ್ಯಕ್ಷರು

ಶ್ರೀ ಡಿ.ಟಿ. ಪಾಟೀಲ
ನಿರ್ದೇಶಕರು

ಶ್ರೀ ರುದ್ರೇಗೌಡ
ನಿರ್ದೇಶಕರು

ಶ್ರೀ ಅಶೋಕ ಮಲ್ಲಪ್ಪ
ಮನಗೂಳಿ, ನಿರ್ದೇಶಕರು

ಶ್ರೀ ಕೋಗುಂಡಿ ಬಕ್ಕೇಶಪ್ಪ
ನಿರ್ದೇಶಕರು

ಶ್ರೀ ಬಸವರಾಜ ಈಶ್ವರಪ್ಪಾ
ಕಲ್ಯಾಣಶೆಟ್ಟಿ, ನಿರ್ದೇಶಕರು

ಶ್ರೀ ಮಲಕಣ್ಣ ಡಿ. ಪಾಟೀಲ
ನಿರ್ದೇಶಕರು

ಶ್ರೀ ಎಸ್.ಆರ್.ಹರೀಶ್ ಆಚಾರ್
ನಿರ್ದೇಶಕರು

ಶ್ರೀ ಕೃಷ್ಣಮೂರ್ತಿ ಭಂಡಾರಿ
ನಿರ್ದೇಶಕರು

ಶ್ರೀ ರಾಘವ ವಿಷ್ಣು ಬಾಳೇರಿ
ನಿರ್ದೇಶಕರು

ಶ್ರೀ ರಾಜಕುಮಾರ ಬಸವರಾಜ
ಬಾದವಾಡಗಿ, ನಿರ್ದೇಶಕರು

ಶ್ರೀ ಕೋದಂಡರಾಮ ಬಿ.
ನಿರ್ದೇಶಕರು

ಶ್ರೀ ಜನಾರ್ಧನ ಪಿ.
ನಿರ್ದೇಶಕರು

ಡಾ. ಎಂ.ಬಿ. ಮಂಜೇಗೌಡ
ನಿರ್ದೇಶಕರು

ಶ್ರೀಮತಿ ಮಲ್ಲಮ್ಮಾ ಶಿ.
ಯಾಳವಾರ ನಿರ್ದೇಶಕರು

ಶ್ರೀಮತಿ ವೀರಮ್ಮ ಪಿ.
ನಿರ್ದೇಶಕರು

ಶ್ರೀ ಟಿ.ಎಚ್.ಎಂ. ಕುಮಾರ್, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ
ವಿಶೇಷ ಆಹ್ವಾನಿತರು

ಶ್ರೀ ರಘುನಾಥ್ ಸಿ.
ವಿಶೇಷ ಆಹ್ವಾನಿತರು

ಆಡಳಿತ ಮಂಡಳಿ ನಿರ್ದೇಶಕರು

ಶ್ರೀ ಎಸ್.ಬಿ.ಎಂ. ಮಂಜು
ವಿಶೇಷ ಆಹ್ವಾನಿತರು

ಶ್ರೀ ವಿಜಯಾನಂದ ಬಿ. ಹೊಸಕೋಟಿ
ವಿಶೇಷ ಆಹ್ವಾನಿತರು

ಶ್ರೀ ಪುಂಡಲೀಕ ಎನ್. ಕೇರೂರೆ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ಅನೀಲ ಎಚ್. ಕಿರೇಸೂರ
ಉಪ ಮುಖ್ಯಕಾರ್ಯನಿರ್ವಹಣಾಧಿಕಾರಿ

ಶ್ರೀ ಹನುಮಂತಕುಮಾರ್ ಆರ್.
ಅಧೀಕ್ಷಕ (ಪ್ರ)

ಶ್ರೀ ಸುಧಾಕರ ಭಟ್
ಬ್ಯಾಂಕಿಂಗ್ ಸಲಹೆಗಾರರು

ಸಹಕಾರ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು

ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ

ಶ್ರೀ ಚಂದ್ರಮೌಳಿ ಎಸ್.

ಶ್ರೀ ಬಿ.ಎನ್. ಲೋಕೇಶ್

ಶ್ರೀ ಆರ್.ಎಸ್. ಸುಬ್ರಹ್ಮಣ್ಯ

ಶ್ರೀ ಎಂ.ಎಂ. ಮೆಟಗುಡ್ಡ

ಶ್ರೀ ಶರಣಪ್ಪ ಎಸ್. ವಾರದ

ಶ್ರೀ ವಿಕ್ರಮ ಆರ್. ಸಿರೂರ

ಶ್ರೀ ಷಣ್ಮುಖಪ್ಪ ಎಸ್. ಮುಚ್ಚಂಡಿ

ಶ್ರೀ ಪಿ.ಎನ್. ಸುರೇಶ್

ಶ್ರೀ ಎಚ್.ಎಸ್, ನಾಗರಾಜಯ್ಯ

ಶ್ರೀ ಮಹದೇವಸ್ವಾಮಿ

ಶ್ರೀ ಹರೀಶ್ ಕಶ್ಯಪ್

ದಿನಾಂಕ : 29.05.2025 ರಿಂದ ದಿನಾಂಕ : 31.05.2025 ರವರೆಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿಗಳಿಗೆ ಹಾಗೂ ಅಧಿಕಾರಿ ವರ್ಗದವರಿಗೆ ಏರ್ಪಡಿಸಿದ್ದ ಮೂರು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ ಶಿಬಿರವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡರು ಉದ್ಘಾಟಿಸಿದರು. ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ರಘುನಾಥಸಿ., ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಆರ್‌ಐಸಿಎಂನ ನಿರ್ದೇಶಕರಾದ ಶ್ರೀ ಪಿ.ಎನ್. ಸುರೇಶ್, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ಮತ್ತಿತರರು ಉಪಸ್ಥಿತರಿದ್ದರು.

ದಿನಾಂಕ : 24.06.2025 ರಂದು ವಿಜಯಪುರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಮತ್ತು ಶ್ರೀ ರಾಜಕುಮಾರ ಬಸವರಾಜ ಬಾದವಾಡಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್.ಕಿರೇಸೂರ ಉಪಸ್ಥಿತರಿದ್ದರು.

ದಿನಾಂಕ : 23.07.2025ರಂದು ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು ಮತ್ತು ವೃತ್ತಿಪರ ನಿರ್ದೇಶಕರುಗಳು ಹಾಗೂ ಬಿ.ಒ.ಎಂ. ಸದಸ್ಯರುಗಳಿಗೆ ಬೆಂಗಳೂರಿನ ಹೋಟೆಲ್ ಸನ್ಮಾನ್ ಗಾರ್ಡೇನಿಯದಾದಲ್ಲಿ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಹಿರಿಯ ನಿರ್ದೇಶಕರಾದ ಶ್ರೀ ರುದ್ರೇಗೌಡರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ರಘುನಾಥ ಸಿ., ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಎಂ.ಎಂ. ಮೆಟಗುಡ್ಡ, ಮಹಾಮಂಡಳದ ಮಾಜಿ ನಿರ್ದೇಶಕರುಗಳಾದ ಶ್ರೀ ವಿಜಯಕುಮಾರ ಅಂಗಡಿ, ಶ್ರೀ ಎಸ್.ಪಿ. ಶೇಷಾದ್ರಿ, ಶ್ರೀ ಪಿ.ಜಿ. ಉರುಬಿನವರ, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ಉಪಸ್ಥಿತರಿದ್ದರು.

IS : 5244

CM/Licence - 6431259

IAS ACCREDITED Management Systems Certification Body MSCB-215

SAFE Breaker's Nightmare !!!







Manufacturers of :

- Steel Defender Safe
- Steel Safe Deposit Locker Cabinets
- Steel Safe with Safe Deposit Lockers
- Steel Strong Room Doors
- Steel Cash Boxes
- Steel Cabinets &
- Steel Furnitures

Kammar HUBLI

THE MARK OF SECURITY, SAFETY, STRENGTH & DURABILITY

KAMMAR UDYOG

Siddheshwar Compound, Bankapur Chowk, P.B. Road, HUBLI-580 024.

9980524275 | 9620777726

kuhubli@gmail.com

www.kammarudyog.in

“Since eight decades we are sincerely stepping forward to satisfy the needs of our customers in all the walks of life.”